ಗುರುವಾರ, ಮಾರ್ಚ್ 24, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಸಪ್ತಾಹ
ನವದೆಹಲಿಯಲ್ಲಿ ಬುಧವಾರದಿಂದ ಆರಂಭವಾದ ಲಾಕ್ಮೆ ಫ್ಯಾಷನ್ ಸಪ್ತಾಹದಲ್ಲಿ ರೂಪದರ್ಶಿಯರು ಕಾಣಿಸಿಕೊಂಡಿದ್ದು ಹೀಗೆ





28ನೇ ದಿನದ ಬೆಳವಣಿಗೆಗಳು

- ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರದಲ್ಲಿನ ವಿಕಿರಣ ತ್ಯಾಜ್ಯಗಳ ನಿರ್ವಹಣೆಗೆ ಸ್ಥಾಪಿಸಿದ್ದ ಹೊಸ ಪ್ರಯೋಗಾಲಯವನ್ನು ರಷ್ಯಾ ಪಡೆಗಳು ಲೂಟಿ ಮಾಡಿ, ಶೆಲ್ ದಾಳಿಯಿಂದ ನಾಶಪಡಿಸಿವೆ
- ಹಾಸ್ತೊಮೆಲ್ ಮತ್ತು ಇರ್ಪಿನ್ ನಗರಗಳ ಮೇಲೆ ರಷ್ಯಾ ಮಂಗಳವಾರ ನಡು ರಾತ್ರಿ ನಿಷೇಧಿತ ಫಾಸ್ಫರಸ್ ಬಾಂಬ್ ದಾಳಿ ನಡೆಸಿದೆ– ಇರ್ಪಿನ್ ಮೇಯರ್ ಓಲೆಕ್ಸಾಂದರ್ ಮಾರ್ಕುಶಿನ್ ಹೇಳಿಕೆ
- ಸ್ನೇಹಿತವಲ್ಲದ ದೇಶಗಳು ರಷ್ಯಾದ ಇಂಧನ ಖರೀದಿಗೆ ರೂಬಲ್ ಮೂಲಕವೇ ಹಣ ಪಾವತಿಸಬೇಕು, ಈ ಬದಲಾವಣೆ ಒಂದು ವಾರದೊಳಗೆ ಜಾರಿಯಾಗಬೇಕು– ವ್ಲಾಡಿಮಿರ್ ಪುಟಿನ್ ಆದೇಶ
- ರಷ್ಯಾ ಮತ್ತು ಉಕ್ರೇನ್ ನಡುವೆ ಶಾಂತಿ ಮರು ಸ್ಥಾಪಿಸಲು ರಷ್ಯಾ ಅಧ್ಯಕ್ಷ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಜತೆ ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯಲ್ ಮ್ಯಾಕ್ರಾನ್ ಮಾತುಕತೆ ನಡೆಸಿದರು
- ರಷ್ಯಾದ ಯುದ್ಧ ವಿಮಾನಗಳು ಮತ್ತು ಟ್ಯಾಂಕ್‌ಗಳನ್ನು ಹೊಡೆದುರುಳಿಸಲು ಶಸ್ತ್ರಾಸ್ತ್ರಗಳು ಶೀಘ್ರ ಖಾಲಿಯಾಗುತ್ತಿವೆ ಎಂದಿರುವ ಉಕ್ರೇನ್, ಮತ್ತಷ್ಟು ಶಸ್ತ್ರಾಸ್ತ್ರ ಪೂರೈಸುವಂತೆ ಜರ್ಮನಿ ಮತ್ತು ಫ್ರಾನ್ಸ್‌ಗೆ ಮನವಿ ಮಾಡಿದೆ
- ಜಿ–20 ಸದಸ್ಯ ರಾಷ್ಟ್ರಗಳ ಗುಂಪಿನಿಂದ ರಷ್ಯಾವನ್ನು ಹೊರಗೆ ಹಾಕಲು ಕೆಲವು ರಾಷ್ಟ್ರಗಳು ಒತ್ತಾಯಿಸಿವೆ. ಚೀನಾ ಇದಕ್ಕೆ ನಿರಾಕರಿಸಿದೆ
- ಪೋಲೆಂಡ್‌ನಲ್ಲಿ ನಡೆಯಲಿರುವ ನ್ಯಾಟೊ ಸಮ್ಮೇಳನಕ್ಕೆ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ವರ್ಚುವಲ್ ಮೂಲಕ ಭಾಗವಹಿಸಲಿದ್ದಾರೆ
- ರಷ್ಯಾದ ರಾಜತಾಂತ್ರಿಕರನ್ನು ಉಚ್ಚಾಟಿಸುವುದಾಗಿ ಪೋಲೆಂಡ್ ಘೋಷಿಸಿದೆ
- ರಷ್ಯಾದ ಕ್ಷಿಪಣಿ ಕೀವ್ ನಗರದ ಆಹಾರ ಗೋದಾಮನ್ನು ಧ್ವಂಸಗೊಳಿಸಿದೆ
- ಕೀವ್ ನಗರ ಮತ್ತು ಚೆರ್ನಿವ್ ನಡುವಿನ ಪ್ರಮುಖ ಸಂಪರ್ಕ ಸೇತುವೆಯನ್ನು ರಷ್ಯಾ ಪಡೆಗಳು ಸ್ಫೋಟಿಸಿವೆ. ಚೆರ್ನಿವ್‌ನಲ್ಲಿ ವಿದ್ಯುತ್ ಸ್ಥಗಿತವಾಗಿದ್ದು, ನಾಗರಿಕರಿಗೆ ಆಹಾರವೂ ಇಲ್ಲದಂತಾಗಿದೆ

ರಷ್ಯಾದ ಇಂಧನ ಖರೀದಿ ಬಹಿಷ್ಕರಿಸಲು ಜರ್ಮನಿ ನಕಾರ

ಬರ್ಲಿನ್ (ಎಪಿ): ಉಕ್ರೇನ್ ಮೇಲಿನ ಆಕ್ರಮಣದಿಂದಾಗಿ ರಷ್ಯಾದ ಮೇಲೆ ಹಲವು ದೇಶಗಳು ಕಠಿಣ ನಿರ್ಬಂಧ ವಿಧಿಸಿರುವುದರ ಹೊರತಾಗಿಯೂ, ರಷ್ಯಾದಿಂದ ಇಂಧನ ಪೂರೈಕೆಯನ್ನು ಬಹಿಷ್ಕರಿಸಲು ಜರ್ಮನಿಯು ನಿರಾಕರಿಸಿದೆ.

ರಷ್ಯಾದ ಮೇಲೆ ಈಗಾಗಲೇ ಸಾಕಷ್ಟು ನಿರ್ಬಂಧಗಳನ್ನು ಹೇರಲಾಗಿದೆ. ರಷ್ಯಾದ ಅರ್ಥ ವ್ಯವಸ್ಥೆ ಮೇಲೆ ದಿನೇ ದಿನೇ ಪರಿಣಾಮ ಬೀರಿದೆ. ರಷ್ಯಾದಿಂದ ತೈಲೋತ್ಪನ್ನ ಆಮದು ಮಾಡಿಕೊಳ್ಳುವ ವಿಚಾರದಲ್ಲಿ ಜರ್ಮನಿಯ ನಿಲುವಿನಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಜರ್ಮನಿಯ ಛಾನ್ಸಲರ್ ಒಲಾಫ್ ಶೋಲ್ಜ್ ಬುಧವಾರ ತಿಳಿಸಿದರು.

ರಷ್ಯಾದ ತೈಲ, ಕಲ್ಲಿದ್ದಲು ಮತ್ತು ಅನಿಲದ ಮೇಲೆ ಹೆಚ್ಚು ಜರ್ಮನಿಗಿಂತಲೂ ಯುರೋಪಿನ ಇತರ ದೇಶಗಳು ಹೆಚ್ಚು ಅವಲಂಬಿತವಾಗಿವೆ ಎಂದು ಅವರು ಹೇಳಿದರು.

ನಾಲ್ಕು ವಾರ ದಾಟಿದ ಸಮರ, ಕೀವ್ ಸುತ್ತುವರಿಯುವ ಪ್ರಯತ್ನದಲ್ಲೂ ಹಿನ್ನಡೆ ಕಂಡ ರಷ್ಯಾ

ಬೆದರಿಸಿದರೆ ಅಣ್ವಸ್ತ್ರ ದಾಳಿ: ರಷ್ಯಾ ಎಚ್ಚರಿಕೆ


ಪೆಸ್ಕೊವ್

ಕೀವ್ (ಎಎಫ್‌ಪಿ): ಯಾವುದೇ ರಾಷ್ಟ್ರದಿಂದ ಬೆದರಿಕೆ ಎದುರಾದರೆ ಆ ರಾಷ್ಟ್ರದ ವಿರುದ್ಧ ಅಣ್ವಸ್ತ್ರ ಬಳಸದೇ ಇರಲಾಗದು ಎಂದು ರಷ್ಯಾವು ಉಕ್ರೇನ್ ಮತ್ತು ಅದನ್ನು ಬೆಂಬಲಿಸುವ ರಾಷ್ಟ್ರಗಳಿಗೆ ಬುಧವಾರ ಮತ್ತೊಮ್ಮೆ ಎಚ್ಚರಿಕೆ ನೀಡಿದೆ. ಅಲ್ಲದೆ, ಶಾಂತಿ ಮಾತುಕತೆಯನ್ನು ಅಮೆರಿಕ ದುರ್ಬಲಗೊಳಿಸುತ್ತಿದೆ ಎಂದು ಅದು ವಾಗ್ದಾಳಿ ನಡೆಸಿದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಮುಖ್ಯ ವಕ್ತಾರ ಡಿಮಿಟ್ರಿ ಪೆಸ್ಕೊವ್ 'ಸಿಎನ್‌ಎನ್'ಗೆ ನೀಡಿರುವ ಸಂದರ್ಶನದಲ್ಲಿ ಈ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ.

ಉಕ್ರೇನ್‌ನಲ್ಲಿ ನಡೆಸುತ್ತಿರುವ ವಿಶೇಷ ಸೇನಾ ಕಾರ್ಯಾಚರಣೆಯಲ್ಲಿ ರಷ್ಯಾ ಇನ್ನೂ ಗುರಿ ಸಾಧಿಸಿಲ್ಲ ಎನ್ನುವುದನ್ನು ಒಪ್ಪಿಕೊಂಡ ಅವರು, ಈ ಯುದ್ಧದಲ್ಲಿ ರಷ್ಯಾ ಪರಮಾಣು ಶಸ್ತ್ರಾಸ್ತ್ರಗಳ ಮೊರೆ ಹೋಗಬಹುದೆಂಬುದನ್ನು ಮಾತ್ರ ಅಲ್ಲಗಳೆಯಲು ಅವರು ನಿರಾಕರಿಸಿದರು.

ವಿಶೇಷ ಸೇನಾ ಕಾರ್ಯಾಚರಣೆಗೆ ಅನುಮತಿ ನೀಡಿದಾಗಲೇ ಪುಟಿನ್ ಅವರು, 'ರಷ್ಯಾಕ್ಕೆ ಬೆದರಿಕೆ ಒಡ್ಡುವ ರಾಷ್ಟ್ರಗಳ ವಿರುದ್ಧ ಅಣ್ವಸ್ತ್ರ ಬಳಸಲು ಹಿಂಜರಿಯಲ್ಲ. ನಮ್ಮ ದಾರಿಗೆ ಯಾರಾದರೂ ಎದುರು ನಿಲ್ಲಲು ಪ್ರಯತ್ನಿಸಿದರೂ ಅಥವಾ ನಮ್ಮ ದೇಶ ಮತ್ತು ನಮ್ಮ ಜನರಿಗೆ ಬೆದರಿಕೆಗಳನ್ನು ಹಾಕಿದರೂ ರಷ್ಯಾದ ತಕ್ಷಣದ ಪ್ರತಿಕ್ರಿಯೆ ಹೇಗಿರಲಿದೆ ಎಂದರೆ ನಿಮ್ಮ ಇಡೀ ಇತಿಹಾಸದಲ್ಲಿ ನೀವು ಕಂಡರಿಯದ ಪರಿಣಾಮದ್ದಾಗಿರುತ್ತದೆ' ಎಂದು ರಷ್ಯಾ ಎದುರು ನಿಲ್ಲುವ ರಾಷ್ಟ್ರಗಳಿಗೆ ಕಠಿಣ ಎಚ್ಚರಿಕೆ ಕೊಟ್ಟಿದ್ದರು.


ಉಕ್ರೇನ್‌ನ ರಾಜಧಾನಿ ಕೀವ್ ಸಮೀಪದ ಶೆವ್‌ಚೆಂಕಿವ್‌ಸ್ಕಿ ಜಿಲ್ಲೆಯಲ್ಲಿ ರಷ್ಯಾದ ರಾಕೆಟ್ ದಾಳಿಯಿಂದ ಹೊತ್ತಿ ಉರಿದ ಮನೆಯೊಂದರಲ್ಲಿ ಅಗ್ನಿಶಾಮಕ ದಳದವರು ಬೆಂಕಿ ನಂದಿಸಲು ಪ್ರಯತ್ನಿಸಿದರು –ಎಎಫ್‌ಪಿ ಚಿತ್ರ

ರಷ್ಯಾದ ರಕ್ಷಣಾ ಅಧಿಕಾರಿಗಳೊಂದಿಗೆ ವರ್ಚುವಲ್ ಸಭೆ ನಡೆಸಿದ ಪೆಸ್ಕೊವ್, 'ನ್ಯಾಟೊ ರಾಷ್ಟ್ರಗಳ ಅಧಿಕಾರಿಗಳು ನಮ್ಮ ದೇಶದ ಬಗ್ಗೆ ಆಕ್ರಮಣಕಾರಿ ಹೇಳಿಕೆಗಳನ್ನು ನೀಡಲು ಅವಕಾಶ ಕಲ್ಪಿಸಿದ್ದಾರೆ. ಹಾಗಾಗಿ ರಕ್ಷಣಾ ಸಚಿವರು ಮತ್ತು ಸೇನಾಪಡೆಗಳ ಮುಖ್ಯಸ್ಥರಿಗೆ ರಷ್ಯಾದ ಸೇನೆಯ ಪ್ರತಿರೋಧ ಪಡೆಗಳನ್ನು ಸನ್ನದ್ಧವಾಗಿರಿಸಲು ಆದೇಶಿಸಿದ್ದೇವೆ' ಎಂದರು.

ಉಕ್ರೇನ್ ಮೇಲಿನ ಸೇನಾ ಕಾರ್ಯಾಚರಣೆಯಲ್ಲಿ ಈವರೆಗೆ ಪುಟಿನ್ ಏನನ್ನು ಸಾಧಿಸಿದ್ದಾರೆ ಎನ್ನುವ ಪ್ರಶ್ನೆಗೆ 'ಹೌದು, ಮೊದಲನೆಯದಾಗಿ ಇನ್ನೂ ಏನನ್ನೂ ಸಾಧಿಸಿಲ್ಲ. ಆದರೆ, ನಮ್ಮ ಉದ್ದೇಶಗಳಿಗೆ ಅನುಗುಣವಾಗಿ ಯೋಜನೆಗಳು ಸರಿಯಾದ ದಿಕ್ಕಿನಲ್ಲೇ ಸಾಗಿವೆ' ಎಂದು ಹೇಳಿದರು. ಈ ಹೇಳಿಕೆಗೆ ಪುಷ್ಟಿ ಎಂಬಂತೆ, ಉಕ್ರೇನ್ ರಾಜಧಾನಿ ಕೀವ್ ನಗರವನ್ನು ವಶಪಡಿಸಿಕೊಳ್ಳುವ ರಷ್ಯಾದ ಬಯಕೆ ಈಡೇರಿಲ್ಲ, ಮಾತ್ರವಲ್ಲದೆ, ಕೀವ್‌ಗೆ ಮುತ್ತಿಗೆ ಹಾಕುವ ಪ್ರಯತ್ನಕ್ಕೂ ಯಶಸ್ಸು ದೊರೆತಿಲ್ಲ.

ಅಮೆರಿಕ ಉಕ್ರೇನ್ ಕೈಕಟ್ಟಿ ಹಾಕಿದೆ: 'ಸಂಘರ್ಷ ಶಮನದ ಮಾತು ಕತೆ ಕಠಿಣವಾಗಿದೆ. ಉಕ್ರೇನ್ ನಿರಂತರ ತನ್ನ ನಿಲುವು ಬದಲಾಯಿಸುತ್ತಿದೆ ಮಾತುಕತೆಗೆ ಒಪ್ಪಿಕೊಳ್ಳದಂತೆ ಉಕ್ರೇನನ್ನು ಅಮೆರಿಕ ತಡೆಯುತ್ತಿರುವುದು ಸ್ಪಷ್ಟ. ನಮ್ಮನ್ನು ಸಾಧ್ಯವಾದಷ್ಟು ಸೇನಾ ಕಾರ್ಯಾಚರಣೆಯಲ್ಲೇ ಮುಂದುವರಿಸುವುದು ಅಮೆರಿಕದ ಬಯಕೆ' ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಬುಧವಾರ ಕಿಡಿಕಾರಿದರು.

> **ರಷ್ಯಾದ ಪೈಲಟ್‌ಗಳಿಗಿಂತಲೂ ರಷ್ಯಾ ಟಿ.ವಿ ಸುದ್ದಿ ನಿರೂಪಕರು ಅಪಾಯಕಾರಿ. ಪೈಲಟ್‌ಗಳು ಗುಂಡು ಹಾರಿಸಬಹುದು. ಆದರೆ, ಅವರು ಅಣು ದಾಳಿಗೆ ಪ್ರಚೋದಿಸಿ ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಾರೆ**
> **ಡಿಮಿಟ್ರೊ ಕುಲೆಬಾ**
> ಉಕ್ರೇನ್ ವಿದೇಶಾಂಗ ಸಚಿವ

ಅಮೆರಿಕ ಟೀಕೆ: ರಷ್ಯಾದ ಅಣ್ವಸ್ತ್ರ ದಾಳಿಯ ಅಪಾಯಕಾರಿ ಹೇಳಿಕೆಯನ್ನು ಅಮೆರಿಕ ವಕ್ತಾರ ಜಾನ್ ಕಿರ್ಬಿ ಖಂಡಿಸಿದ್ದಾರೆ. ಉಕ್ರೇನ್ ನೆಲದಲ್ಲಿ ರಷ್ಯಾ ನಡೆಸುತ್ತಿರುವ ಯುದ್ಧಾಪರಾಧಗಳಲ್ಲಿ ರಾಸಾಯನಿಕ ಮತ್ತು ಜೈವಿಕ ಶಸ್ತ್ರಾಸ್ತ್ರಗಳೂ ಬಳಕೆಯಾಗಬಹುದೆಂದು ಅಮೆರಿಕ ಅಧ್ಯಕ್ಷ ಬೈಡನ್ ಎಚ್ಚರಿಸಿರುವುದನ್ನು ಅವರು ನೆನಪಿಸಿದರು.

ಹಸಿವಿನಲ್ಲಿ ಒಂದು ಲಕ್ಷ ನಾಗರಿಕರು

ರಷ್ಯಾ ಪಡೆಗಳು ಪ್ರಮುಖ ಕಾರ್ಯತಂತ್ರದ ಬಂದರು ನಗರ ಮರಿಯುಪೋಲ್ ಮೇಲೆ ಬುಧವಾರ ಕೂಡ ನಿರಂತರ ಬಾಂಬ್ ಮತ್ತು ಶೆಲ್ ದಾಳಿ ನಡೆಸಿವೆ. ಈ ನಗರದಲ್ಲಿ ಸಿಲುಕಿಕೊಂಡಿರುವ ಸುಮಾರು ಒಂದು ಲಕ್ಷ ಜನರು ಅಮಾನವೀಯ ಪರಿಸ್ಥಿತಿಯಲ್ಲಿದ್ದಾರೆ. ಹಲವು ಜನರು ಹಸಿವಿನಿಂದ ನರಳುತ್ತಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಆರೋಪಿಸಿದರು.

ಅಜೊವಾ ಸಮುದ್ರದಲ್ಲಿ ಬೀಡುಬಿಟ್ಟಿರುವ ರಷ್ಯಾದ ಏಳು ಸಮರ ನೌಕೆಗಳು ಮರಿಯುಪೋಲ್ ನಗರವನ್ನೇ ಗುರಿಯಾಗಿಸಿಕೊಂಡು ಕ್ಷಿಪಣಿ, ಶೆಲ್ ದಾಳಿ ನಡೆಸುತ್ತಿವೆ.

ಶರಣಾಗತಿಯನ್ನು ತಿರಸ್ಕರಿಸಿದ ಬೆನ್ನಲ್ಲೇ ರಷ್ಯಾ ಪಡೆಗಳು ಮರಿಯುಪೋಲ್ ನಗರದ ಮೇಲೆ ರಷ್ಯಾ ಪಡೆಗಳು ಭೀಕರ ದಾಳಿಗಿಳಿದಿವೆ. ಜನರಿಗೆ ಆಹಾರ, ನೀರು, ಔಷಧ ಸಿಗದಂತೆ ಮಾಡಿವೆ ಎಂದು ಉಕ್ರೇನ್ ಸೇನೆ ಹೇಳಿದೆ.

ನ್ಯಾಟೊ ನಿಯೋಜನೆ ಹೆಚ್ಚಳ ಸಾಧ್ಯತೆ

ಬ್ರಸೆಲ್ಸ್ (ಎಎಫ್‌ಪಿ): ರಷ್ಯಾದಿಂದ ಭೀಕರ ದಾಳಿ ಎದುರಿಸುತ್ತಿರುವ ಉಕ್ರೇನ್‌ಗೆ ನೆರವಾಗುವ ಉದ್ದೇಶದಿಂದ, ಪೂರ್ವ ಭಾಗದ ನ್ಯಾಟೊ ಸದಸ್ಯ ದೇಶಗಳಿಗೆ ಇನ್ನಷ್ಟು ಪಡೆಗಳನ್ನು ಕಳುಹಿಸಲು ಸಿದ್ಧತೆ ನಡೆಯುತ್ತಿದೆ. ಸೇನಾ ನಿಯೋಜನೆ ಹೆಚ್ಚಿಸುವ ಕುರಿತು ಗುರುವಾರ ತುರ್ತು ಸಭೆ ನಡೆಯಲಿದೆ ಎಂದು ನ್ಯಾಟೊಪಡೆಗಳ ಮುಖ್ಯಸ್ಥ ಜೆನ್ಸ್ ಸ್ಟೋಲ್ಟೆನ್‌ಬರ್ಗ್ ಹೇಳಿದ್ದಾರೆ.

ಪೂರ್ವಭಾಗದ ನ್ಯಾಟೊ ಸದಸ್ಯ ದೇಶಗಳಾದ ಬಲ್ಗೇರಿಯಾ, ಹಂಗೆರಿ, ರೊಮೇನಿಯಾ ಹಾಗೂ ಸ್ಲೊವಾಕಿಯಾಗಳಿಗೆ ನಾಲ್ಕು ಸಮರ ಪಡೆಗಳನ್ನು ಕಳುಹಿಸುವ ಸಂಬಂಧ ಗುರುವಾರ ಸಹಿ ಬೀಳುವ ಸಾಧ್ಯತೆಯಿದೆ ಎಂದು ಅವರು ಹೇಳಿದ್ದಾರೆ. ನ್ಯಾಟೊ ಪಡೆಯ ಸಾವಿರಾರು ಸೈನಿಕರನ್ನು ರಷ್ಯಾದ ಗಡಿಗಳಿಗೆ ಈಗಾಗಲೇ ಕಳುಹಿಸಲಾಗಿದೆ. ನಾಲ್ಕು ವಾರಗಳ ಯುದ್ಧದಲ್ಲಿ ರಷ್ಯಾದ 7 ಸಾವಿರದಿಂದ 15 ಸಾವಿರ ಸೈನಿಕರು ಮೃತಪಟ್ಟಿದ್ದಾರೆ ಎಂದು ನ್ಯಾಟೊ ಬುಧವಾರ ಹೇಳಿದೆ.

'ಘಟನಾ ಸ್ಥಳದ ಮಾದರಿ ತಕ್ಷಣ ಸಂಗ್ರಹಿಸಿ'

ಬಿರ್‌ಭೂಮ್ ಸಜೀವ ದಹನ ಪ್ರಕರಣ: ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಲ್ಕತ್ತ ಹೈಕೋರ್ಟ್ ಸೂಚನೆ

ಕೋಲ್ಕತ್ತ (ಪಿಟಿಐ): 'ರಾಜ್ಯದ ಬಿರ್‌ಭೂಮ್ ಜಿಲ್ಲೆಯ ರಾಮ್‌ಪುರಹಾಟ್ ಸಮೀಪದ ಬೋಗ್ತಿ ಗ್ರಾಮದಲ್ಲಿ 8 ಜನರನ್ನು ಸಜೀವವಾಗಿ ದಹನ ಮಾಡಿದ ಘಟನಾ ಸ್ಥಳದಲ್ಲಿನ ಮಾದರಿಗಳನ್ನು, ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಲು ತಕ್ಷಣವೇ ಸಂಗ್ರಹಿಸಿ' ಎಂದು ಕಲ್ಕತ್ತ ಹೈಕೋರ್ಟ್ ದೆಹಲಿಯ ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲಕ್ಕೆ (ಸಿಎಫ್‌ಎಸ್‌ಎಲ್) ಸೂಚನೆ ನೀಡಿದೆ.

ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ಅಥವಾ ರಾಷ್ಟ್ರೀಯ ತನಿಖಾ ಸಂಸ್ಥೆಗೆ ಒಪ್ಪಿಸಬೇಕು ಎಂದು ಸಲ್ಲಿಸಲಾಗಿದ್ದ ಅರ್ಜಿಗಳನ್ನು ಹೈಕೋರ್ಟ್ ವಜಾ ಮಾಡಿದೆ. ಬದಲಿಗೆ ಪ್ರಕರಣಕ್ಕೆ ಸಂಬಂಧಿಸಿ ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸಿಕೊಂಡಿದೆ. 'ಘಟನಾ ಸ್ಥಳದಲ್ಲಿ ತಕ್ಷಣವೇ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಿ. ಮುಂದಿನ ಆದೇಶದ ವರೆಗೂ ಅವು ಅಲ್ಲಿ ಕಾರ್ಯನಿರ್ವಹಿಸಬೇಕು' ಎಂದು ಮುಖ್ಯ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ಅವರಿದ್ದ ಪೀಠವು ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ.

'ಈ ಪ್ರಕರಣದಲ್ಲಿ ಸಾಕ್ಷಿಗಳಾಗಿರುವವರಿಗೆ ಅಗತ್ಯ ರಕ್ಷಣೆ ನೀಡಬೇಕು. ಅವರಿಗೆ ಏನೂ ಆಗದಂತೆ ಎಚ್ಚರವಹಿಸಬೇಕು. ಬೆಂಕಿಯಲ್ಲಿ ಸ್ವಲ್ಪ ಗಾಯಗಳಿಂದ ಬದುಕುಳಿದಿರುವ ಬಾಲಕನಿಗೆ ಬಿಗಿ ಭದ್ರತೆ ನೀಡಬೇಕು. ಇದಕ್ಕಾಗಿ ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಜಿಲ್ಲಾ ಮ್ಯಾಜಿಸ್ಟ್ರೇಟ್ ಜತೆಗೆ ಸಮಾಲೋಚನೆ ನಡೆಸಿ ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದು ಪೀಠವು ಆದೇಶಿಸಿದೆ.

ಪ್ರಕರಣದ ಮುಂದಿನ ವಿಚಾರಣೆ ಗುರುವಾರ ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿದೆ. ಅದಕ್ಕೂ ಮುನ್ನವೇ ರಾಜ್ಯ ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿಯನ್ನು ಸಲ್ಲಿಸಬೇಕು ಎಂದು ಪೀಠವು ಆದೇಶಿಸಿದೆ.

ಪ್ರತಿಭಟನೆ: ಈ ಪ್ರಕರಣವನ್ನು ಖಂಡಿಸಿ ರಾಜ್ಯದ ಹಲವೆಡೆ ವಿದ್ಯಾರ್ಥಿಗಳು ಮತ್ತು ಹಲವು ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ನಡೆಸಿವೆ. ರಾಮ್‌ಪುರಹಾಟ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದ್ದಾರೆ.

> **ಈ ಕೃತ್ಯದಲ್ಲಿ ತಪ್ಪಿತಸ್ಥರನ್ನು ಕ್ಷಮಿಸಲು ಸಾಧ್ಯವಿಲ್ಲ. ಅವರನ್ನು ಹಿಡಿದು ಶಿಕ್ಷಿಸಲು, ಸಂತ್ರಸ್ತರಿಗೆ ನ್ಯಾಯ ಒದಗಿಸಲು ರಾಜ್ಯ ಸರ್ಕಾರಕ್ಕೆ ಎಲ್ಲಾ ರೀತಿಯ ನೆರವು ನೀಡುತ್ತೇವೆ**
> **ನರೇಂದ್ರ ಮೋದಿ,** ಪ್ರಧಾನಿ

ಮಮತಾಗೆ ರಾಜ್ಯಪಾಲರ ಪತ್ರ, ಟೀಕೆ

ಕೋಲ್ಕತ್ತ (ಪಿಟಿಐ): 'ರಾಜ್ಯದಲ್ಲಿ ಇಂತಹ ಅಹಿತಕರ ಘಟನೆಗಳು ನಡೆಯುವಾಗ ರಾಜಭವನವು ಮೂಕಪ್ರೇಕ್ಷಕವಾಗಿ ಕೂರುವುದಿಲ್ಲ' ಎಂದು ಪಶ್ಚಿಮ ಬಂಗಾಳ ರಾಜ್ಯಪಾಲ ಜಗದೀಪ್ ಧನಕರ್ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ಪತ್ರ ಬರೆದಿದ್ದಾರೆ.

ಈ ಘಟನೆಗೆ ಸಂಬಂಧಿಸಿದಂತೆ ರಾಜ್ಯಪಾಲರು ಪ್ರತಿಕ್ರಿಯಿಸಬೇಕಿರಲಿಲ್ಲ ಎಂದು ಮಮತಾ ಬ್ಯಾನರ್ಜಿ ಅವರು ಮಂಗಳವಾರ ರಾತ್ರಿ ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯೆಯಾಗಿ, ರಾಜ್ಯಪಾಲರು ಬುಧವಾರ ಬೆಳಿಗ್ಗೆ ಈ ಪತ್ರ ಬರೆದಿದ್ದಾರೆ. ಪತ್ರದ ಚಿತ್ರವನ್ನು ಅವರು ಟ್ವೀಟ್ ಮಾಡಿದ್ದಾರೆ.

'ಅಲ್ಲಲ್ಲಿ ಕೆಲವು ಘಟನೆಗಳನ್ನು ಹೊರತುಪಡಿಸಿದರೆ, ರಾಜ್ಯವು ಶಾಂತಿಯುತವಾಗಿದೆ ಎಂದು ನೀವು ನೀಡಿರುವ ಹೇಳಿಕೆಯು ಹಾಸ್ಯಾಸ್ಪದವಾಗಿದೆ. ರಾಜ್ಯದಲ್ಲಿ ನಡೆದ ಚುನಾವಣೋತ್ತರ ಹಿಂಸಾಚಾರದ ತನಿಖೆಯ ವೇಳೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು, 'ಇಲ್ಲಿ ಕಾನೂನಿನ ಆಳ್ವಿಕೆ ಇಲ್ಲ. ಬದಲಿಗೆ ಆಳುವವರ ಕಾನೂನು ಇದೆ' ಎಂದು ಹೇಳಿತ್ತು. ಇದು ರಾಜ್ಯದಲ್ಲಿನ ವಾಸ್ತವ ಸ್ಥಿತಿಯ ಬಹಿರಂಗ ರಹಸ್ಯ' ಎಂದು ಧನಕರ್ ಅವರು ಟೀಕಿಸಿದ್ದಾರೆ.

'8 ಜನರ ಹತ್ಯೆ ನಡೆದಿದೆ ಎನ್ನಲಾಗಿದೆ. ಆದರೆ ಸತ್ತವರ ಸಂಖ್ಯೆ ಇದಕ್ಕಿಂತಲೂ ಹೆಚ್ಚು ಎಂದು ಹಲವು ವರದಿಗಳು ಹೇಳಿವೆ' ಎಂದು ಅವರು ಹೇಳಿದ್ದಾರೆ.

'ರಾಜ್ಯದ ಹೆಸರಿಗೆ ಮಸಿ ಬಳಿಯಲು ದೊಡ್ಡ ಮಟ್ಟದ ಸಂಚು ನಡೆಸಲಾಗಿದೆ ಎಂದು ನೀವು ನೀಡಿರುವ ಹೇಳಿಕೆಯಲ್ಲಿ ಯಾವುದೇ ಸತ್ಯಾಂಶವಿಲ್ಲ. ತಪ್ಪಿತಸ್ಥರನ್ನು ಹಿಡಿದು ಶಿಕ್ಷಿಸುತ್ತೇವೆ ಎಂದು ನೀವು ನೀಡಿರುವ ಭರವಸೆಯು ಸತ್ಯಕ್ಕೆ ದೂರವಾದುದು. ಪ್ರಕರಣದ ತನಿಖೆಗೆ ನೀವು ರಚಿಸಿರುವ ಎಸ್‌ಐಟಿಯ ಮುಖ್ಯಸ್ಥರಾಗಿರುವ ಗ್ಯಾನಾವಂತ್ ಸಿಂಗ್ ಅವರ ವಿರುದ್ಧ, ನ್ಯಾಯಾಂಗಕ್ಕೆ ಅಪಚಾರ ಎಸಗಿದ ಆರೋಪವಿದೆಯಲ್ಲವೇ? ಅವರು ನಡೆಸುವ ತನಿಖೆ 'ಸತ್ಯವನ್ನು ಮುಚ್ಚಿಡುವ ಕಾರ್ಯಾಚರಣೆ' ಅಷ್ಟೆ. ತಪ್ಪಿತಸ್ಥರು ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿದೆ. ಹೀಗಾಗಿ ಇದು ಸರಿಯಾದ ತನಿಖೆಯಲ್ಲ' ಎಂದು ಧನಕರ್ ಟೀಕಿಸಿದ್ದಾರೆ.

'ಮುಖ್ಯಮಂತ್ರಿ ತಮ್ಮನ್ನು ತಾವು ಪ್ರಜಾಪ್ರಭುತ್ವದ ರಕ್ಷಕಿ ಎಂದು ಕರೆದುಕೊಳ್ಳುತ್ತಾರೆ. ಆ ಪ್ರಕಾರ ಅವರು ಕನಿಷ್ಠ ಕ್ರಮ ತೆಗದುಕೊಂಡರೂ ಇವೆಲ್ಲಾ ನಿಲ್ಲುತ್ತವೆ' ಎಂದು ಅವರು ಆಗ್ರಹಿಸಿದ್ದಾರೆ.


ರಾಮ್‌ಪುರಹಾಟ್‌ನಲ್ಲಿ 8 ಮಂದಿಯ ಸಜೀವ ದಹನ ಖಂಡಿಸಿ ವಿದ್ಯಾರ್ಥಿಗಳು ಬುಧವಾರ ಕೋಲ್ಕತ್ತದಲ್ಲಿ ಪ್ರತಿಭಟನೆ ನಡೆಸಿದರು. ಜತೆಗೆ ಆರೋಪಿಗಳ ಪ್ರತಿಕೃತಿಯನ್ನು ದಹಿಸಿದರು –ಪಿಟಿಐ ಚಿತ್ರ

> **ಬಿಹಾರ, ಉತ್ತರ ಪ್ರದೇಶ ಮತ್ತು ಗುಜರಾತ್‌ನಲ್ಲಿ ಇಂತಹ ಘಟನೆಗಳು ಮರುಕಳಿಸುತ್ತಲೇ ಇರುತ್ತವೆ. ಈ ಬಗ್ಗೆ ರಾಜ್ಯಪಾಲರು ಒಂದು ಮಾತೂ ಆಡುವುದಿಲ್ಲ**
> **ಮಮತಾ ಬ್ಯಾನರ್ಜಿ**
> ಪಶ್ಚಿಮ ಬಂಗಾಳ ಮುಖ್ಯಮಂತ್ರಿ

> **ಪಶ್ಚಿಮ ಬಂಗಾಳ ಹೊರತು ಪಡಿಸಿ ಬೇರೆ ಯಾವ ರಾಜ್ಯದಲ್ಲೂ ಚುನಾವಣೋತ್ತರ ಹಿಂಸಾಚಾರ ನಡೆದಿಲ್ಲ. ಜತೆಗೆ ನನ್ನ ಅಧಿಕಾರದ ವ್ಯಾಪ್ತಿ ಪಶ್ಚಿಮ ಬಂಗಾಳ ಮಾತ್ರ**
> **ಜಗದೀಪ್ ಧನಕರ್**
> ಪಶ್ಚಿಮ ಬಂಗಾಳ ರಾಜ್ಯಪಾಲ

> **ಅಲ್ಲಿ ಮತ್ತಷ್ಟು ಜನರನ್ನು ಕೊಲ್ಲಲಾಗಿದೆ. ಸತ್ತಿರುವವರ ಸಂಖ್ಯೆ 8ಕ್ಕಿಂತ ಹೆಚ್ಚು. ಅಲ್ಲಿಗೆ ಭೇಟಿ ನೀಡಲು ಯಾರಿಗೂ ಅವಕಾಶವಿಲ್ಲ. ಹೀಗಾಗಿ ನಿಖರ ಸಂಖ್ಯೆ ಗೊತ್ತಿಲ್ಲ**
> **ಲಾಕೆಟ್ ಚಟರ್ಜಿ**
> ಬಿಜೆಪಿ ನಾಯಕಿ

ನಿಯೋಗ ಭೇಟಿಗೆ ತಡೆ: ಬಿಜೆಪಿ ಆರೋಪ

ಕೋಲ್ಕತ್ತ (ಪಿಟಿಐ): ರಾಮ್‌ಪುರಹಾಟ್ ಘಟನಾ ಸ್ಥಳಕ್ಕೆ ಭೇಟಿ ನೀಡಲು ಬಂದಿದ್ದ ಬಿಜೆಪಿ ನಿಯೋಗವನ್ನು ತಡೆಯಲಾಗಿದೆ. 'ಸ್ಥಳಕ್ಕೆ ಹೋಗಲು ನಮಗೆ ಅವಕಾಶ ನೀಡಲಿಲ್ಲ. ರಾಜ್ಯದ ಗೃಹಮಂತ್ರಿಯೂ ಆಗಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಈ ಪ್ರಕರಣದಲ್ಲಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು' ಎಂದು ರಾಜ್ಯ ಬಿಜೆಪಿ ಘಟಕ ಒತ್ತಾಯಿಸಿದೆ.

'ಗೃಹಮಂತ್ರಿಯಾಗಿ ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ಮಮತಾ ಬ್ಯಾನರ್ಜಿ ಅವರು ವಿಫಲರಾಗಿದ್ದಾರೆ. ಹೀಗಾಗಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಆಗ್ರಹಿಸಿದ್ದಾರೆ.

'ಬಿಜೆಪಿ, ಎಡಪಕ್ಷಗಳು ಮತ್ತು ಕಾಂಗ್ರೆಸ್ ನಿಯೋಗಗಳು ರಾಮ್‌ಪುರಹಾಟ್‌ಗೆ ಬುಧವಾರ ಭೇಟಿ ನೀಡುತ್ತಿವೆ. ಅವರನ್ನು ನಾವು ತಡೆಯುವುದಿಲ್ಲ. ಹಾಗೆ ತಡೆಯಲು ಇದು ಉತ್ತರ ಪ್ರದೇಶವಲ್ಲ. ನಾನು ಗುರುವಾರ ಅಲ್ಲಿಗೆ ಭೇಟಿ ನೀಡುತ್ತೇನೆ' ಎಂದು ಮಮತಾ ಬ್ಯಾನರ್ಜಿ ಬುಧವಾರ ಮಧ್ಯಾಹ್ನವಷ್ಟೇ ಹೇಳಿದ್ದರು. ಇದರ ಬೆನ್ನಲ್ಲೇ ಬಿಜೆಪಿ ನಾಯಕರು ಈ ಆರೋಪ ಮಾಡಿದ್ದಾರೆ. ಎಡಪಕ್ಷಗಳು ಮತ್ತು ಕಾಂಗ್ರೆಸ್ ನಾಯಕರ ನಿಯೋಗವು ಘಟನಾ ಸ್ಥಳಕ್ಕೆ ಭೇಟಿ ನೀಡಿವೆ.

ಸಿಹಿ ತಿಂದ ಸದಸ್ಯರು: ರಾಮ್‌ಪುರಹಾಟ್‌ಗೆ ಭೇಟಿ ನೀಡಲು ಹೊರಟಿದ್ದ ಬಿಜೆಪಿ ನಿಯೋಗದ ಸದಸ್ಯರು, ಹಾದಿ ಮಧ್ಯೆಯಲ್ಲಿ ಸಿಹಿತಿನಿಸು ತಿಂದಿದ್ದಾರೆ.

ಮುಸ್ಲಿಮರ ವಿರುದ್ಧದ ವ್ಯವಸ್ಥಿತ ದಾಳಿ: ಪತ್ರಕರ್ತರ ಖಂಡನೆ

ನವದೆಹಲಿ (ಪಿಟಿಐ): ಭಾರತದ ಅಲ್ಪಸಂಖ್ಯಾತರು, ಅದರಲ್ಲೂ ಮುಸ್ಲಿಮರ ಮೇಲೆ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ವ್ಯವಸ್ಥಿತ 'ದಾಳಿ'ಗಳ ವಿಚಾರದಲ್ಲಿ ತಕ್ಷಣವೇ ಮಧ್ಯಪ್ರವೇಶಿಸಬೇಕು ಎಂದು ಸಾಂವಿಧಾನಿಕ ಸಂಸ್ಥೆಗಳ ಮುಖ್ಯಸ್ಥರಿಗೆ ದೇಶದ ಪ್ರಮುಖ ಪತ್ರಕರ್ತರು ಬಹಿರಂಗ ಪತ್ರದ ಮೂಲಕ ಮನವಿ ಮಾಡಿದ್ದಾರೆ. 'ಹಿಂದುತ್ವವು ಅಪಾಯದಲ್ಲಿದೆ', 'ಮುಸ್ಲಿಮರು ದೇಶಕ್ಕೆ ಬೆದರಿಕೆಯಾಗಿದ್ದಾರೆ' ಎಂದು ದೇಶದಾದ್ಯಂತ ಬಿಂಬಿಸುವ ಯತ್ನ ನಡೆಯುತ್ತಿದೆ ಎಂದು 28 ಹಿರಿಯ ಪತ್ರಕರ್ತರ ಸಹಿಯುಳ್ಳ ಪತ್ರದಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಮುಸ್ಲಿಂ ವಿರೋಧಿ ಭಾವನೆಗಳನ್ನು ಉತ್ತೇಜಿಸುವ 'ದಿ ಕಾಶ್ಮೀರ್ ಫೈಲ್ಸ್', ಚಿತ್ರ ಪ್ರದರ್ಶನ; ಕರ್ನಾಟಕದಲ್ಲಿ ಹಿಜಾಬ್ ವಿವಾದ; 'ಬುಲ್ಲಿಬಾಯ್' ಆ್ಯಪ್ ಸೇರಿ ಹಲವು ವಿಧದಲ್ಲಿ ಮುಸ್ಲಿಂ ಮಹಿಳೆಯರನ್ನು ಗುರಿಯಾಗಿಸುವ ಯತ್ನ ನಡೆಯುತ್ತಿವೆ. ಈ ಬಗ್ಗೆ ರಾಷ್ಟ್ರಪತಿ, ಸುಪ್ರೀಂ ಕೋರ್ಟ್, ವಿವಿಧ ಹೈಕೋರ್ಟ್‌ಗಳ ನ್ಯಾಯಮೂರ್ತಿಗಳು, ಚುನಾವಣಾ ಆಯೋಗ ಮತ್ತು ಇತರೆ ಸಾಂವಿಧಾನಿಕ ಸಂಸ್ಥೆಗಳು ಮಧ್ಯಪ್ರವೇಶಿಸಬೇಕು ಎಂದು ಮನವಿ ಮಾಡಲಾಗಿದೆ.

'ಈ ಎಲ್ಲ ಘಟನೆಗಳನ್ನು ಒಟ್ಟಿಗೆ ಪರಿಗಣಿಸಿದಾಗ, ಹಿಂದುತ್ವವು ಅಪಾಯದಲ್ಲಿದೆ ಎಂಬ ಭಾವನೆಯನ್ನು ದೇಶದಾದ್ಯಂತ ಬಿಂಬಿಸುವ ಉನ್ಮಾದ ಕಂಡುಬರುತ್ತಿದೆ. ಈ ಮೂಲಕ ಹಿಂದೂಗಳು ಹಾಗೂ ಭಾರತೀಯರಿಗೆ ಭಾರತದಲ್ಲಿರುವ ಮುಸ್ಲಿಮರು ಬೆದರಿಕೆಯಾಗಿದ್ದಾರೆ ಎಂಬಂತೆ ಚಿತ್ರಿಸಲಾಗುತ್ತಿದೆ. ನಮ್ಮ ಸಾಂವಿಧಾನಿಕ, ಶಾಸನಬದ್ಧ ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳು ತಕ್ಷಣವೇ ಮತ್ತು ಪರಿಣಾಮಕಾರಿಯಾಗಿ ಕ್ರಮ ಜರುಗಿಸಿ, ಈ ಪ್ರವೃತ್ತಿಯನ್ನು ನಿಲ್ಲಿಸಬೇಕಾದ ತುರ್ತು ಅಗತ್ಯವಿದೆ' ಎಂದು ಪತ್ರದಲ್ಲಿ ಒತ್ತಾಯಿಸಲಾಗಿದೆ.

ದಿ ಹಿಂದೂ ಪತ್ರಿಕೆಯ ಮಾಜಿ ಪ್ರಧಾನ ಸಂಪಾದಕ ಮತ್ತು ದಿ ಹಿಂದೂ ಪಬ್ಲಿಷಿಂಗ್ ಗ್ರೂಪ್ ನಿರ್ದೇಶಕ ಎನ್. ರಾಮ್, ಪತ್ರಕರ್ತ ಹಾಗೂ ಬರಹಗಾರ ಮೃಣಾಲ್ ಪಾಂಡೆ, ದಿ ಟೆಲಿಗ್ರಾಫ್ ಸಂಪಾದಕ ಆರ್. ರಾಜಗೋಪಾಲ್, ದಿ ವೈರ್ ಸಂಸ್ಥಾಪಕ ಸಂಪಾದಕ ಸಿದ್ಧಾರ್ಥ ವರದರಾಜನ್, ಕಾರವಾನ್‌ನ ಕಾರ್ಯನಿರ್ವಾಹಕ ಸಂಪಾದಕ ವಿನೋದ್ ಜೋಸ್ ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

2021ರ ಡಿಸೆಂಬರ್‌ನಲ್ಲಿ ಹರಿದ್ವಾರದಲ್ಲಿ ನಡೆದ ಧರ್ಮ ಸಂಸತ್ ಮೂಲಕ ಮುಸ್ಲಿಮರ ವಿರುದ್ಧದ ಹೋರಾಟಕ್ಕೆ ಕರೆ ನೀಡಲಾಯಿತು ಎಂದು ಪತ್ರದಲ್ಲಿ ಹೇಳಲಾಗಿದೆ. '2021 ಹಾಗೂ 2022ರಲ್ಲಿ ದೇಶದ ಜನರನ್ನು ಧರ್ಮದ ಆಧಾರದಲ್ಲಿ ವಿಭಜಿಸುವ ಹಾಗೂ ಮುಸ್ಲಿಮರ ಹೆಸರಿಗೆ ಮಸಿ ಬಳಿಯುವ ಯತ್ನಗಳು ನಡೆದವು. ಮುಸ್ಲಿಂ ಹೆಣ್ಣುಮಕ್ಕಳನ್ನು ಸಾಮಾಜಿಕ ಜಾಲತಾಣಗಳು, ಅದರಲ್ಲೂ ಬುಲ್ಲಿಬಾಯ್ ಆ್ಯಪ್ ಮೂಲಕ ವ್ಯವಸ್ಥಿತವಾಗಿ ಗುರಿ ಮಾಡಲಾಯಿತು. ಹಿಜಾಬ್ ಗಲಾಟೆಯಿಂದ ದೇಶದಾದ್ಯಂತ ಮುಸ್ಲಿಂ ಹೆಣ್ಣುಮಕ್ಕಳು ಕಿರುಕುಳ ಹಾಗೂ ಅಪಮಾನಕ್ಕೆ ಒಳಗಾದರು. 2022ರ ಚುನಾವಣಾ ಪ್ರಚಾರದಲ್ಲಿ ಆಡಳಿತಾರೂಢ ಪಕ್ಷದ 'ತಾರಾ ಪ್ರಚಾರಕರು' ಕಾನೂನು ಬಾಹಿರವಾಗಿ, ನಾಚಿಕೆಬಿಟ್ಟು ಧರ್ಮದ ಹೆಸರಿನಲ್ಲಿ ಮತ ಕೇಳಿದ್ದನ್ನು ನಾವು ಗಮನಿಸಿದ್ದೇವೆ' ಎಂದು ಪತ್ರಕರ್ತರು ಹೇಳಿದ್ದಾರೆ.

'ದಿ ಕಾಶ್ಮೀರ್ ಫೈಲ್ಸ್' ಚಿತ್ರ ಪ್ರದರ್ಶನದ ವೇಳೆ ಚಿತ್ರಮಂದಿರದ ಒಳಗೆ ಹಾಗೂ ಹೊರಗೆ ಮುಸ್ಲಿಂ ವಿರೋಧಿ ಭಾವನೆಗಳನ್ನು ಎತ್ತಿಕಟ್ಟುವ ಸಂಘಟಿತ ಕೆಲಸವಾಗುತ್ತಿದೆ ಎಂದು ಪತ್ರದಲ್ಲಿ ಬರೆಯಲಾಗಿದೆ. ಕೋವಿಡ್ ಆರಂಭದ ದಿನಗಳಲ್ಲಿ ಮುಸ್ಲಿಮರ ಮೇಲೆ ವ್ಯವಸ್ಥಿತ ಸಂಚು ನಡೆಯಿತು. 'ಕೊರೊನಾ ಜಿಹಾದ್' ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಲಾಯಿತು' ಎಂದು ಪತ್ರದಲ್ಲಿ ಆರೋಪಿಸಲಾಗಿದೆ.

ಮೂವರಿಗೆ ಗೌರವ ಡಾಕ್ಟರೇಟ್

ದಾವಣಗೆರೆ: ಇದೇ 24ರಂದು ದಾವಣಗೆರೆ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದಲ್ಲಿ ಇತಿಹಾಸಕಾರ ಪ್ರೊ. ಲಕ್ಷ್ಮಣ ತೆಲಗಾವಿ, ಜಾನಪದ ತಜ್ಞ ಡಾ. ಮೀರಾಸಾಬಿಹಳ್ಳಿ ಶಿವಣ್ಣ, ದಾವಣಗೆರೆ ತಪೋವನ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷ ಶಶಿಕುಮಾರ್ ವಿ.ಎಂ. ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುವುದು ಎಂದು ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಬುಧವಾರ ಪ್ರಕಟಿಸಿದರು.

ನಿಧನ ವಾರ್ತೆ

ಡಿ.ಜಯಾನಂದ ಅಮೀನ್



ಬೆಂಗಳೂರು: ಕರ್ನಾಟಕ ಪೊಲೀಸ್ ಸೇವೆಯ ನಿವೃತ್ತ ಅಧಿಕಾರಿ ಡಿ.ಜಯಾನಂದ ಅಮೀನ್ (85) ಬುಧವಾರ ನಗರದಲ್ಲಿ ನಿಧನರಾದರು.

ಮಂಗಳೂರಿನ ಬಜಾಲ್ ಪ್ರದೇಶದವರಾದ ಅವರು, ಸೇವೆಯಿಂದ ನಿವೃತ್ತರಾಗುವಾಗ ದಕ್ಷಿಣ ಕನ್ನಡ ಜಿಲ್ಲೆಯ ಸಿಆರ್‌ಇ ಘಟಕದ ಎಸ್‌ಪಿ ಆಗಿದ್ದರು. ಅವರ ಸೇವಾದಕ್ಷತೆಯನ್ನು ಗುರುತಿಸಿ ರಾಷ್ಟ್ರಪತಿ ಪುರಸ್ಕಾರವೂ ಲಭಿಸಿತ್ತು.

ಜಯಾನಂದ ಅವರು ಪುತ್ರ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ನಡೆಯಿತು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಖಾರವಾಗಿ ಪ್ರಶ್ನಿಸಿರುವ ರಾಜ್ಯಪಾಲರು

ಅನುಮೋದಿಸದೆ ನೇಮಕಾತಿ ಮಾಡಿದ್ದು ಏಕೆ?

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): 'ನನ್ನ ಅನುಮೋದನೆ ಪಡೆಯದೇ ನೇಮಕಾತಿ ಮಾಡಿದ್ದು ಏಕೆ?'

– 2017–18ನೇ ಸಾಲಿನಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ವಿವಿಧ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಮೇಲಿನಂತೆ ಖಾರವಾಗಿ ಪ್ರಶ್ನಿಸಿದ್ದಾರೆ. ಆ ಪತ್ರ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ನನ್ನ ಅನುಮೋದನೆ ನಿರೀಕ್ಷಿಸಿ ಆದೇಶ ಹೊರಡಿಸಲು ಕಾರಣಗಳೇನು? ಈಗೇಕೇ ನನ್ನ ಅನುಮೋದನೆಗೆ ಕಡತ ಕಳುಹಿಸಿದ್ದೀರಿ? ನೇಮಕಾತಿ ಪ್ರಕ್ರಿಯೆಯಲ್ಲಿ ಯಾವ್ಯಾವ ಸಮಿತಿಗಳಿದ್ದವು? ಆ ಸಮಿತಿಗಳು ಏನೇನು ವರದಿ ಕೊಟ್ಟಿವೆ? ಈ ಕುರಿತು ಅಗತ್ಯ ದಾಖಲೆಗಳೊಂದಿಗೆ ಮಾಹಿತಿ ಸಲ್ಲಿಸಬೇಕು' ಎಂದು ರಾಜ್ಯಪಾಲರು ನಿರ್ದೇಶನ ನೀಡಿದ್ದಾರೆ.

2017–18ನೇ ಸಾಲಿನಲ್ಲಿ ಕನ್ನಡ ವಿ.ವಿ.ಯಲ್ಲಿ ಸಂವಿಧಾನದ 371 (ಜೆ) ಅಡಿ 9 ಬೋಧಕ, 5 ಬೋಧಕೇತರ ಹುದ್ದೆಗಳನ್ನು ತುಂಬಲಾಗಿತ್ತು. ಆದರೆ, ಅದಕ್ಕೆ ಅನುಮೋದನೆಯೇ ಪಡೆದಿರಲಿಲ್ಲ ಎನ್ನುವುದು ರಾಜ್ಯಪಾಲರು ಬರೆದಿರುವ ಪತ್ರದಿಂದ ಬಹಿರಂಗಗೊಂಡಿದೆ.

ಏಳು ಜನರ ನೇಮಕಾತಿ ನಿಯಮಬಾಹಿರ:

ನೇಮಕಾತಿ ಬಗ್ಗೆ ರಾಜ್ಯಪಾಲರು ಒಂದೆಡೆ ತಕರಾರು ತೆಗೆದರೆ, ನೇಮಕಾತಿ ಪ್ರಕ್ರಿಯೆಗಳ ಪರಿಶೀಲನೆಗೆ ರಚಿಸಲಾಗಿದ್ದ ಸಮಿತಿಯು ಬಹುತೇಕ ಅಭ್ಯರ್ಥಿಗಳ ನೇಮಕಾತಿ ನಿಯಮಬಾಹಿರವಾಗಿ ನಡೆದಿರುವುದು ಸಾಬೀತಾಗಿದೆ ಎಂದು ವರದಿ ಸಲ್ಲಿಸಿದೆ. ಸಮಿತಿಯ ವರದಿ ಪ್ರಕಾರ, ಸಹ ಪ್ರಾಧ್ಯಾಪಕರಾದ ವೆಂಕಟಗಿರಿ ದಳವಾಯಿ, ಅಮರೇಶ ಯತಗಲ್, ಮೋಹನರಾವ್ ಬಿ. ಪಾಂಚಾಳ, ಈ. ಯರ್ರಿಸ್ವಾಮಿ, ಎ.ಎಸ್. ಗೋವರ್ಧನ, ಸಹಾಯಕ ತೋಟಗಾರಿಕೆ ಅಧಿಕಾರಿ ಬೀರಪ್ಪ, ಶೀಘ್ರ ಲಿಪಿಗಾರ ರಾಘವೇಂದ್ರ ಅವರ ನೇಮಕ ನಿಯಮಬಾಹಿರ. ಮಿಕ್ಕುಳಿದ ಏಳು ಜನರ ನೇಮಕಾತಿಯಲ್ಲಿ ಯಾವುದೇ ಲೋಪ ಕಂಡು ಬಂದಿಲ್ಲ.

'ಹುದ್ದೆಗೆ ನೇಮಕಗೊಂಡ ಎರಡು ವರ್ಷಗಳ ನಂತರ ಪ್ರೊಬೇಷನರಿ ಅವಧಿ ಪೂರ್ಣಗೊಂಡಿದೆ ಎಂದು ಘೋಷಿಸಬೇಕು. ಆದರೆ, ಕುಲಪತಿಯವರು ಎಂಟು ತಿಂಗಳ ವೇತನ ಬಿಟ್ಟು ಕೊಡಬೇಕೆಂದು ಕೇಳುತ್ತಿದ್ದಾರೆ. ಕೊಡಲು ನಿರಾಕರಿಸಿದ್ದರಿಂದ ನಮ್ಮ ಕಡತಗಳನ್ನು ರಾಜ್ಯಪಾಲರ ಅನುಮೋದನೆಗೆ ಕಳುಹಿಸುತ್ತಿಲ್ಲ' ಎಂದು ಏಳು ಜನ ಈ ಹಿಂದೆ ಆರೋಪಿಸಿದ್ದರು.

ನೇಮಕಾತಿ ನಡೆದಾಗ ಮಲ್ಲಿಕಾ ಎಸ್. ಘಂಟಿ, ಡಿ. ಪಾಂಡುರಂಗಬಾಬು ಅವರು ಕ್ರಮವಾಗಿ ವಿ.ವಿ. ಕುಲಪತಿ, ಕುಲಸಚಿವರಾಗಿದ್ದರು.

> **ನೇಮಕಾತಿ ಪ್ರಕ್ರಿಯೆ ಪರಿಶೀಲನೆಗೆ ರಚಿಸಿದ್ದ ಸಮಿತಿ ವರದಿ ಕೊಟ್ಟಿದೆ. ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಮುಂದುವರಿಯಲಾಗುವುದು**
> **ಪ್ರೊ.ಎ. ಸುಬ್ಬಣ್ಣ ರೈ**
> ಕುಲಸಚಿವ, ಹಂಪಿ ಕನ್ನಡ ವಿ.ವಿ.

ನಿಯಮಬಾಹಿರ ನೇಮಕ ಸಾಬೀತು

ವರದಿ ಪರಿಣಾಮ

2017–18ನೇ ಸಾಲಿನಲ್ಲಿ ನಡೆದ ನೇಮಕಾತಿ ಪ್ರಕ್ರಿಯೆ ನಿಯಮಬಾಹಿರವಾಗಿ ನಡೆದಿರುವುದು ಸಾಬೀತಾಗಿದೆ ಎಂದು ನೇಮಕಾತಿ ಪ್ರಕ್ರಿಯೆಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ಸಮಿತಿಯು ಕುಲಪತಿಯವರಿಗೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದೆ. ಆ ಪತ್ರ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಬೋಧಕ ಹುದ್ದೆಗಳಿಗೆ ಯುಜಿಸಿ ನಿಗದಿಪಡಿಸಿದ ನಿಯಮಗಳಲ್ಲಿ ಹಾಗೂ ಜಾಹೀರಾತಿನಲ್ಲಿ ಅಧಿಸೂಚಿಸಿದ ನಿಯಮಗಳು ಬಹುತೇಕ ಅಭ್ಯರ್ಥಿಗಳ ನೇಮಕದಲ್ಲಿ ಪಾಲನೆ ಆಗಿಲ್ಲ. ಅನರ್ಹ ಅಭ್ಯರ್ಥಿಗಳನ್ನು ಕೂಡ ಲಿಖಿತ ಪರೀಕ್ಷೆ, ಸಂದರ್ಶನಕ್ಕೆ ಆಹ್ವಾನಿಸಲಾಗಿತ್ತು. ಲಿಖಿತ ಪರೀಕ್ಷೆ, ಮೌಲ್ಯಮಾಪನ ಮತ್ತು ಮೌಖಿಕ ಸಂದರ್ಶನದ ಸಮಗ್ರ ನೇಮಕಾತಿ ಪ್ರಕ್ರಿಯೆ ಮೂರು ದಿನಗಳಲ್ಲಿ ಪೂರ್ಣಗೊಂಡಿದೆ. ಈ ನೇಮಕಾತಿಯೇ ನಿಯಮಬಾಹಿರ' ಎಂದು ವರದಿಯಲ್ಲಿ ತಿಳಿಸಲಾಗಿದೆ.

ನೇಮಕಾತಿಯಲ್ಲಿನ ಲೋಪ ಕುರಿತು 2021ರ ನವೆಂಬರ್ 29ರಂದು 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು. ಬಳಿಕ ನೇಮಕಾತಿ ಪ್ರಕ್ರಿಯೆಗಳ ಪರಿಶೀಲನೆಗೆ ಸಿಂಡಿಕೇಟ್ ಸದಸ್ಯ ಪ್ರೊ.ಜಿ.ಸಿ. ರಾಜಣ್ಣ ಅಧ್ಯಕ್ಷತೆಯಲ್ಲಿ ಐವರು ಸದಸ್ಯರ ಸಮಿತಿ ರಚಿಸಲಾಗಿತ್ತು. ಆ ಸಮಿತಿ ಎಲ್ಲ 14 ಜನರ ದಾಖಲೆಗಳನ್ನು ಪರಿಶೀಲಿಸಿ ಮಾ. 19ರಂದು ಕುಲಪತಿಯವರಿಗೆ ವರದಿ ಸಲ್ಲಿಸಿದೆ.

ಉತ್ತರಾಖಂಡ ಸಿಎಂ ಧಾಮಿ ಪ್ರಮಾಣ


ಉತ್ತರಾಖಂಡದ ನೂತನ ಮುಖ್ಯಮಂತ್ರಿಯಾಗಿ ಡೆಹ್ರಾಡೂನ್‌ನಲ್ಲಿ ಬುಧವಾರ ಪ್ರಮಾಣವಚನ ಸ್ವೀಕರಿಸಿದ ಪುಷ್ಕರ್ ಧಾಮಿ (ಎಡದಿಂದ ಎರಡನೆಯವರು) ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ, ಶಿವರಾಜ್ ಸಿಂಗ್ ಚೌಹಾಣ್, ಯೋಗಿ ಆದಿತ್ಯನಾಥ, ಮನೋಹರ್ ಲಾಲ್ ಖಟ್ಟರ್, ಭೂಪೇಂದ್ರ ಪಟೇಲ್ ಇದ್ದರು–ಪಿಟಿಐ ಚಿತ್ರ

ಡೆಹ್ರಾಡೂನ್ (ಪಿಟಿಐ): ಪುಷ್ಕರ್ ಸಿಂಗ್ ಧಾಮಿ ಅವರು ಉತ್ತರಾಖಂಡದ ನೂತನ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣವಚನ ಸ್ವೀಕರಿಸಿದರು.

ಇಲ್ಲಿನ ಅರಮನೆ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಉಪಸ್ಥಿತರಿದ್ದರು. ಗೃಹಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಾರಿಗೆ ಸಚಿವ ನಿತಿನ್ ಗಡ್ಕರಿ, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಬಿಜೆಪಿ ಆಡಳಿತವಿರುವ ರಾಜ್ಯಗಳಾದ ಉತ್ತರ ಪ್ರದೇಶ, ಮಧ್ಯಪ್ರದೇಶ, ಹರಿಯಾಣ ಹಾಗೂ ಅಸ್ಸಾಂ ಮುಖ್ಯಮಂತ್ರಿಗಳು ಭಾಗಿಯಾಗಿದ್ದರು.

ಧಾಮಿ ಅವರ ಜತೆ ಎಂಟು ಮಂದಿ ಸಚಿವರಾಗಿ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಉತ್ತರಾಖಂಡ ರಾಜ್ಯಪಾಲ ನಿವೃತ್ತ ಲೆಫ್ಟಿನೆಂಟ್ ಜನರಲ್ ಗುರ್ಮಿತ್ ಸಿಂಗ್ ಅವರು ಪ್ರಮಾಣವಚನ ಬೋಧಿಸಿದರು. ಮುಖ್ಯಮಂತ್ರಿಯಾಗಿ ಧಾಮಿ ಅವರಿಗೆ ಇದು ಎರಡನೇ ಅವಧಿಯಾಗಿದ್ದು, ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ಊಹಾಪೋಹಗಳಿಗೆ ಸೋಮವಾರ ತೆರೆಬಿದ್ದಿದೆ.

ಧಾಮಿ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಬಿಜೆಪಿ ಬಹುಮತ ಪಡೆದಿದೆ. ಆದರೆ ಖತಿಮಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಧಾಮಿ ಅವರೇ ಪರಾಭವಗೊಂಡರು. ಸೋತಿದ್ದರೂ, ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ಅವರು, ಮುಂದಿನ ಆರು ತಿಂಗಳ ಒಳಗಾಗಿ ಶಾಸನಸಭೆಗೆ ಆಯ್ಕೆಯಾಗಬೇಕಿದೆ.

ಸತ್ಪಾಲ್ ಮಹಾರಾಜ್, ಧಾನ್‌ಸಿಂಗ್ ರಾವತ್, ಸುಬೋಧ್ ಅನಿಯಲ್, ಪ್ರೇಮಚಂದ್ ಅಗರ್‌ವಾಲ್, ರೇಖಾ ಆರ್ಯ, ಗಣೇಶ್ ಜೋಷಿ, ಚಂದನ್ ರಾಮ್ ದಾಸ್ ಹಾಗೂ ಸೌರಭ್ ಬಹುಗುಣ ಅವರು ಸಚಿವ ಸ್ಥಾನ ಅಲಂಕರಿಸಿರು.

ಮಾಜಿ ಮುಖ್ಯಮಂತ್ರಿ ವಿಜಯ ಬಹುಗುಣ ಅವರ ಪುತ್ರ ಸೌರಭ್ ಬಹುಗುಣ, ಚಂದನ್ ರಾಮ್ ದಾಸ್ ಹಾಗೂ ಪ್ರೇಮಚಂದ್ ಅಗರ್‌ವಾಲ್ ಅವರನ್ನು ಹೊರತುಪಡಿಸಿದರೆ, ಉಳಿದವರು ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದರು. ಅಗರ್‌ವಾಲ್ ಅವರು ಸ್ಪೀಕರ್ ಆಗಿದ್ದರು. 70 ಸದಸ್ಯಬಲದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 47 ಸ್ಥಾನ ಗೆದ್ದಿತ್ತು.

ಗುರುವಾರ, ಮಾರ್ಚ್ 24, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 83 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಪ್ರಾಥಮಿಕ ಶಾಲಾ ಸಹಶಿಕ್ಷಕರ ನೇಮಕಾತಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆ ಕುರಿತ ಪ್ರಾಥಮಿಕ ಮಾಹಿತಿ ಇಲ್ಲಿದೆ



ಸಂಖ್ಯೆ ಸುದ್ದಿ
ಶಾಸಕರು ಕೋಟಿ ಒಡೆಯರು!

ರೇಣುಕಾಚಾರ್ಯ ಕುಟುಂಬದ ವಿರುದ್ಧ ಕ್ರಮಕ್ಕೆ ಆಗ್ರಹ 7

ಜಾತ್ರೆಗಾಗಿ ಜೀವ ಪಣಕ್ಕಿಟ್ಟವರು 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,684 ▼	17,245 ▼	₹53,260 (ಬೆಂಗಳೂರು) ▲	₹69,600 (ಬೆಂಗಳೂರು) ▲	76.42 ▼

SDJ GOLD
ಕೆಲಸಕ್ಕೆ Telecallers ಬೇಕಾಗಿದ್ದಾರೆ
Computer knowledge ಇರಬೇಕು.
ಸಂಬಳ 15000 ಸಿಗುತ್ತದೆ.
ಉಳಿದುಕೊಳ್ಳಲು ಸ್ಥಳ ಇರುತ್ತದೆ.
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣವನ್ನು ಕಟ್ಟಿ ಬಿಡಿಸಿ ಉಳಿದ ಹಣವನ್ನು ಕೊಡುತ್ತೇವೆ.
9813870702
8884666264

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಚಿನ್ನದ ಸಾಲ 7.25% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ರಾಜ್ಯದ ವಿವಿಧೆಡೆ ಜಾತ್ರೆಗಳಿಗೆ ವಿಸ್ತರಣೆ: ವಿಧಾನಸಭೆಯಲ್ಲಿ ಕೋಲಾಹಲ

ಮುಸ್ಲಿಂ ವರ್ತಕರಿಗೆ 'ಬಹಿಷ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮರಸ್ಯದ ಕೊಂಡಿ ಬೆಸೆಯುವ ಜಾತ್ರೆ, ಉತ್ಸವಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ 'ಬಹಿಷ್ಕಾರ' ಹಾಕುವ ರೀತಿಯೊಳಗೆ ಉಡುಪಿಯಲ್ಲಿ ಆರಂಭವಾದ ಹೊಸ ಚಾಳಿ ರಾಜ್ಯದ ಹಲವು ಜಿಲ್ಲೆಗಳಿಗೆ ಬುಧವಾರ ಹರಡಿದೆ. ಎರಡು ಕೋಮುಗಳ ಮಧ್ಯೆ ಕಂದಕ ಸೃಷ್ಟಿಸುವ ಈ ಬೆಳವಣಿಗೆಯು ವಿಧಾನಸಭೆಯಲ್ಲಿ ಕೋಲಾಹಲಕ್ಕೆ ಕಾರಣವಾಯಿತು.

ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ವಾಕ್ಸಮರಕ್ಕೂ ಸದನ ಸಾಕ್ಷಿಯಾಯಿತು.

ಉಡುಪಿ ಜಿಲ್ಲೆಯ ಕಾಪು ಮಾರಿಗುಡಿ ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ಹೇರಲಾಗಿತ್ತು. ನಂತರ ಉಡುಪಿಯ ವಿವಿಧ ದೇವಸ್ಥಾನಗಳು, ದಕ್ಷಿಣ ಕನ್ನಡ ಜಿಲ್ಲೆಯ ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನದ ಜಾತ್ರೆ, ಶಿವಮೊಗ್ಗ ಮಾರಿ ಜಾತ್ರೆ, ಶಿರಸಿ ಮಾರಿಕಾಂಬಾ ಜಾತ್ರೆಯಲ್ಲೂ ಮುಸ್ಲಿಂ ವ್ಯಾಪಾರಿಗಳು ಪಾಲ್ಗೊಳ್ಳಬಾರದು ಎಂಬ ಬ್ಯಾನರ್ ಹಾಕಲಾಗಿತ್ತು. ಕೆಲವೆಡೆ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಗಳಿಂದಲೇ ಆದೇಶ ಹೊರಡಿಸಲಾಗಿತ್ತು.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಕಿಗ್ಗಾದ ಋಷ್ಯಶೃಂಗ ದೇವಸ್ಥಾನ, ಅಡ್ಡಗದ್ದೆ ವನದುರ್ಗಾಪರಮೇಶ್ವರಿ ಜಾತ್ರೆಗಳಲ್ಲೂ ಇಂತಹ ಪ್ರಯತ್ನಗಳು ನಡೆದಿವೆ. ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನ, ಮಂಗಳೂರಿನ ಮಂಗಳಾದೇವಿ ದೇವಸ್ಥಾನ, ಕಾಟಿಪಳ್ಳದ ಗಣೇಶ ದೇವಸ್ಥಾನಗಳಲ್ಲೂ ಬ್ಯಾನರ್ ಹಾಕಲಾಗಿದೆ. ಬಪ್ಪನಾಡು ಜಾತ್ರೆಯಲ್ಲಿ ವ್ಯಾಪಾರ ನಡೆಸಲು ನೋಂದಣಿ ಮಾಡಿಸಿದ್ದ 85 ಮುಸ್ಲಿಂ ವ್ಯಾಪಾರಿಗಳ ಪೈಕಿ 53 ಮಂದಿ ಬುಧವಾರ ಠೇವಣಿ ವಾಪಸ್ ಪಡೆದಿದ್ದಾರೆ.

ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಯು.ಟಿ. ಖಾದರ್ ಮತ್ತು ರಿಜ್ವಾನ್ ಅರ್ಷದ್, 'ರಾಜ್ಯದಲ್ಲಿ ಕೆಲವರಿಂದ ಸಾಮರಸ್ಯಕ್ಕೆ ಧಕ್ಕೆಯಾಗುತ್ತಿದೆ. ಧರ್ಮದ ಹೆಸರಿನಲ್ಲಿ ದ್ವೇಷ ಬಿತ್ತುವ ಕೆಲಸ ಮಾಡುತ್ತಿದೆ. ಅಂತಹವರನ್ನು ಪತ್ತೆಹಚ್ಚುವ ಪ್ರಯತ್ನ ಪೊಲೀಸರಿಂದ ಆಗುತ್ತಿಲ್ಲ' ಎಂದು ದೂರಿದರು.

'ನಿರ್ದಿಷ್ಟ ಧರ್ಮದ ಜನರಿಗೆ ವ್ಯಾಪಾರ ನಡೆಸಲು ಅವಕಾಶ ನೀಡಬಾರದು ಎಂದು ಪೋಸ್ಟರ್, ಬ್ಯಾನರ್ ಹಾಕಲಾಗುತ್ತಿದೆ. ಯಾರೂ ತಮ್ಮ ಹೆಸರಿನಲ್ಲಿ ಈ ಕೆಲಸ ಮಾಡುತ್ತಿಲ್ಲ. 'ಬಾಂಧವರು', 'ಬಂಧುಗಳು' ಎಂದು ಹೇಳಿಕೊಂಡು ಇಂತಹ ಕೃತ್ಯ ಎಸಗುವವರು ಹೇಡಿಗಳು' ಎಂದು ಖಾದರ್ ಟೀಕಿಸಿದ್ದು ಸದನದಲ್ಲಿ ಕೋಲಾಹಲಕ್ಕೆ ಕಾರಣವಾಯಿತು.

ಖಾದರ್ ಹೇಳಿಕೆಯನ್ನು ಬಿಜೆಪಿಯ ಕೆ.ಜಿ. ಬೋಪಯ್ಯ ಆಕ್ಷೇಪಿಸಿದರು. ಬಿಜೆಪಿಯ ಕೆ. ರಘುಪತಿ ಭಟ್, ಜಿ. ಸೋಮಶೇಖರ ರೆಡ್ಡಿ, ಸಂಜೀವ ಮಠಂದೂರು, ಹರೀಶ್ ಪೂಂಜ, ಎಂ.ಪಿ. ರೇಣುಕಾಚಾರ್ಯ ಸೇರಿದಂತೆ ಹಲವರು ಎದ್ದುನಿಂತು ಏರಿದ ದನಿಯಲ್ಲಿ ಖಾದರ್ ವಿರುದ್ಧ ವಾಗ್ದಾಳಿಗೆ ಇಳಿದರು.

'ಯಾವುದೇ ಧರ್ಮವನ್ನು ಉದ್ದೇಶಿಸಿ ಹೇಡಿ ಎಂದು ಹೇಳಿಲ್ಲ. ಈ ರೀತಿ ಅನಾಮಿಕರಂತೆ ಬ್ಯಾನರ್ ಹಾಕುವವರಿಗೆ ಹೇಳಿದ್ದೇನೆ' ಎಂದು ಖಾದರ್ ಹೇಳಿದರು.

'ಯಾರು ಮಾಡಿದ್ದಾರೋ ಅವರೇ ಹೇಡಿಗಳು' ಎಂದು ಜಮೀರ್ ಅಹಮ್ಮದ್ ಖಾನ್ ಏರು ದನಿಯಲ್ಲಿ ಕೂಗಿದರು.

8ನೇ ಪುಟ ನೋಡಿ

'ಕಾನೂನು ರೂಪಿಸಿದ್ದೇ ಕಾಂಗ್ರೆಸ್'

'ಜಾತ್ರೆ, ಉತ್ಸವಗಳಲ್ಲಿ ವ್ಯಾಪಾರ, ವಹಿವಾಟಿಗೆ ನಿರ್ಬಂಧ ಹೇರುವುದರಲ್ಲಿ ಸರ್ಕಾರದ ಪಾತ್ರ ಏನೂ ಇಲ್ಲ. ಆದರೆ, ಆಯಾ ಧಾರ್ಮಿಕ ಸಂಸ್ಥೆಗಳ ಜಮೀನುಗಳಲ್ಲಿ ಹಿಂದೂಗಳಲ್ಲದವರಿಗೆ ವಹಿವಾಟು ನಡೆಸಲು ಗುತ್ತಿಗೆ ನೀಡಬಾರದು ಎಂಬ ಅಂಶ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು-2002ರಲ್ಲಿ ಇದೆ. ಅದರ ಪ್ರಕಾರ, ಆಯಾ ದೇವಾಲಯದವರು ತೀರ್ಮಾನ ಕೈಗೊಂಡಿರಬಹುದು' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

'ಇದು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರೂಪಿಸಿರುವ ನಿಯಮ. ದೇವಸ್ಥಾನದ ಪ್ರಾಂಗಣ ಮತ್ತು ದೇವಸ್ಥಾನಕ್ಕೆ ಸೇರಿದ ಆಸ್ತಿಗಳಲ್ಲಿ ವಹಿವಾಟು ನಿರ್ಬಂಧಿಸಲು ಕಾನೂನಿನಲ್ಲಿ ಅಧಿಕಾರವಿದೆ. ಅದನ್ನು ಹೊರತುಪಡಿಸಿದ ಸ್ಥಳಗಳಲ್ಲೂ ನಿರ್ಬಂಧ ವಿಧಿಸಿರುವುದು ಕಂಡುಬಂದರೆ ಸೂಕ್ತ ಕ್ರಮ ಜರುಗಿಸಲಾಗುವುದು' ಎಂದರು.

> ಜಾತ್ರೆ ವೇಳೆ ವ್ಯವಸ್ಥಾಪನಾ ಸಮಿತಿಯವರೇ ಅಂಗಡಿಗಳನ್ನು ಗುತ್ತಿಗೆ ಆಧಾರದಲ್ಲಿ ನೀಡುತ್ತಾರೆ. ಹೀಗಾಗಿ, ಇದು ನೇರವಾಗಿ ಸರ್ಕಾರದ ವ್ಯಾಪ್ತಿಗೆ ಬರುವ ವಿಷಯವಲ್ಲ. ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ.
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ನಿಯಮ, ಕಾನೂನು ಮಾಡುವಾಗ ಏನೇ ಉದ್ದೇಶ ಇರಬಹುದು, ಈಗ ಮುಕ್ತ ವ್ಯಾಪಾರಕ್ಕೆ ಅವಕಾಶ ಇದೆ. ದುರುದ್ದೇಶದಿಂದ ನಿರ್ಬಂಧ ವಿಧಿಸುವವರ ವಿರುದ್ಧ ಸರ್ಕಾರ ಕ್ರಮ ಜರುಗಿಸಬೇಕು.
> **ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

> ಅಭಿವೃದ್ಧಿ ಬಗ್ಗೆ ಮಾತನಾಡಲು ಬಿಜೆಪಿ ಬಳಿ ಸರಕಿಲ್ಲ. ಹೀಗಾಗಿ, ಕರಾವಳಿಯಲ್ಲಿರುವ ಸಂಘರ್ಷವನ್ನು ರಾಜ್ಯಕ್ಕೆ ಹಬ್ಬಿಸಲು ಹೊರಟಿದ್ದಾರೆ. ಸರ್ವ ಜನಾಂಗದ ಶಾಂತಿಯ ತೋಟಕ್ಕೆ ಕೊಳ್ಳಿ ಇಡುವ ಕೆಲಸ ಶುರುವಾಗಿದೆ.
> **ಎಚ್.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

11 ಕಾರ್ಮಿಕರು ಸಜೀವ ದಹನ

ಹೈದರಾಬಾದ್(ಪಿಟಿಐ): ಇಲ್ಲಿನ ಭೋಯಿಗುಡದಲ್ಲಿರುವ ಗುಜರಿ ವಸ್ತುಗಳ ಗೋಡೌನ್‌ನಲ್ಲಿ ಬುಧವಾರ ಸಂಭವಿಸಿದ ಬೆಂಕಿ ಅವಘಡದಲ್ಲಿ 11 ಕಾರ್ಮಿಕರು ಸಜೀವ ದಹನವಾಗಿದ್ದಾರೆ.

12ನೇ ಪುಟ ನೋಡಿ

ಕೋವಿಡ್: ಏ. 1ರಿಂದ ಎಲ್ಲ ನಿರ್ಬಂಧ ತೆರವು

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್-19 ಪ್ರಕರಣಗಳ ಸಂಖ್ಯೆಯಲ್ಲಿ ಸತತ ಇಳಿಕೆ ಕಂಡು ಬರುತ್ತಿರುವ ಹಿನ್ನೆಲೆಯಲ್ಲಿ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಎಲ್ಲ ನಿರ್ಬಂಧಗಳನ್ನು ತೆಗೆದುಹಾಕಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ವ್ಯಕ್ತಿಗತ ಅಂತರ ಕಾಯ್ದುಕೊಳ್ಳುವುದು ಹಾಗೂ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಎಂಬುದು ಸೇರಿದಂತೆ ಕೋವಿಡ್-19 ನಿರ್ಬಂಧಗಳಿಗೆ ಸಂಬಂಧಿಸಿ ಏಪ್ರಿಲ್ 1ರಿಂದ ತಾನು ಯಾವುದೇ ಆದೇಶಗಳನ್ನು ನೀಡುವುದಿಲ್ಲ ಎಂದೂ ತಿಳಿಸಿದೆ.

ಕೇಂದ್ರದ ಈ ನಿರ್ಧಾರದಂತೆ, ಕೋವಿಡ್-19 ನಿರ್ಬಂಧಗಳನ್ನು ಉಲ್ಲಂಘಿಸುವವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆಯಡಿ ಶಿಕ್ಷಾರ್ಹ ಕ್ರಮ ಜರುಗಿಸುವಂತಿಲ್ಲ.

ಕೋವಿಡ್-19 ಪರಿಸ್ಥಿತಿ ನಿಭಾಯಿಸುವ ಸಲುವಾಗಿ ವಿಪತ್ತು ನಿರ್ವಹಣಾ ಕಾಯ್ದೆಯಡಿ ನಿರ್ಬಂಧಗಳನ್ನು ಮುಂದುವರಿಸುವ ಅಗತ್ಯ ಇಲ್ಲ ಎಂಬುದಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಅಭಿಪ್ರಾಯಪಟ್ಟಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

8ನೇ ಪುಟ ನೋಡಿ

ಸಿದ್ದರಾಮಯ್ಯ ಪ್ರಶ್ನೆ • ಸದನದಲ್ಲಿ ಪ್ರತಿಧ್ವನಿಸಿದ 'ಪ್ರಜಾವಾಣಿ' ವರದಿಗಳು

ಭ್ರಷ್ಟಾಚಾರ: ಚರ್ಚಿಸಲು ಭಯವೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕಾಮಗಾರಿಗಳ ಗುತ್ತಿಗೆಯಲ್ಲಿ ಶೇ 40ರಷ್ಟು ಲಂಚ ಮತ್ತು ಪ್ರಮುಖ ಇಲಾಖೆಗಳಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ 'ಪ್ರಜಾವಾಣಿ' ಇತ್ತೀಚೆಗೆ ಪ್ರಕಟಿಸಿದ್ದ ವರದಿಗಳು ವಿಧಾನ ಸಭೆಯಲ್ಲಿ ಬುಧವಾರ ಪ್ರತಿಧ್ವನಿಸಿದವು.

ನಿಲುವಳಿ ಸೂಚನೆಯಡಿ ವಿಷಯ ಪ್ರಸ್ತಾಪಕ್ಕೆ ಅನುಮತಿ ನಿರಾಕರಿಸಿದ್ದರಿಂದ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರ ಮಧ್ಯೆ ವಾಗ್ವಾದಕ್ಕೂ ಸದನ ಸಾಕ್ಷಿಯಾಯಿತು.

ಭೋಜನ ವಿರಾಮದ ನಂತರ ಸದನ ಸೇರಿದಾಗ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ನಾವು ಮಂಡಿಸಿದ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ರೂಲಿಂಗ್ ನೀಡಿದ್ದು ಸರಿಯಲ್ಲ. ಅದನ್ನು ಮರುಪರಿಶೀಲಿಸಬೇಕು. ಹಾಗೆಂದು ಸಭಾಧ್ಯಕ್ಷರ ಅಧಿಕಾರ ಪ್ರಶ್ನಿಸುತ್ತಿಲ್ಲ. ರಾಜ್ಯದ ಸಾಮಾನ್ಯ ಪ್ರಜೆಗಳ ಬೆವರಿನ ಹಣ ಭ್ರಷ್ಟಾಚಾರಕ್ಕೆ ಒಳಗಾಗಿರುವುದನ್ನು ಪ್ರಸ್ತಾಪಿಸಲೇಬೇಕಾಗಿದೆ. ಭ್ರಷ್ಟಾಚಾರದ ಬಗ್ಗೆ ಇಲ್ಲಿ ಮಾತನಾಡಬಾರದೇ? ಯಾಕೆ ನಿಮಗೆ ಭಯವಾಗಿದೆಯೆ' ಎಂದು ಮುಖ್ಯಮಂತ್ರಿಯವರನ್ನು ಕುಟುಕಿದರು.


8ನೇ ಪುಟ ನೋಡಿ

ಕಂಗೆಟ್ಟ ಸಚಿವ ಸುಧಾಕರ್!

ಆರೋಗ್ಯ ಇಲಾಖೆಯೂ ಸೇರಿ ವಿವಿಧ ಇಲಾಖೆಗಳಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತು 'ಪ್ರಜಾವಾಣಿ'ಯ ಸರಣಿ ವರದಿಗಳನ್ನು ಸಿದ್ದರಾಮಯ್ಯ ಸದನದಲ್ಲಿ ಪ್ರಸ್ತಾಪಿಸಿದರು. ಸಿದ್ದರಾಮಯ್ಯನವರ ತರಾಟೆಯಿಂದಾಗಿ ಒಂದು ಹಂತದಲ್ಲಿ ಕಂಗೆಟ್ಟ ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಬಳಿಕ ಕೋಪೋದ್ರಿಕ್ತರಾದರು.

'ಪ್ರತಿ ಸೋಮವಾರ ಒಂದೊಂದು ಇಲಾಖೆಯ ಬಗ್ಗೆ ಬರೆಯುತ್ತಿದ್ದಾರೆ. ಪತ್ರಿಕೆಗೆ ನೋಟಿಸ್ ಕೊಡುತ್ತೇನೆ, ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಕೂಗಾಡಿದರು.

ಉಪ ಲೋಕಾಯುಕ್ತರಾಗಿ ನ್ಯಾ. ಕೆ.ಎನ್.ಫಣೀಂದ್ರ


ಫಣೀಂದ್ರ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರನ್ನು ಕರ್ನಾಟಕ ಲೋಕಾಯುಕ್ತದ ಎರಡನೇ ಉಪ ಲೋಕಾಯುಕ್ತರನ್ನಾಗಿ ನೇಮಕ ಮಾಡಲಾಗಿದೆ.

ಫಣೀಂದ್ರ ಅವರನ್ನು ನೇಮಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾರ್ಚ್ 22ರಂದು ಆದೇಶ ಹೊರಡಿಸಿದ್ದಾರೆ. 2020ರ ಡಿಸೆಂಬರ್ 16ರಂದು ನಿವೃತ್ತ ನ್ಯಾಯಮೂರ್ತಿ ಎನ್.ಆನಂದ್ ಉಪ ಲೋಕಾಯುಕ್ತ ಹುದ್ದೆಯಿಂದ ನಿವೃತ್ತರಾದಾಗಿನಿಂದಲೂ ಈ ಹುದ್ದೆ ಖಾಲಿ ಇತ್ತು.

ಮತ್ತೊಂದು ಉಪ ಲೋಕಾಯುಕ್ತ ಹುದ್ದೆಯಲ್ಲಿ ಸದ್ಯ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಕಾರ್ಯನಿರ್ವಹಿಸುತ್ತಿದ್ದಾರೆ. ಲೋಕಾಯುಕ್ತರಾಗಿದ್ದ ನಿವೃತ್ತ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ 2022ರ ಜನವರಿ 28ರಂದು ಅಧಿಕಾರ ಪೂರ್ಣಗೊಳಿಸಿದ್ದು, ಎರಡು ತಿಂಗಳಿಂದಲೂ ಲೋಕಾಯುಕ್ತ ಹುದ್ದೆ ಖಾಲಿ ಇದೆ.

2011ರ ಸಾಲಿನ 362 ಅಭ್ಯರ್ಥಿಗಳ ಆಯ್ಕೆ ಸಿಂಧುತ್ವ

ಕೆಪಿಎಸ್‌ಸಿ: ಸಕ್ರಮಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ 2011ನೇ ಸಾಲಿನಲ್ಲಿ ನಡೆಸಲಾಗಿದ್ದ ಪರೀಕ್ಷೆಯಲ್ಲಿ ಅಂತಿಮ ಪಟ್ಟಿಯಲ್ಲಿದ್ದ 362 ಅಭ್ಯರ್ಥಿಗಳ ಆಯ್ಕೆಯನ್ನು ಸಿಂಧುಗೊಳಿಸಿ; ಅವರಿಗೆ ನೇಮಕಾತಿ ಆದೇಶ ನೀಡುವ ಸಂಬಂಧದ, 'ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ಕಾಯ್ದೆ' ಜಾರಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಎ.ಟಿ.ಶ್ರೀನಿವಾಸ್ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ, 'ಕಾಯ್ದೆ ಜಾರಿಗೆ ಸಂಬಂಧಿಸಿದಂತೆ ಇದೇ 25ರವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕು' ಎಂದು ಸರ್ಕಾರಕ್ಕೆ ಆದೇಶಿಸಿದೆ.



ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ 2011ನೇ ಸಾಲಿನಲ್ಲಿ ನಡೆಸಲಾಗಿದ್ದ ಪರೀಕ್ಷೆಯಲ್ಲಿ ಅಂತಿಮ ಪಟ್ಟಿಯಲ್ಲಿದ್ದ 362 ಅಭ್ಯರ್ಥಿಗಳ ಆಯ್ಕೆಯನ್ನು ಸಿಂಧುಗೊಳಿಸಿ ಅವರಿಗೆ ನೇಮಕಾತಿ ಆದೇಶ ನೀಡುವ ಸಂಬಂಧ ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಆಯ್ಕೆ ಮತ್ತು ನೇಮಕಾತಿ ಸಿಂಧುಗೊಳಿಸುವಿಕೆ) ಮಸೂದೆಗೆ ವಿಧಾನಮಂಡಲದ ಉಭಯ ಸದನಗಳಲ್ಲಿ ಕಳೆದ ಫೆಬ್ರುವರಿಯಲ್ಲಿ ಅನುಮೋದನೆ ಪಡೆಯಲಾಗಿತ್ತು.

ಇದಕ್ಕೆ ರಾಜ್ಯಪಾಲರು ಕಳೆದ ವಾರವಷ್ಟೇ ಅಂಕಿತ ಹಾಕಿದ್ದರು.

'ಸಿಐಡಿ ವರದಿ ಆಧರಿಸಿ ಹೈಕೋರ್ಟ್ ನೇಮಕಾತಿ ರದ್ದುಗೊಳಿಸಿತ್ತು. ಇದನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ. ಆದರೂ, ನ್ಯಾಯಾಲಯದ ಆದೇಶ ಧಿಕ್ಕರಿಸಿ 362 ಅಭ್ಯರ್ಥಿಗಳ ಅಕ್ರಮ ನೇಮಕಾತಿಯನ್ನು ಸಕ್ರಮಗೊಳಿಸಲು ಸರ್ಕಾರ ಕಾಯ್ದೆ ರೂಪಿಸಿದೆ. ಇದು ಕಾನೂನುಬಾಹಿರ. ಆದ್ದರಿಂದ, ಅದನ್ನು ರದ್ದುಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಅರ್ಜಿದಾರರು ಈ ಮೊದಲು ಕೆಎಟಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಆದರೆ, ಕೆಎಟಿ ಯಾವುದೇ ಮಧ್ಯಂತರ ಆದೇಶ ನೀಡಿರಲಿಲ್ಲ.

'ಒಲ್ಲದ ಲೈಂಗಿಕತೆ ಅತ್ಯಾಚಾರಕ್ಕೆ ಸಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದ ಅಡಿಯಲ್ಲಿ ಎಲ್ಲ ಮಾನವಜೀವಿಗಳೂ ಸಮಾನರೇ, ಅವರು ಗಂಡಾಗಿದ್ದರೂ ಸರಿ, ಹೆಣ್ಣಾಗಿದ್ದರೂ ಸರಿಯೇ ಅಥವಾ ಇನ್ನ್ಯಾರೇ ಆಗಿದ್ದರೂ ಸೈ, ಸಂವಿಧಾನದ 14ನೇ ವಿಧಿಯ ಅನುಸಾರ ಸಮಾನತೆ ಸಮಾನತೆಯೇ...' ಎಂದು ಸ್ಪಷ್ಟಪಡಿಸಿರುವ ಹೈಕೋರ್ಟ್, 'ಪತಿ ತನ್ನ ಪತ್ನಿಯ ಇಚ್ಛೆಗೆ ವಿರುದ್ಧವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ' ಎಂಬ ಪ್ರಕರಣದಲ್ಲಿ ವಿಚಾರಣೆ ರದ್ದುಪಡಿಸಲು ಕೋರಿದ್ದ ಪತಿಯ ಮನವಿಯನ್ನು ತಳ್ಳಿಹಾಕಿದೆ.

'ನನ್ನ ಹೆಂಡತಿ ನನ್ನ ಮೇಲೆ ಹೊರಿಸಿರುವ ಅತ್ಯಾಚಾರ ಪ್ರಕರಣ ರದ್ದುಗೊಳಿಸಬೇಕು ಹಾಗೂ ಪೋಕ್ಸೊ ಕಾಯ್ದೆಯ ಕಲಂ 29 ಮತ್ತು 30 ಸಂವಿಧಾನದ 14, 19 ಹಾಗೂ 21ಕ್ಕೆ ವಿರುದ್ಧವಾಗಿವೆ ಎಂದು ಘೋಷಿಸಬೇಕು' ಎಂದು ಕೋರಿ ಹೃಷಿಕೇಶ (43) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಹೆಂಡತಿಯ ಜೊತೆ ನಡೆಸುವ ಲೈಂಗಿಕ ಕ್ರಿಯೆ ಸಮ್ಮತಿಯುಕ್ತವೇ ಹೊರತು ಅತ್ಯಾಚಾರವಲ್ಲ ಎಂದು ವಿವರಿಸುವ ಐಪಿಸಿ ಕಲಂ 375ರ ಕಾನೂನಾತ್ಮಕ ದೋಷವನ್ನು ಸರಿಪಡಿಸಬೇಕು. ಪತ್ನಿಯ ಶರೀರ, ಮನಸ್ಸು ಮತ್ತು ಆತ್ಮದ ಮೇಲೆ ಸವಾರಿ ನಡೆಸುವ ಪುರುಷನ ಪ್ರತಿಗಾಮಿ ಮನೋಧರ್ಮ ಕೊನೆಯಾಗಬೇಕು' ಎಂದು ಹೇಳಿದೆ.

'ಪತ್ನಿಯ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳು ದೇಶದಾದ್ಯಂತ ಹಬ್ಬುತ್ತಿವೆ. ಪತ್ನಿಯ ಸಮ್ಮತಿ ಇಲ್ಲದೆ ನಡೆಸುವ ಲೈಂಗಿಕತೆ ಅತ್ಯಾಚಾರಕ್ಕೆ ಸಮಾನ. ಇಂತಹ ನಡವಳಿಕೆ ಆಕೆಯ ಮನಸ್ಸು ಮತ್ತು ಶರೀರದ ಮೇಲೆ ಗಾಢ ಪರಿಣಾಮ ಬೀರಬಲ್ಲದು' ಎಂದು ವಿವರಿಸಿದೆ.

ಪ್ರಕರಣವೇನು?: 'ಮದುವೆಯಾದಾಗಿನಿಂದಲೂ ಪತಿ ನನಗೆ ಅಶ್ಲೀಲ ವಿಡಿಯೊಗಳನ್ನು ತೋರಿಸಿ ಅಸಹಜ ಲೈಂಗಿಕ ಕ್ರಿಯೆಗೆ ಪ್ರಚೋದಿಸುತ್ತಿದ್ದರು' ಎಂದು ಆರೋಪಿಸಿ ಹೃಷಿಕೇಶ್ ಪತ್ನಿ ದೂರು ಸಲ್ಲಿಸಿದ್ದರು.

'ನನಗೆ ಒಮ್ಮೆ ಗರ್ಭಪಾತವಾಗಿತ್ತು. ವಿಶ್ರಾಂತಿ ಅವಧಿಯಲ್ಲಿ ಪತಿ ಒತ್ತಾಯದಿಂದ ಅಸಹಜ ಲೈಂಗಿಕ ಕ್ರಿಯೆ ನಡೆಸಿದ್ದರು. ಮಗಳ ಎದುರೇ ಅಸ್ವಾಭಾವಿಕ ಲೈಂಗಿಕ ಕ್ರಿಯೆಗೆ ಪೀಡಿಸಿದ್ದಾರೆ. 2ನೇ ತರಗತಿ ಓದುತ್ತಿರುವ ಮಗುವಿನ ಮೇಲೂ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿದ್ದರು.

ದೂರಿನ ಅನುಸಾರ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ







ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮೀಸಲಾತಿ ಕುರಿತು ಸರ್ವಪಕ್ಷ ಸಭೆ

ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿ ಚುನಾವಣೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿದ ಬಳಿಕವೇ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕು ಎನ್ನುವ ಒಮ್ಮತದ ತೀರ್ಮಾನವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದಲ್ಲಿ ಬುಧವಾರ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ನಡೆದ ಸಭೆಯ ನಂತರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

'ಎಲ್ಲಾ ಆಯಾಮಗಳಲ್ಲಿ ವಿಚಾರ ಮಾಡಿ ಹಿಂದುಳಿದ ವರ್ಗಗಳಿಗೆ ರಾಜಕೀಯವಾಗಿ ಹಿಂದುಳಿದಿರುವುದನ್ನು ಗುರುತಿಸ ಬೇಕು. ಅದಕ್ಕಾಗಿ ಸಮಿತಿ ರಚಿಸಬೇಕು. ಒಟ್ಟಾರೆ ಮೀಸಲಾತಿ ಶೇ 50 ಮೀರಬಾರದು ಎನ್ನುವ ಸುಪ್ರೀಂ ಕೋರ್ಟ್ ಷರತ್ತುಗಳನ್ವಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು' ಎಂದರು.

'ಈ ತಿಂಗಳ ಅಂತ್ಯದೊಳಗೆ ಮುಂದಿನ ಸಭೆ ನಿಗದಿಪಡಿಸಲಾಗುವುದು. ಆ ಸಭೆಯಲ್ಲಿ ವಿರೋಧ ಪಕ್ಷದ ನಾಯಕರ ಹಾಜರಾತಿಯಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದರು.

'ಇತ್ತೀಚಿನ ಸುಪ್ರೀಂ ಕೋರ್ಟ್ ಆದೇಶಕ್ಕೆ ಅನುಗುಣವಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಕಲ್ಪಿಸಲು ಯಾವ ಕ್ರಮಗಳನ್ನು ಕೈಗೊಳ್ಳಬೇಕು, ಯಾವ ರೀತಿ ಚುನಾವಣೆ ನಡೆಯಬೇಕು ಎನ್ನುವ ವಿಚಾರದಲ್ಲಿ ಸುದೀರ್ಘ ಚರ್ಚೆಯಾಗಿದೆ. ಅಡ್ವೊಕೇಟ್ ಜನರಲ್ ಅವರು ಕಾನೂನಿನ ವಸ್ತುಸ್ಥಿತಿಯ ವಿವರಗಳನ್ನು ತಿಳಿಸಿದ್ದಾರೆ' ಎಂದು ಅವರು ಹೇಳಿದರು.

'ಈ ಕುರಿತು ಆಯೋಗ ರಚಿಸಿ ವರದಿ ಪಡೆದು ಚುನಾವಣೆ ನಡೆಸಬೇಕೇ ಅಥವಾ ಸುಪ್ರೀಂ ಕೋರ್ಟ್‌ನಲ್ಲಿ ಪುನರ್ ಪರಿಶೀಲನಾ ಅರ್ಜಿ ಹಾಕಬೇಕೇ ಎನ್ನುವ ಆಯ್ಕೆ ನಮ್ಮ ಮುಂದಿದೆ. ಹಿಂದುಳಿದ ವರ್ಗದವರಿಗೆ ಮೀಸಲಾತಿ ನೀಡದೆ ಚುನಾವಣೆಗೆ ಹೋಗಲು ಸಾಧ್ಯವಿಲ್ಲ' ಎಂದರು.

ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ಒಲವು

'ಸಭೆಯಲ್ಲಿ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಹೆಚ್ಚಿಸುವ ಬಗ್ಗೆಯೂ ಚರ್ಚೆಯಾಗಿದೆ. ಶೇ 7.5ರಷ್ಟು ಮೀಸಲಾತಿಯನ್ನು ಹೆಚ್ಚಿಸಬೇಕೆಂದು ಸಮುದಾಯವರ ಬೇಡಿಕೆಯಿದೆ. ಅವರ ಜನಸಂಖ್ಯೆಯೂ ಹೆಚ್ಚಾಗಿದೆ. ಹಿಂದಿನ ಸರ್ಕಾರ ಈ ಕುರಿತು ನ್ಯಾಯಮೂರ್ತಿ ನಾಗಮೋಹನ್ ದಾಸ್ ಸಮಿತಿ ರಚಿಸಿತ್ತು. ಆ ಸಮಿತಿಯ ವರದಿಯಲ್ಲಿ ಎಸ್.ಸಿ ಮತ್ತು ಎಸ್.ಟಿಗೆ ಮೀಸಲಾತಿ ಹೆಚ್ಚಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಅದರಂತೆ ನಿರ್ಣಯ ತೆಗೆದುಕೊಳ್ಳಬೇಕಾಗಿದೆ' ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

'ನ್ಯಾಯಮೂರ್ತಿ ನಾಗಮೋಹನದಾಸ್ ಸಮಿತಿ ವರದಿ, ಮಹಾರಾಷ್ಟ್ರದ ಜಯಶ್ರೀ ಪಾಟೀಲ್ ಪ್ರಕರಣ ಹಾಗೂ ಇಂದಿರಾ ಸಹಾನಿ ಪ್ರಕರಣಗಳ ತೀರ್ಪುಗಳ ಹಿನ್ನೆಲೆಯಲ್ಲಿ ಹಾಗೂ ನ್ಯಾಯಮೂರ್ತಿ ಸುಭಾಷ್ ಅಡಿ ಅವರಿಂದಲೂ ಮಧ್ಯಂತರ ವರದಿ ಪಡೆದು ಈ ಜನಾಂಗಕ್ಕೆ ಮೀಸಲಾತಿ ಹೆಚ್ಚು ಮಾಡುವ ಮೂಲಕ ನ್ಯಾಯ ಕೊಡಬೇಕೆಂಬ ತೀರ್ಮಾನವಾಗಿದೆ' ಎಂದರು.

'ಮೀಸಲಾತಿ ಕೊಡುವುದಾದರೆ ಸಂವಿಧಾನಾತ್ಮಕವಾಗಿ ಹಾಗೂ ಸುಪ್ರೀಂ ಕೋರ್ಟ್ ಆದೇಶದ ಅನ್ವಯ ನೀಡಬೇಕು. ಆ ನಿಟ್ಟಿನಲ್ಲಿ ಕೂಡಲೇ ಅಡ್ವೊಕೇಟ್ ಜನರಲ್ ಅವರಿಗೆ ಮೂರೂ ವರದಿಗಳ ಬಗ್ಗೆ ವರದಿ ನೀಡಲು ತಿಳಿಸಲಾಗಿದೆ. ಅದನ್ನು ಸರ್ವ ಪಕ್ಷಗಳ ಸಭೆಯಲ್ಲಿಟ್ಟು, ಒಪ್ಪಿಗೆ ಪಡೆಯಲಾಗುವುದು' ಎಂದರು.

'ಸಭೆಯಲ್ಲಿ ಪರಿಶಿಷ್ಟ ಪಂಗಡದವರಿಗೆ ನ್ಯಾಯ ಒದಗಿಸುವ ಬಗ್ಗೆ ಒಮ್ಮತದ ಅಭಿಪ್ರಾಯ ಮೂಡಿದೆ' ಎಂದರು.

ಸರ್ಕಾರಿ ಶಾಲೆಗೂ ಬಂತು ರೋಬೊ ಟೀಚರ್

ಪ್ರಜಾವಾಣಿ ವಾರ್ತೆ



ಮಲ್ಲೇಶ್ವರದ ಬಾಲಕಿಯರ ಸರ್ಕಾರಿ ಶಾಲೆಯಲ್ಲಿ ರೋಬೊ ಮತ್ತು ವಿದ್ಯಾರ್ಥಿಗಳೊಂದಿಗೆ ಸಚಿವ ಸಿ.ಎನ್‌.ಅಶ್ವತ್ಥನಾರಾಯಣ ಸಂಭ್ರಮಿಸಿದರು

ಬೆಂಗಳೂರು: ವಿದ್ಯಾರ್ಥಿಗಳು ಕಲಿಕೆ ಸುಲಭವಾಗಿಸುವ 'ಈಗಲ್' ರೋಬೊ ಪರೀಕ್ಷಾರ್ಥ ಪ್ರಾತ್ಯಕ್ಷಿಕೆ ಮಲ್ಲೇಶ್ವರದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ನಡೆಯಿತು.

ಕೇಳಿದ ಪ್ರಶ್ನೆಗಳಿಗೆ ರೋಬೊ ನೀಡಿದ ಉತ್ತರ ಕಂಡು ವಿದ್ಯಾರ್ಥಿಗಳು ಬೆರಗಾದರು. 'ಕೆಲವೊಮ್ಮೆ ಸಣ್ಣ ಪುಟ್ಟ ಪ್ರಶ್ನೆ ಕೇಳಿದರೆ ಶಿಕ್ಷಕರು ಸಿಟ್ಟಾಗುವ ಸಾಧ್ಯತೆ ಇರುತ್ತದೆ. ಆದರೆ, ರೋಬೊ ಸಿಟ್ಟು ಮಾಡಿಕೊಳ್ಳುವುದಿಲ್ಲ ಎಂಬ ಖಾತ್ರಿ ಇರುವುದರಿಂದ ಪ್ರಶ್ನೆ ಕೇಳಲು ಮುಜುಗರ ಇರುವುದಿಲ್ಲ' ಎಂದು ವಿದ್ಯಾರ್ಥಿಗಳು ಸಂಭ್ರಮಿಸಿದರು.

'ರೋಬೊ ನಮ್ಮ ಕೆಲಸವನ್ನು ಸುಲಭವಾಗಿಸುತ್ತದೆ. ಆಗ ನಾವು ಮಕ್ಕಳು ಮೇಲೆ ನಿಗಾ ವಹಿಸಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬರೂ ರೋಬೊ ಹೇಳಿದ್ದನ್ನು ಬರೆದುಕೊಳ್ಳುತ್ತಿದ್ದಾರೆಯೋ, ಇಲ್ಲವೋ ಎನ್ನುವುದನ್ನು ಗಮನಿಸಬಹುದು. ಇದು ಮಕ್ಕಳಿಗೆ ಮತ್ತು ನಮಗೂ ಅನುಕೂಲ ಆಗಲಿದೆ' ಎಂದು ಶಿಕ್ಷಕರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಇದು ಪ್ರಾಯೋಗಿಕ ಕಾರ್ಯಕ್ರಮವಾಗಿದ್ದು, ರೋಬೊದ ಸಾಮರ್ಥ್ಯ ವೀಕ್ಷಿಸಲಾಗಿದೆ. ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಜಾಗತಿಕ ಗುಣಮಟ್ಟದ ಬೋಧನೆ ದೊರಕಿಸಲು ಇಂತಹ ರೋಬೊಗಳಿದ್ದರೆ ಒಳ್ಳೆಯದು' ಎಂದು ಅಭಿಪ್ರಾಯಪಟ್ಟರು.

'ರೋಬೊ ಶಿಕ್ಷಕರಿಗೆ ಪರ್ಯಾಯ ಅಲ್ಲ. ಆದರೆ, ಶಿಕ್ಷಕರಿಗೆ ಬೋಧನೆಯಲ್ಲಿ ಸಹಕರಿಸುವ ಕೆಲಸ ಮಾಡಲಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕೆಯ ಮಟ್ಟ ಕೂಡ ಹೆಚ್ಚಾಗಲಿದೆ' ಎಂದು ಹೇಳಿದರು.

'ರೋಬೊವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ತೋರಿಸಲಾಗುವುದು. ಅವರಿಂದಲೇ ಈ ಯೋಜನೆಗೆ ಚಾಲನೆ ಕೊಡಿಸಲಾಗುವುದು. ಮಲ್ಲೇಶ್ವರ ಕ್ಷೇತ್ರದ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಇದನ್ನು ಜಾರಿ ಮಾಡುವ ಉದ್ದೇಶ ಇದೆ' ಎಂದು ಅವರು ವಿವರಿಸಿದರು.

ಈ ಸಂದರ್ಭದಲ್ಲಿ ಇಂಡಸ್ ಟ್ರಸ್ಟ್‌ನ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್‌ರಾಯ್, ಮಲ್ಲೇಶ್ವರ ಬಿಇಒ ಉಮಾದೇವಿ, ಕಾಲೇಜಿನ ಪ್ರಾಂಶುಪಾಲ ರವಿ ಇದ್ದರು.



ನೀರಿನಾಟ... ನಂದಿನಿ ಲೇಔಟ್ ಬಸ್ ನಿಲ್ದಾಣದ ಪಕ್ಕದಲ್ಲಿ ನಿರ್ಮಾಣವಾಗುತ್ತಿರುವ ರಾಜಕಾಲುವೆ ಮೇಲಿನ ಸೇತುವೆಯಲ್ಲಿ ಕ್ಯೂರಿಂಗ್‌ಗೆಂದು ಹಾಕಿರುವ ನೀರಿನಲ್ಲೇ ಕಾರ್ಮಿಕರ ಮಕ್ಕಳು ಆಟವಾಡಿದರು. –ಚಿತ್ರ: ಎಂ.ಎಸ್.ಮಂಜುನಾಥ್

ಗೋಂಧಳಿ ಸಮಾಜದಿಂದ ಸಿ.ಎಂಗೆ ಮನವಿ

'ಅಲೆಮಾರಿ ನಿಗಮಕ್ಕೆ ₹200 ಕೋಟಿ ಕೊಡಿ'

ಪ್ರಜಾವಾಣಿ ವಾರ್ತೆ



ಗೋಂಧಳಿ ಹಾಗೂ ಬುಡುಬುಡುಕೆ ಸಮಾಜದ ಮುಖಂಡರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು. ವಿಧಾನ ಪರಿಷತ್ ಸದಸ್ಯ ಎಚ್‌.ವಿಶ್ವನಾಥ್ ಇದ್ದಾರೆ.

ಬೆಂಗಳೂರು: ಕರ್ನಾಟಕ ಅಲೆಮಾರಿ–ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಸರ್ಕಾರ ₹200 ಕೋಟಿ ಅನುದಾನ ನೀಡಬೇಕು ಎಂದು ಕೋರಿ ಅಖಂಡ ಕರ್ನಾಟಕ ಗೋಂಧಳಿ ಸಮಾಜ ಸಂಘದ ನಿಯೋಗವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿತು.

'ಈ ಬಜೆಟ್‌ನಲ್ಲಿ ಅಲೆಮಾರಿ ನಿಗಮಕ್ಕೆ ₹6 ಕೋಟಿ ಅನುದಾನ ನೀಡಿರುವುದು ಸ್ವಾಗತಾರ್ಹ. ಪ್ರವರ್ಗ–1ರಡಿ ಬರುವ ಗೋಂಧಳಿ, ಬುಡುಬುಡುಕೆ, ಜೋಷಿ, ವಾಸುದೇವ ಸೇರಿದಂತೆ 46 ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳಿವೆ. ಇವರೆಲ್ಲ ಬಡತನದ ಜೀವನ ನಡೆಸುತ್ತಿದ್ದಾರೆ. ಇವರ ಸ್ವಾವಲಂಬಿ ಜೀವನಕ್ಕಾಗಿ ₹200 ಕೋಟಿ ಅನುದಾನವನ್ನು ನಿಗಮಕ್ಕೆ ನೀಡಬೇಕು' ಎಂದು ಸಂಘದ ಅಧ್ಯಕ್ಷ ಕೆ.ಎಂ.ಜಯರಾಮಯ್ಯ ಮನವಿ ಮಾಡಿದರು.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯಗಳಿಗೆ ವಸತಿ ವೆಚ್ಚವನ್ನು ಹೆಚ್ಚಳ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಅದೇ ರೀತಿ ಪ್ರವರ್ಗ–1ರಲ್ಲಿ ಬರುವ 46 ಅಲೆಮಾರಿ ಸಮುದಾಯಗಳಿಗೂ ವಸತಿ ವೆಚ್ಚವನ್ನು ಸರ್ಕಾರ ಹೆಚ್ಚಿಸಬೇಕು. ಇದರಿಂದ ಅಲೆಮಾರಿ ಜೀವನ ನಿಲ್ಲಿಸಿ, ಒಂದೆಡೆ ಜೀವನ ನಡೆಸಲು ಹಾಗೂ ಮಕ್ಕಳ ಶಿಕ್ಷಣಕ್ಕೆ ಬಹಳ ಅನುಕೂಲವಾಗಲಿದೆ' ಎಂದು ಹೇಳಿದರು.

ನಿಧನ ವಾರ್ತೆ

ನಿವೃತ್ತ ಮುಖ್ಯ ನ್ಯಾಯಮೂರ್ತಿ ರಮೇಶ್‌ಚಂದ್ರ ಲಹೋಟಿ

ನವದೆಹಲಿ (ಪಿಟಿಐ): ನಿವೃತ್ತ ಮುಖ್ಯ ನ್ಯಾಯಮೂರ್ತಿ ರಮೇಶ್ ಚಂದ್ರ ಲಹೋಟಿ (81) ಬುಧವಾರ ಸಂಜೆ ಇಲ್ಲಿನ ಆಸ್ಪತ್ರೆಯಲ್ಲಿ ನಿಧನರಾದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಮೇಶ್ ಚಂದ್ರ ಅವರು 2004 ಜೂನ್ 1ರಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2005 ನವೆಂಬರ್ 1ರಂದು ಅವರು ನಿವೃತ್ತರಾಗಿದ್ದರು.

1940 ನ. 1ರಂದು ಜನಿಸಿದ್ದ ಅವರು, 1962ರಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದ್ದರು. 1988ರಲ್ಲಿ ಮಧ್ಯ ಪ್ರದೇಶ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ನೇಮಕಗೊಂಡಿದ್ದ ಅವರು ಬಳಿಕ ಕಾಯಂ ನ್ಯಾಯಮೂರ್ತಿಯಾಗಿ ನೇಮಕವಾದರು. 1998 ಡಿ. 9ರಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು.

ಹುಂಡೈನಿಂದ ಹೊಸ ಅಭಿಯಾನ

ಬೆಂಗಳೂರು: ಹುಂಡೈ ಮೋಟರ್ ಇಂಡಿಯಾ ಕಂಪನಿಯು ತಾನು ತಯಾರಿಸುವ ಎಸ್‌ಯುವಿಗಳ ಬಗ್ಗೆ ವಿವರ ನೀಡುವ ಹೊಸ ಪ್ರಚಾರ ಅಭಿಯಾನಕ್ಕೆ ಬುಧವಾರ ಚಾಲನೆ ನೀಡಿದೆ.

ಕ್ರೇಟಾ, ವೆನ್ಯು, ಅಲ್ಕಜಾರ್, ಟಕ್ಸನ್, ಕೋನಾ ಎಸ್‌ಯುವಿಗಳನ್ನು ಹುಂಡೈ ತಯಾರಿಸುತ್ತಿದೆ. 'ನಮ್ಮ ಕಂಪನಿಯ ಎಸ್‌ಯುವಿಗಳು ಅಡ್ವೆಂಚರ್ ಆಧಾರಿತ ಜೀವನಶೈಲಿಗೆ ಪರ್ಯಾಯ ಪದವಾಗಿ ಬೆಳೆದಿವೆ. ನಮ್ಮ ಕಂಪನಿಯ ಎಸ್‌ಯುವಿಗಳ ಪಟ್ಟಿ ನಿರಂತರವಾಗಿ ಬೆಳೆಯುತ್ತಿದೆ. ಈ ಹೊಸ ಅಭಿಯಾನವು ಎಸ್‌ಯುವಿ ಖರೀದಿಸುವ ಬಯಕೆ ಹೊಂದಿರುವವರಿಗೆ ಹುಂಡೈ ಕಡೆ ಮುಖ ಮಾಡುವಂತೆ ಪ್ರೇರಣೆ ನೀಡಲಿದೆ' ಎಂದು ಕಂಪನಿಯ ಮಾರಾಟ, ಮಾರುಕಟ್ಟೆ ಮತ್ತು ಸೇವಾ ವಿಭಾಗದ ನಿರ್ದೇಶಕ ತರುಣ್ ಗರ್ಗ್ ಹೇಳಿದ್ದಾರೆ.

ಎಸ್‌ಯುವಿಗಳಿಗಾಗಿ ಕಂಪನಿಯು ಪ್ರತ್ಯೇಕ ವೆಬ್‌ಪುಟ ಕೂಡ ಆರಂಭಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಪಘಾತ: ಟಿಇಸಿ ಎಇಇ ವಿರುದ್ಧ ಕ್ರಮ

ಬೆಂಗಳೂರು: ಪಾದಚಾರಿ ಕೆಳಸೇತುವೆ ಮತ್ತು ಮೇಲುಸೇತುವೆಗಳ ನಿರ್ವಹಣೆ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ವಿಫಲವಾಗಿರುವ ಆರೋಪದ ಮೇಲೆ ಬಿಬಿಎಂಪಿಯ ರಸ್ತೆ ಮೂಲಸೌಕರ್ಯ ವಿಭಾಗದ ತಾಂತ್ರಿಕ ಎಂಜಿನಿಯರಿಂಗ್ ಕೋಶದ (ಟಿಇಸಿ) ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಅಶೋಕ ಬಾಗಿ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

ಬಾಗಿ ಅವರನ್ನು ಟಿಇಸಿ ವಿಭಾಗದಿಂದ ಬಿಡುಗಡೆಗೊಳಿಸಲು ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸೂಚನೆ ನೀಡಿದ್ದಾರೆ.

ಹೆಬ್ಬಾಳದಲ್ಲಿ ಬಿಬಿಎಂಪಿ ಕಸ ಸಾಗಣೆ ವಾಹನ ಡಿಕ್ಕಿ ಹೊಡೆದು ಸಂಭವಿಸಿದ ರಸ್ತೆ ಅಪಘಾತದಲ್ಲಿ ಬಾಲಕಿ ಅಕ್ಷಯಾ ಮೃತಪಟ್ಟಿದ್ದರು. ಈ ದುರ್ಘಟನೆ ನಡೆದ ಸ್ಥಳದಲ್ಲೇ ರಸ್ತೆ ಕೆಳಸೇತುವೆ ಇದೆ. ಆದರೆ ಆ ಕೆಳಸೇತುವೆಯಲ್ಲಿ ಮಳೆ ನೀರು ನಿಂತಿತ್ತು. ಬಿಬಿಎಂಪಿಯ ರಸ್ತೆ ಕೆಳ ಸೇತುವೆಗಳು ಹಾಗೂ ಸ್ಕೈವಾಕ್‌ಗಳ ನಿರ್ವಹಣೆ ಸಮರ್ಪಕವಾಗಿ ನಡೆಯದ ಬಗ್ಗೆ ಈ ದುರ್ಘಟನೆಯ ಬೆನ್ನಲ್ಲೇ ಸಾರ್ವಜನಿಕರಿಂದ ಟೀಕೆ ವ್ಯಕ್ತವಾಗಿತ್ತು.

28ಕ್ಕೆ ಒಳಚರಂಡಿ ಸಹಾಯಕರ ಪ್ರತಿಭಟನೆ

ಬೆಂಗಳೂರು: 'ಪಾಲಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 544 ಒಳಚರಂಡಿ ಸಹಾಯಕರನ್ನು ಕಾಯಂಗೊಳಿಸಬೇಕು ಎಂದು ಒತ್ತಾಯಿಸಿ ಮಾರ್ಚ್ 28ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಪಾಲಿಕೆ ಒಳಚರಂಡಿ ಸಹಾಯಕರು ಮತ್ತು ಪೌರ ಕಾರ್ಮಿಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ನಾರಾಯಣ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿಕಿರಣಶಾಸ್ತ್ರ ತಜ್ಞರ ಸಮ್ಮೇಳನ ಇಂದಿನಿಂದ

ಬೆಂಗಳೂರು: ಇಂಡಿಯನ್ ರೇಡಿಯಾಲಜಿಕಲ್ ಆ್ಯಂಡ್ ಇಮೇಜಿಂಗ್ ಅಸೋಸಿಯೇಷನ್‌ನ (ಐಆರ್‌ಐಎ) ಕರ್ನಾಟಕ ವಿಭಾಗವು ವಿಕಿರಣಶಾಸ್ತ್ರ ತಜ್ಞರ 74ನೇ ವಾರ್ಷಿಕ ಸಮ್ಮೇಳನವನ್ನು ಇದೇ ಗುರುವಾರದಿಂದ ಭಾನುವಾರದ ವರೆಗೆ ಇಲ್ಲಿನ ಲಲಿತ್ ಅಶೋಕ ಹೋಟೆಲ್‌ನಲ್ಲಿ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮ್ಮೇಳನದ ಸಂಘಟನಾ ಅಧ್ಯಕ್ಷ ಡಾ. ಹೇಮಂತ್ ಪಟೇಲ್, 'ಅಸೋಸಿಯೇಷನ್ ಅಡಿಯಲ್ಲಿ 18 ಸಾವಿರ ವಿಕಿರಣಶಾಸ್ತ್ರ ತಜ್ಞರು ಹೆಸರು ನೋಂದಾಯಿಸಿಕೊಂಡಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ವಿಕಿರಣಶಾಸ್ತ್ರ ಹೆಚ್ಚು ಬಳಕೆಯಲ್ಲಿದೆ. ಈ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಕೆ ಬಗ್ಗೆ ಚರ್ಚಿಸಲಾಗುತ್ತದೆ. ನಾಲ್ಕು ದಿನಗಳ ಸಮ್ಮೇಳನದಲ್ಲಿ 250 ಮಂದಿ ವಿಷಯ ತಜ್ಞರು ಹಾಗೂ 300 ತಜ್ಞರು ಭಾಗವಹಿಸಲಿದ್ದಾರೆ. 300 ಸಂಶೋಧನಾ ಪ್ರಬಂಧ ಮಂಡನೆಯಾಗಲಿದೆ. 500ಕ್ಕೂ ಅಧಿಕ ಇ ಪೋಸ್ಟರ್ ಪ್ರದರ್ಶನ ಕಾಣಲಿದೆ' ಎಂದರು. ಸಮ್ಮೇಳನಾದ ಸಂಘಟನಾ ಕಾರ್ಯದರ್ಶಿ ಡಾ. ಮಹೇಶ ಎಂ., 'ಸಮ್ಮೇಳನದಲ್ಲಿ 2 ಸಾವಿರ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ವಿಕಿರಣಶಾಸ್ತ್ರಕ್ಕೆ ಸಂಬಂಧಿಸಿದಂತೆ ಕಾರ್ಯಾಗಾರ, ಉಪನ್ಯಾಸ, ಹೊಸ ಆವಿಷ್ಕಾರದ ಬಗ್ಗೆ ತಿಳಿಸಿಕೊಡಲಾಗುತ್ತದೆ' ಎಂದರು.

ಪತಿಯಿಂದ ಕೊಲೆ ಶಂಕೆ: ಆರೋಪ

ನೇಣುಬಿಗಿದ ಸ್ಥಿತಿಯಲ್ಲಿ ಪತ್ರಕರ್ತೆಯ ದೇಹ ಪತ್ತೆ

ಪ್ರಜಾವಾಣಿ ವಾರ್ತೆ



ಶ್ರುತಿ

ಬೆಂಗಳೂರು: ರಾಯಿಟರ್ಸ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಪತ್ರಕರ್ತೆ ಶ್ರುತಿ (35) ಎಂಬುವರ ದೇಹವು ಅವರ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಪತಿ ಅನೀಶ್ ಕೊಯಾಡನ್ ಕೊಲೆ ಮಾಡಿರುವುದಾಗಿ ಆಕೆಯ ಕುಟುಂಬದವರು ದೂರು ನೀಡಿದ್ದಾರೆ.

ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'2017ರಲ್ಲಿ ಶ್ರುತಿ ಹಾಗೂ ಅನೀಶ್ ವಿವಾಹವಾಗಿತ್ತು. ಬೆಂಗಳೂರಿಗೆ ಮರಳಿದ್ದ ದಂಪತಿ ವೈಟ್‌ಫೀಲ್ಡ್‌ನ ನಲ್ಲೂರುಹಳ್ಳಿ ರಸ್ತೆ ಬಳಿಯ ಎಸ್.ವಿ.ಮೈಫೇರ್ ವಸತಿ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ವಾಸವಿತ್ತು. ಖಾಸಗಿ ಕಂಪನಿ ಉದ್ಯೋಗಿಯಾಗಿರುವ ಅನೀಶ್, ಪ್ರತಿನಿತ್ಯ ಶ್ರುತಿಗೆ ಚಿತ್ರಹಿಂಸೆ ನೀಡುತ್ತಿದ್ದ. ಸಂಬಳದ ಹಣವನ್ನೆಲ್ಲಾ ತವರು ಮನೆಗೆ ನೀಡುತ್ತೀಯಾ ಎಂದು ಹೇಳಿ ಹಲ್ಲೆ ನಡೆಸುತ್ತಿದ್ದ. ಒಮ್ಮೊಮ್ಮೆ ಮದ್ಯಪಾನ ಮಾಡಿ ಮನೆಗೆ ಬಂದು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದ ಎಂದು ಶ್ರುತಿ ಸಹೋದರ ನಿಶಾಂತ್ ನಾರಾಯಣನ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

'ತನ್ನ ತಂಗಿಯ ಮೇಲೆ ಅನುಮಾನ ವ್ಯಕ್ತಪಡಿಸುತ್ತಿದ್ದ ಅನೀಶ್, ಮನೆಯಲ್ಲಿ ಹಿಡನ್ ಕ್ಯಾಮೆರಾ ಇಟ್ಟು ಆಕೆಯ ಚಲನ ವಲನಗಳ ಮೇಲೆ ನಿಗಾ ಇಡುತ್ತಿದ್ದ. ಆಕೆ ಮಾತನಾಡುತ್ತಿದುದ್ದನ್ನೆಲ್ಲಾ ರೆಕಾರ್ಡ್ ಮಾಡುತ್ತಿದ್ದ. ವಾರಾಂತ್ಯದಲ್ಲಿ ಪ್ರವಾಸಕ್ಕೆಂದು ಕರೆದುಕೊಂಡು ಹೋಗಿ ಹಿಂಸಿಸುತ್ತಿದ್ದ. ಈ ವರ್ಷದ ಜನವರಿ 15ರಂದು ಹೆಂಡತಿ ಜೊತೆ ಜಗಳ ಮಾಡಿ ಕೊಲೆಗೆ ಯತ್ನಿಸಿದ್ದ. ಆಕೆಯ ಚೀರಾಟ ಕೇಳಿ ಓಡಿ ಬಂದಿದ್ದ ಭದ್ರತಾ ಸಿಬ್ಬಂದಿ ಪ್ರಾಣ ಉಳಿಸಿದ್ದರು ಎಂಬುದಾಗಿಯೂ ದೂರಿನಲ್ಲಿ ವಿವರಿಸಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

'ನನ್ನ ಪತ್ನಿ ಇದೇ 20 ಮತ್ತು 21ರಂದು ಶ್ರುತಿಗೆ ಸತತವಾಗಿ ಕರೆ ಮಾಡಿದ್ದಳು. ಆಕೆ ಕರೆ ಸ್ವೀಕರಿಸಿರಲಿಲ್ಲ. ಹೀಗಾಗಿ 22ರ ಬೆಳಿಗ್ಗೆ ಆಕೆಯ ಅಪಾರ್ಟ್‌ಮೆಂಟ್‌ಗೆ ಹೋಗಿದ್ದೆವು. ಮನೆಯ ಬೀಗ ಹಾಕಿತ್ತು. ಕಿಟಕಿಯಿಂದ ಇಣುಕಿ ನೋಡಿದಾಗ ಒಳಗೆ ಯಾರೂ ಕಾಣಲಿಲ್ಲ. ಭದ್ರತಾ ಸಿಬ್ಬಂದಿ ನೆರವಿನಿಂದ ಬಾಲ್ಕನಿಯ ಬಾಗಿಲು ಮುರಿದು ಒಳಗೆ ಹೋದಾಗ ಮಲಗುವ ಕೋಣೆಯಲ್ಲಿ ಶ್ರುತಿಯ ದೇಹ ನೇಣು ಬಿಗಿದ ಸ್ಥಿತಿಯಲ್ಲಿತ್ತು. ಗಂಡನೇ ಆಕೆಯನ್ನು ಕೊಲೆ ಮಾಡಿರುವ ಶಂಕೆ ಇದೆ ಎಂದೂ ನಿಶಾಂತ್ ದೂರಿನಲ್ಲಿ ತಿಳಿಸಿದ್ದಾರೆ' ಎಂದೂ ವಿವರಿಸಿದ್ದಾರೆ.

ವಿದ್ಯುತ್ ವ್ಯತ್ಯಯ 26ಕ್ಕೆ

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಇದೇ 26 ಮತ್ತು 27ರಂದು ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಜಯನಗರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಥಳಗಳು: ಪಿ.ಪಿ. ಬಡಾವಣೆ, ಬಿಎಸ್‌ಕೆ 5ನೇ ಹಂತ, ಬಿಎಸ್‌ಕೆ 6ನೇ ಹಂತ, ಉತ್ತರಹಳ್ಳಿ, ಭಾರತ್ ಬಡಾವಣೆ, ಜೆಎಚ್ ಬಿಸಿಎಸ್ ಬಡಾವಣೆ, ದ್ವಾರಕಾ ನಗರ.







ದೇವರ ಬಗ್ಗೆ ಟೀಕೆ: ದಲಿತ ವ್ಯಕ್ತಿ ಮೇಲೆ ದೌರ್ಜನ್ಯ

ಜೈಪುರ(ಪಿಟಿಐ): ಹಿಂದೂ ದೇವರ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದಾರೆ ಎನ್ನಲಾದ ದಲಿತ ವ್ಯಕ್ತಿಯನ್ನು ಎಳೆದೊಯ್ದು ಆತನ ಮೂಗನ್ನು ದೇಗುಲದ ಜಗುಲಿಗೆ ತಿಕ್ಕಿಸಿದ ಘಟನೆ ರಾಜಸ್ಥಾನದ ಅಲ್ವಾರ್ ಜಿಲ್ಲೆಯಲ್ಲಿ ನಡೆದಿದೆ.

ಈ ಸಂಬಂಧ 11 ಆರೋಪಿಗಳ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಲ್ಲದೆ ಈ ಪ್ರಕರಣ ಸಂಬಂಧ 7 ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಏನಿದು ಪ್ರಕರಣ?: ಕೆಲ ದಿನಗಳ ಹಿಂದೆ ರಾಜೇಶ್ ಕುಮಾರ್ ಮೇಘ್ವಾಲ್ ತಮ್ಮ ಫೇಸ್‌ಬುಕ್‌ನಲ್ಲಿ 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾ ಬಗ್ಗೆ ಟೀಕಿಸಿದ್ದರು. ಅಲ್ಲದೆ ದೌರ್ಜನ್ಯಗಳು ಕೇವಲ ಪಂಡಿತರ ಮೇಲಷ್ಟೇ ನಡೆದಿವೆಯೇ, ದಲಿತರ ಮೇಲೆ ನಡೆದಿಲ್ಲವೇ ಎಂದು ಪ್ರಶ್ನಿಸಿದ್ದರು. ಈ ಪೋಸ್ಟ್‌ಗೆ ಕೆಲವರು ಜೈ ಶ್ರೀರಾಮ್ ಮತ್ತು ಜೈ ಶ್ರೀಕೃಷ್ಣ ಎಂದು ಪ್ರತಿಕ್ರಿಯೆ ನೀಡಿದ್ದರು. ಈ ವೇಳೆ ದೇವರ ಬಗ್ಗೆ ಮೇಘ್ವಾಲ್ ಅವರು ಅವಹೇಳನಕಾರಿಯಾಗಿ ಪ್ರತಿಕ್ರಿಯೆ ನೀಡಿದ್ದರು. ಆದರೆ, ತಮ್ಮ ತಪ್ಪಿನ ಅರಿವಾಗಿ ಮೇಘ್ವಾಲ್ ಅವರು ಕ್ಷಮಾಪಣೆಯನ್ನೂ ಕೋರಿದ್ದರು. ಆದರೆ ಕೆಲವು ಸ್ಥಳೀಯರು ಮೇಘ್ವಾಲ್ ಅವರನ್ನು ದೇವಸ್ಥಾನಕ್ಕೆ ಎಳೆದೊಯ್ದು, ಬಲವಂತದಿಂದ ದೇವಸ್ಥಾನದ ಜಗುಲಿಗೆ ಮೂಗು ತಿಕ್ಕಿಸಿದ್ದರು. ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿತ್ತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ,
ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ–562101
ಇ–ಮೇಲ್: dhochikballapur@gmail.com ದೂ: 08156–277034
ಸಂ: ಜಿಆಕುಕ/ಚಿಪುರ/ಪಾರ್ಟಿಷನ್/ಟೆಂಡರ್/21/2021–22 ದಿ: 18.03.2022

ಆಸಕ್ತಿ ವ್ಯಕ್ತಪಡಿಸುವಿಕೆ ಟೆಂಡರ್ ಅಧಿಸೂಚನೆ

ವಿಷಯ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನದಲ್ಲಿನ ಜಿಲ್ಲಾ ಸರ್ವೇಕ್ಷಣಾಧಕಾರಿಗಳ ಕಛೇರಿ ಹಾಗೂ ಜಿಲ್ಲಾ ಮಲೇರಿಯಾಧಿಕಾರಿಗಳ ಕಛೇರಿಗೆ ಅಲ್ಯೂಮಿನಿಯಂ ಪಾರ್ಟಿಷನ್ ಕಾಮಗಾರಿ. ಎಲೆಕ್ಟ್ರಾನಿಕ್, ಇತರೆ ಪಿಠೋಪಕರಣಗಳನ್ನು ಪೂರೈಸಿ ಅಳವಡಿಸುವ ಬಗ್ಗೆ. **ಉಲ್ಲೇಖ:** 2021–22ನೇ ಸಾಲಿನ ಕ್ರಿಯಾ ಯೋಜನೆಯ ಅನುಮೋದನೆಯಂತೆ.

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ 2021–22ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಇಲಾಖೆಯ ಅಧೀನದಲ್ಲಿನ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ ಹಾಗೂ ಜಿಲ್ಲಾ ಮಲೇರಿಯಾಧಿಕಾರಿಗಳ ಕಛೇರಿಗೆ ಅಲ್ಯುಮಿನಿಯಂ ಪಾರ್ಟಿಷನ್ ಕಾಮಗಾರಿ. ಎಲೆಕ್ಟ್ರಾನಿಕ್, ಇತರೆ ಪಿಠೋಪಕರಣಗಳನ್ನು ಪೂರೈಸಿಕೊಳ್ಳುವ ಪ್ರಕ್ರಿಯೆಯನ್ನು ಆಸಕ್ತಿ ವ್ಯಕ್ತಪಡಿಸುವಿಕೆ (EOI) ಮುಖಾಂತರ ಖರೀದಿಸಲು ಅಲ್ಪಾವಧಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ವಿವರಗಳು ಕೆಳಕಂಡಂತಿದೆ. **(1)** ಟೆಂಡರ್ ಪ್ರಕಟಣೆಯ ದಿನಾಂಕ: **18.03.2022 (2)** ಇಎಂಡಿ ಮೊತ್ತ: **ರೂ.12,500/- +** ಟೆಂಡರ್ ಶುಲ್ಕ **ರೂ. 500/-. (3)** ಟೆಂಡರ್ ಪ್ರಾರಂಭದ ದಿನಾಂಕ (Web Portal): **18.03.2022 ರಂದು ಮಧ್ಯಾಹ್ನ 4.00 ಗಂಟೆಗೆ. (4)** ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ & ಸಮಯ: **24.03.2022 ರಂದು ಮಧ್ಯಾಹ್ನ 4.00 ಗಂಟೆಗೆ. (5)** ಪ್ರಿ ಬಿಡ್ ಸಭೆಯ ದಿನಾಂಕ & ಸಮಯ: **21.03.2022 ರಂದು ಬೆಳಿಗ್ಗೆ 11.00 ಗಂಟೆಗೆ. (6)** ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **25.03.2022 ರಂದು ಮಧ್ಯಾಹ್ನ 4.00 ಗಂಟೆಗೆ. (7)** ಸಾಧ್ಯವಾದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **28.03.2022 ಮಧ್ಯಾಹ್ನ 4.00 ಗಂಟೆಗೆ.** ಹೆಚ್ಚಿನ ವಿವರಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ಇಲ್ಲಿನ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ
ವಾ.ಸಾ.ಸಂ.ಇ/ಚಿಕ್ಕಬಳ್ಳಾಪುರ/ ಆರ್.ಓ.ಸಂಖ್ಯೆ440/ ಎಂಸಿ&ಎ/ 2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಿದ್ಧಯ್ಯ ರಸ್ತೆ: ದುರಸ್ತಿಯಾಗದ ಚರಂಡಿ, ಸ್ಥಳೀಯರು ಹೈರಾಣು

ತೆರೆದ ಚರಂಡಿಯ ಅವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಲ್ಸನ್ ಗಾರ್ಡನ್‌ನ ಸಿದ್ಧಯ್ಯ ರಸ್ತೆಯಲ್ಲಿ ಅಪೂರ್ಣ ಕಾಮಗಾರಿಯಿಂದಾಗಿ ಚರಂಡಿ ಅಲ್ಲಲ್ಲಿ ತೆರೆದುಕೊಂಡಿದೆ. ನಾಲ್ಕು ವರ್ಷಗಳು ಕಳೆದರೂ ಚರಂಡಿ ದುರಸ್ತಿಯಾಗದ ಕಾರಣ ಸ್ಥಳೀಯರು ಹೈರಾಣಾಗಿದ್ದಾರೆ.

‘ಸುಮಾರು ಮುಕ್ಕಾಲು ಕಿ.ಮೀವರೆಗೆ ಇರುವ ಸಿದ್ಧಯ್ಯ ರಸ್ತೆಯಲ್ಲಿ ಐದು ವರ್ಷಗಳ ಹಿಂದೆ ವೈಟ್ ಟಾಪಿಂಗ್ ಕಾಮಗಾರಿ ನಡೆಸಲು ಮುಂದಾಗಿದ್ದರು. ಕಾಮಗಾರಿ ಭರದಲ್ಲಿ ರಸ್ತೆಯ ಅಕ್ಕಪಕ್ಕದ ಚರಂಡಿಗಳನ್ನು ಕೆಡವಿದ್ದರು. ಆದರೆ, ಸರ್ಕಾರ ಬದಲಾದಂತೆ ವೈಟ್‌ಟಾಪಿಂಗ್ ನಡೆಯಲೇ ಇಲ್ಲ. ಆದರೆ, ಅಂದಿನಿಂದ ಈವರೆಗೆ ಚರಂಡಿಗಳು ಬಾಯ್ತೆರೆದುಕೊಂಡೇ ಇವೆ’ ಎಂದು ಸ್ಥಳೀಯ ನಿವಾಸಿ ಶ್ರೀನಿವಾಸ್ ದೂರಿದರು.

‘ಚರಂಡಿಗಳನ್ನು ತೆರೆದಿದ್ದರಿಂದ ಒಳಚರಂಡಿ ವ್ಯವಸ್ಥೆಯೂ ಹಾಳಾಗಿದೆ. ಚರಂಡಿ ಮೇಲಿನ ಚಪ್ಪಡಿಗಳನ್ನು ಸರಿಸಿರುವುದರಿಂದ ಪಾದಚಾರಿಗಳಿಗೆ ಸಮಸ್ಯೆಯಾಗಿದೆ. ಚರಂಡಿ ದುರ್ನಾತದಿಂದ ಮೂಗು ಮುಚ್ಚಿ ನಡೆದಾಡುತ್ತೇವೆ. ಅಲ್ಪ ಮಳೆಯಾದರೂ ಈ ರಸ್ತೆಯಲ್ಲಿ ನೀರು ನಿಲ್ಲುತ್ತದೆ. ಮಳೆಗಾಲ ಬಂದರೆ ಸ್ಥಳೀಯರ ಪಾಡು ಹೇಳತೀರದು’ ಎಂದು ಬೇಸರ ವ್ಯಕ್ತಪಡಿಸಿದರು. ‘ಈ ಬಗ್ಗೆ ಪಾಲಿಕೆ ಅಧಿಕಾರಿಗಳನ್ನು ಕೇಳಿದಾಗ ‘ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ’ ಎಂದು ಜಾರಿಕೊಳ್ಳುತ್ತಾರೆ. ಯಾರಿಗೆ ನಮ್ಮ ಸಮಸ್ಯೆ ತಿಳಿಸಬೇಕು ಎಂಬುದೇ ತಿಳಿಯುತ್ತಿಲ್ಲ. ಸಂಬಂಧಪಟ್ಟವರು ಚರಂಡಿಗಳನ್ನು ಗುಂಡಿಮುಕ್ತಗೊಳಿಸಲು ಕ್ರಮ ಕೈಗೊಳ್ಳಬೇಕು’ ಎಂದು ಮನವಿ ಮಾಡಿದರು.



ಸಿದ್ಧಯ್ಯ ರಸ್ತೆಯಲ್ಲಿರುವ ಚರಂಡಿ ಮಾರ್ಗ ತೆರದುಕೊಂಡಿರುವುದು

ಸ್ಥಳೀಯ ನಿವಾಸಿ ರಾಮಪ್ರಸಾದ್, ‘ಚರಂಡಿ ನಿರ್ವಹಣೆ ಹೊತ್ತಿದ್ದ ಗುತ್ತಿಗೆದಾರರು ಸರಿಯಾಗಿ ಕೆಲಸ ಮಾಡಲಿಲ್ಲ. ಇದರಿಂದಲೇ ಚರಂಡಿಗಳು ಈ ದುಃಸ್ಥಿತಿಯಲ್ಲಿವೆ. ಈ ರಸ್ತೆಯಲ್ಲಿ ಬ್ಯಾಂಕ್, ಶಾಲೆಗಳು ಹಾಗೂ ವಾಣಿಜ್ಯ ಮಳಿಗೆಗಳಿದ್ದು, ಅವುಗಳ ಮುಂದೆಯೇ ಚರಂಡಿ ಗುಂಡಿಗಳಿವೆ’ ಎಂದರು.

‘ಗುಂಡಿಗಳಿಗೆ ಹಲವರು ಬಿದ್ದಿರುವ ಘಟನೆಗಳು ನಡೆದಿವೆ. ಚರಂಡಿಗಳು ಜನರನ್ನು ಬಲಿ ಪಡೆಯುವಂತಿವೆ. ವಿದ್ಯಾರ್ಥಿಗಳು, ಮಕ್ಕಳು, ವೃದ್ಧರು ಪಾಲಿಗೆ ಈ ರಸ್ತೆ ಮಾರಕವಾಗಿ ಪರಿಣಮಿಸಿದ್ದು, ದೂಳಿನಲ್ಲೇ ವರ್ಷಗಳನ್ನು ಕಳೆದಿದ್ದೇವೆ. ಅವಘಡಗಳು ಹೆಚ್ಚಾಗದಂತೆ ತಡೆಯಲು ಇಲ್ಲಿನ ಚರಂಡಿಗಳನ್ನು ಕೂಡಲೇ ದುರಸ್ತಿ ಮಾಡುವುದು ಒಳ್ಳೆಯದು’ ಎಂದರು.

ಸುದ್ದಿ 2 ನಿಮಿಷ

ಭೋವಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿಗೆ ಬೆದರಿಕೆ: ದೂರು

ಬೆಂಗಳೂರು: ಬಿಬಿಎಂಪಿ ಆಡಳಿತ ವಿಭಾಗದ ಉಪ ಆಯುಕ್ತರಾಗಿದ್ದ ಯೋಗೇಶ್ ಅವರು ತನಗೆ ಅತ್ಯಾಚಾರದ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಆರ್. ಲೀಲಾವತಿ ದೂರು ನೀಡಿದ್ದಾರೆ. ಬಸವನಗುಡಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಇದೇ 18ರಂದು ಕಚೇರಿಗೆ ಬಂದಿದ್ದ ಯೋಗೇಶ್, ಏಕಾಏಕಿ ನನ್ನ ಕೊಠಡಿಯೊಳಗೆ ಪ್ರವೇಶಿಸಿದ್ದರು. ಭೋವಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಪ್ರಭಾರ ಹುದ್ದೆ ತನಗೆ ನೀಡುವಂತೆ ಏರುಧ್ವನಿಯಲ್ಲಿ ಕೇಳಿದ್ದರು. ಕಚೇರಿ ಸಿಬ್ಬಂದಿಯನ್ನು ಕರೆದು ಕೇಳಿದಾಗ ಅವರು ಸರ್ಕಾರದಿಂದ ಯಾವುದೇ ಆದೇಶ ಬಂದಿಲ್ಲ ಎಂಬುದನ್ನು ಗಮನಕ್ಕೆ ತಂದಿದ್ದರು. ಅಷ್ಟಕ್ಕೆ ನನ್ನ ಮೇಲೆ ರೇಗಾಡಿದ್ದ ಅವರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮದ್ಯಪಾನ ಮಾಡಿದ್ದ ಯೋಗೇಶ್ ಅವರು ಕೈಹಿಡಿದು ಎಳೆದಾಡಿ ನೆಲಕ್ಕೆ ತಳ್ಳಿದ್ದರು. ಪ್ರಭಾರ ಹುದ್ದೆ ಕೊಡದಿದ್ದರೆ ಮನೆಗೆ ನುಗ್ಗಿ ಅತ್ಯಾಚಾರ ಮಾಡುವುದಾಗಿ ಬೆದರಿಸಿದ್ದರು. ಕೊಲೆ ಬೆದರಿಕೆಯನ್ನೂ ಹಾಕಿದ್ದರು ಎಂದೂ ದೂರಿನಲ್ಲಿ ವಿವರಿಸಲಾಗಿದೆ’ ಎಂದು ಹೇಳಿದ್ದಾರೆ.

‘ಅಧಿಕಾರ ವಹಿಸಿಕೊಳ್ಳುವಂತೆ ನನಗೆ ಸರ್ಕಾರದಿಂದ ಆದೇಶ ಬಂದಿತ್ತು. ಅದರಂತೆ ಕಚೇರಿಗೆ ಹೋಗಿ ವಿನಮ್ರತೆಯಿಂದಲೇ ಲೀಲಾವತಿಯವರ ಜೊತೆ ಮಾತನಾಡಿದ್ದೆ. ಆದೇಶದ ಪ್ರತಿ ಬಂದಿಲ್ಲ ಎಂದರು. ಅಧಿಕಾರ ಬಿಟ್ಟುಕೊಡಲು ನಿರಾಕರಿಸಿದ್ದರಿಂದ ಮನೆಗೆ ಹಿಂತಿರುಗಿದ್ದೆ’ ಎಂದು ಯೋಗೇಶ್ ಪ್ರತಿಕ್ರಿಯಿಸಿದ್ದಾರೆ.

ಎಎಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಬೆಂಗಳೂರು: ಆಮ್ ಆದ್ಮಿ ಪಕ್ಷದ (ಎಎಪಿ) ಸದಸ್ಯತ್ವ ಅಭಿಯಾನಕ್ಕೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಬುಧವಾರ ಚಾಲನೆ ನೀಡಿದರು.

ಪ್ರೆಸ್‌ಕ್ಲಬ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ವೆಂಕನಗೌಡ ಗೋವಿಂದಗೌಡರ, ವೈದ್ಯ ದೇವಾಂಗ್ ಗೌತಮ್, ವಕೀಲರಾದ ತೇಜಸ್ವಿನಿ, ಡಿ.ಯು.ಸೆಂಥಿಲ್ ಕುಮಾರ್, ಕಾನೂನು ವಿದ್ಯಾರ್ಥಿನಿ ವರ್ಷಿಕ ಅವರು ಸದಸ್ಯತ್ವ ಪಡೆಯುವ ಮೂಲಕ ಪಕ್ಷಕ್ಕೆ ಸೇರ್ಪಡೆಯಾದರು.

‘ದೇಶದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪಕ್ಷ ಎಂಬ ಕೀರ್ತಿಗೆ ಎಎಪಿ ಪಾತ್ರವಾಗಿದೆ. ಪಕ್ಷ ರಚನೆಯಾಗಿ ದಶಕ ದಾಟುವ ಮುನ್ನವೇ ಎರಡು ರಾಜ್ಯಗಳಲ್ಲಿ ಅಧಿಕಾರಕ್ಕೇರಿದೆ. ಕರ್ನಾಟಕದಲ್ಲೂ ಎಎಪಿಗೆ ಉತ್ತಮ ಸ್ಪಂದನೆ ಸಿಕ್ಕಿದ್ದು, ಪಕ್ಷವನ್ನು ಹೆಮ್ಮರವಾಗಿ ಬೆಳೆಸುವ ಉದ್ದೇಶದಿಂದ ಸದಸ್ಯತ್ವ ಅಭಿಯಾನ ಆರಂಭಿಸಲಾಗಿದೆ’ ಎಂದು ಪೃಥ್ವಿ ರೆಡ್ಡಿ ಹೇಳಿದರು.

‘ಅಭಿಯಾನದ ಅಂಗವಾಗಿ ‘ಆಪ್ ಮಿತ್ರ’ ಎನ್ನುವ ಮೊಬೈಲ್ ಆ್ಯಪ್ ತಂತ್ರಾಂಶ ಹೊರತಂದಿದ್ದೇವೆ. ಈ ತಂತ್ರಜ್ಞಾನ ಬಳಸಿಯೂ ಪಕ್ಷದ ಸದಸ್ಯತ್ವ ಪಡೆದುಕೊಳ್ಳಬಹುದು. ಒಂದು ತಿಂಗಳಲ್ಲಿ 50 ಲಕ್ಷ ಸದಸ್ಯರನ್ನು ನೋಂದಣಿ ಮಾಡುವ ಗುರಿ ಹೊಂದಿದ್ದೇವೆ’ ಎಂದರು.

ಮೊಬೈಲ್ ಕದಿಯಲು ದೆಹಲಿಯಿಂದ ಬಂದವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಮೂಲಕ ನಗರದಲ್ಲಿ ಆಯೋಜನೆಯಾಗಿದ್ದ ಡಿಜೆ ಕಾರ್ಯಕ್ರಮವೊಂದರ ಮಾಹಿತಿ ಪಡೆದು, ಮೊಬೈಲ್ ಕದಿಯಲೆಂದೇ ವಿಮಾನವೇರಿ ನವದೆಹಲಿಯಿಂದ ಬಂದಿದ್ದ ನಾಲ್ವರನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸದ್ದಾಂ (32), ವಸೀಂ ಅಹಮದ್ (32), ಮೊಹಮ್ಮದ್ ಆದಿಲ್ (33) ಹಾಗೂ ಇರ್ಷಾದ್ (29) ಬಂಧಿತರು. ಇವರಿಂದ ₹10.5 ಲಕ್ಷ ಮೌಲ್ಯದ ಒಟ್ಟು 24 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಮತ್ತೊಬ್ಬ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಕೆಡಬ್ಲ್ಯೂ-1 & 4 ರೀತ್ಯಾ ಪುರಾತನ ಸ್ಮಾರಕಗಳ ಸಂರಕ್ಷಣೆ, ಒಟ್ಟು 06 ಕಾಮಗಾರಿಗಳಿದ್ದು (ಇಂಡೆಂಟ್ ನಂ.DAMH/2021-22/OW/WORK WORK INDENT-723, 730, 731, 732, 733, 734] ಇವುಗಳ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.5.00ಲಕ್ಷಗಳು ಮತ್ತು ಗರಿಷ್ಠ ರೂ.156.50 ಲಕ್ಷಗಳು ಮತ್ತು ಇ.ಎಂ.ಡಿ. ಕನಿಷ್ಠ ಮೊತ್ತ ರೂ.12,500/- ಮತ್ತು ಗರಿಷ್ಠ ಮೊತ್ತ ರೂ.2,34,750/-ಗಳು ಈ ಕಾಮಗಾರಿಗಳಿಗೆ ಐಟಂವಾರು ಟೆಂಡರ್‌ನ್ನು ಸ್ಟ್ಯಾಂಡರ್ಡ್ ಟೆಂಡರ್ ಡ್ಯಾಕುಮೆಂಟ್ ನಲ್ಲಿನ ಷರತ್ತಿಗಳಿಗೆನುಗುಣವಾಗಿ ಕರೆಯಲಾಗಿದ್ದು, ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆ/ಕೇಂದ್ರ ಲೋಕೋಪಯೋಗಿ ಇಲಾಖೆ/ ನೋಂದಾಯಿತ ಯಾವುದೇ ರಾಜ್ಯ ಪುರಾತತ್ವ ಇಲಾಖೆ/ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಲ್ಲಿ ಇಂತಹ ಸಂರಕ್ಷಣಾ ಕಾಮಗಾರಿಯನ್ನು ನಿರ್ವಹಿಸಿರುವಂತಹ ಗುತ್ತಿಗೆದಾರರು ನಿಗದಿಪಡಿಸಿರುವ ವರ್ಗಗಳ ಅನುಸಾರ ಈ ಕಾಮಗಾರಿಗಳ ಟೆಂಡರ್‌ಗೆ ಭಾಗವಹಿಸಬಹುದಾಗಿರುತ್ತದೆ. ಟೆಂಡರ್‌ದಾರರು ತಿಳುವಳಿಕೆ ಪತ್ರದ ಕ್ಲಾಸ್-3.1 ಮತ್ತು 3.4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ-ಪೋರ್ಟಾಲ್‌ನಲ್ಲಿ ದಿ: 17.03.2022 ರಿಂದ ಪಡೆಯಬಹುದು. ಕಾಮಗಾರಿಗೆ ಭರ್ತಿ ಮಾಡಿದ ಬಿಡ್‌ಗಳನ್ನು ದಿ: 31.03.2022ರ 16.00 ಗಂಟೆಯೊಳಗೆ ಟೆಂಡರ್‌ನ್ನು ಸಲ್ಲಿಸುವುದು ಹಾಗೂ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ದಿ: 04.04.2022 ರಂದು 11.00 ಗಂಟೆಯ ನಂತರ ತೆರೆಯಲಾಗುವುದು.

ಸಹಿ/- ಆಯುಕ್ತರು,
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.

DIPR/DDMYS/MCA/1061/2021-22

ನೋಂದಣಿ ಶುಲ್ಕ ರಿಯಾಯಿತಿ: ಅವಧಿ ವಿಸ್ತರಣೆ?

ಬೆಂಗಳೂರು: ಆಸ್ತಿ ಖರೀದಿ, ಕರಾರು ಪತ್ರ, ಭೋಗ್ಯ ಪತ್ರಗಳನ್ನು ನೋಂದಣಿ ಮಾಡಿಸುವಾಗ ಪಾವತಿಸುವ ನೋಂದಣಿ ಮತ್ತು ಮುದ್ರಾಂಕ ಶುಲ್ಕದಲ್ಲಿ ರಿಯಾಯಿತಿ ಪಡೆಯಲು ಅನುಕೂಲ ಆಗುವಂತೆ ಮಾರ್ಗಸೂಚಿ ದರವನ್ನು ಮಾರ್ಚ್ 31ರವರೆಗೆ ಶೇ 10ರಷ್ಟು ಕಡಿತಗೊಳಿಸಿರುವುದನ್ನು ಮುಂದುವರಿಸುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಎಚ್.ಎಂ. ರಮೇಶ್ ಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, '2021-22ರಲ್ಲಿ ₹ 12,655 ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಮಾರ್ಚ್ 17ರವರೆಗೆ ₹ 13,047 ಕೋಟಿ ಸಂಗ್ರಹಿಸಲಾಗಿದೆ. ಪ್ರಸಕ್ತ ಆರ್ಥಿಕ ವರ್ಷ ಕೊನೆಗೊಳ್ಳುವ ವೇಳೆಗೆ ಇನ್ನೂ ₹ 1,000 ಕೋಟಿ ಸಂಗ್ರಹವಾಗುವ ನಿರೀಕ್ಷೆಯಿದೆ' ಎಂದರು.

'ಕೆಲವು ಕಡೆಗಳಲ್ಲಿ ಮಾರ್ಗಸೂಚಿ ದರ ನಿಗದಿಯಲ್ಲಿ ವ್ಯತ್ಯಾಸ ಆಗಿರುವ ಬಗ್ಗೆ ಸದಸ್ಯರು ಗಮನ ಸೆಳೆದಿದ್ದಾರೆ. ಅದನ್ನು ಪರಿಶೀಲಿಸಲಾಗುವುದು. ಕೋವಿಡ್ ವೇಳೆಯಲ್ಲಿ ನೋಂದಣಿ ಪ್ರಕ್ರಿಯೆಗಳಿಗೆ ಉತ್ತೇಜನ ನೀಡಲು ಶೇ 10ರಷ್ಟು ರಿಯಾಯಿತಿ ನೀಡಲಾಗಿತ್ತು' ಎಂದರು.

ಕಳೆನಾಶಕದ ಬಳಕೆ, ಅದರ ದುಷ್ಪರಿಣಾಮಗಳ ಕುರಿತು 'ಪ್ರಜಾವಾಣಿ' ವರದಿ ಪ್ರಸ್ತಾವ

'ಗ್ಲೈಫೋಸೆಟ್ ನಿರ್ಬಂಧಕ್ಕೆ ಅಗತ್ಯ ಕ್ರಮ'

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಗ್ಲೈಫೋಸೆಟ್ ಕಳೆನಾಶಕದ ದುಷ್ಪರಿಣಾಮಗಳ ಕುರಿತು ವೈಜ್ಞಾನಿಕ ಅಧ್ಯಯನ ನಡೆಸಿ, ವರದಿ ಪಡೆದ ಬಳಿಕ ಅದರ ಬಳಕೆಯನ್ನು ನಿರ್ಬಂಧಿಸಲು ಕೇಂದ್ರಕ್ಕೆ ಶಿಫಾರಸು ಮಾ ಡ ಲಾ ಗು ವು ದು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

ರಾಜ್ಯದಲ್ಲಿ ಹೆಚ್ಚುತ್ತಿರುವ ಗ್ಲೈಫೋಸೆಟ್ ಬಳಕೆ ಮತ್ತು ಅದರ ದುಷ್ಪರಿಣಾಮಗಳ ಕುರಿತು 'ಪ್ರಜಾವಾಣಿ'ಯ ಸೋಮವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ವಿಶೇಷ ವರದಿ ಆಧರಿಸಿ ಮಂಗಳವಾರ ವಿಧಾನಸಭೆಯ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಎ.ಟಿ. ರಾಮಸ್ವಾಮಿ, 'ಈ ಕಳೆನಾಶಕದ ಬಳಕೆಯನ್ನು ತಕ್ಷಣ ನಿಷೇಧಿಸಿ' ಎಂದು ಆಗ್ರಹಿಸಿದರು.

'ಇದೊಂದು ಅತ್ಯಂತ ಅಪಾಯಕಾರಿ ರಾಸಾಯನಿಕ. ಕೇರಳ, ಹರಿಯಾಣ, ಪಂಜಾಬ್ ಸೇರಿದಂತೆ ಹಲವು ರಾಜ್ಯಗಳು ಈ ಕಳೆನಾಶಕವನ್ನು ನಿಷೇಧಿಸಿವೆ. ಇದರ ಬಳಕೆಯಿಂದ ಭೂಮಿ ಬರಡಾಗುತ್ತಿದೆ. ಎರೆಹುಳುಗಳೂ ಸಾಯುತ್ತಿವೆ. ಜಲಮೂಲಗಳು ವಿಷಕಾರಿಯಾಗುತ್ತಿವೆ. ಕೃಷಿ ಇಲಾಖೆ ಇನ್ನೂ ಬದುಕಿದೆಯಾ' ಎಂದು ಪ್ರಶ್ನಿಸಿದರು.

ಉತ್ತರ ನೀಡಿದ ಕೃಷಿ ಸಚಿವ ಬಿ.ಸಿ. ಪಾಟೀಲ, 'ಗ್ಲೈಫೋಸೆಟ್ ಬಳಕೆಯನ್ನು ಕೇಂದ್ರೀಯ ಕೀಟನಾಶಕ ಮಂಡಳಿ ಅನುಮೋದಿಸಿದೆ. ಬೆಳೆಗಳಿಲ್ಲದ ಮತ್ತು ಚಹಾ ತೋಟಗಳಲ್ಲಿ ಬಳಕೆಗೆ ಅನುಮತಿ ಇದೆ. ಈ ರಾಸಾಯನಿಕದ ಬಳಕೆಯಿಂದ ಆಗುವ ತೊಂದರೆಗಳ ಕುರಿತು ರೈತರಿಂದ ಯಾವುದೇ ದೂರು ಬಂದಿಲ್ಲ' ಎಂದರು. ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ರೈತರಿಂದ ದೂರು ಬಂದಿಲ್ಲ ಎಂಬ ಉತ್ತರ ಹೇಳಬೇಡಿ. ಆಹಾರ ವಿಷವಾಗುತ್ತಿದೆ. ಸರಿಯಾದ ಕ್ರಮ ಕೈಗೊಳ್ಳಬೇಕು' ಎಂದರು.

ಪುನಃ ಪ್ರತಿಕ್ರಿಯಿಸಿದ ಪಾಟೀಲ, 'ಗ್ಲೈಫೋಸೆಟ್ ಬಳಕೆ ಮತ್ತು ಅದರ ದುಷ್ಪರಿಣಾಮಗಳ ಕುರಿತು ಕೇಂದ್ರೀಯ ವಿಷ ವಿಜ್ಞಾನ ಸಂಶೋಧನಾ ಸಂಸ್ಥೆಯಿಂದ ವೈಜ್ಞಾನಿಕ ಅಧ್ಯಯನ ಮಾಡಿಸಿ, ವರದಿ ಪಡೆಯಲಾಗುವುದು. ಬಳಿಕ ಅಗತ್ಯ ಕಂಡುಬಂದಲ್ಲಿ ಈ ರಾಸಾಯನಿಕದ ಬಳಕೆ ನಿರ್ಬಂಧಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೇವೆ' ಎಂದು ಭರವಸೆ ನೀಡಿದರು.

'ರಂಗನಾಥಸ್ವಾಮಿ ಭೂಮಿ: ತನಿಖೆಗೆ ಎಸ್‌ಐಟಿ'

ಬೆಂಗಳೂರು: ಶ್ರೀರಂಗಪಟ್ಟಣದ ಪುರಾತನ ಶ್ರೀರಂಗನಾಥಸ್ವಾಮಿ ದೇವಾಲಯಕ್ಕೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ದಾನ ರೂಪದಲ್ಲಿ ನೀಡಿದ್ದ 1,198 ಎಕರೆ ಜಮೀನಿನಲ್ಲಿ ನೂರಾರು ಎಕರೆಯನ್ನು ಭೂಗಳ್ಳರಿಗೆ ಅಕ್ರಮವಾಗಿ ಪರಭಾರೆ ಮಾಡಿರುವ ಪ್ರಕರಣದ ತನಿಖೆಯನ್ನು 'ವಿಶೇಷ ತನಿಖಾ ತಂಡ'ಕ್ಕೆ (ಎಸ್‌ಐಟಿ) ವಹಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಎನ್. ರವಿಕುಮಾರ್ ಅವರು, 'ದೇವರು, ದೇವಸ್ಥಾನಕ್ಕೆ ಸೇರಿದ ಜಾಗವನ್ನು ಭೂಗಳ್ಳರಿಗೆ ಅಧಿಕಾರಿಗಳು ಪರಭಾರೆ ಮಾಡಿದ್ದಾರೆ. ಒಮ್ಮೆ ದಾನವಾದ ಜಮೀನನ್ನು ಮತ್ತೆ ದಾನ ನೀಡುವುದು ಅಕ್ಷಮ್ಯ ಅಪರಾಧ. ತಪ್ಪು ಮಾಡಿದ ಅಧಿಕಾರಿಗಳು ಯಾರು? ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ. ಈ ಪ್ರಕರಣದಲ್ಲಿ ಅಧಿಕಾರಿಗಳೇ ಸರ್ಕಾರ, ಪೊಲೀಸ್, ನ್ಯಾಯಾಧೀಶರು ಎಲ್ಲವೂ ಆಗಿದ್ದಾರೆ. ಆದ್ದರಿಂದ, ಈ ಪ್ರಕರಣವನ್ನು ಎಸ್‌ಐಟಿಗೆ ವಹಿಸಬೇಕು' ಎಂದು ಆಗ್ರಹಿಸಿದರು.

ಇದಕ್ಕೆ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಪರವಾಗಿ ಉತ್ತರಿಸಿದ ವಸತಿ ಸಚಿವ ವಿ. ಸೋಮಣ್ಣ, 'ಪ್ರಕರಣವನ್ನು ಎಸ್‌ಐಟಿಗೆ ವಹಿಸಲಾಗುವುದು. ತಪ್ಪಿತಸ್ಥರ ವಿರುದ್ಧ ಮುಲಾಜಿಲ್ಲದೆ ಕ್ರಮ ಜರುಗಿಸಲಾಗುವುದು' ಎಂದು ಭರವಸೆ ನೀಡಿದರು.

ಬೆಂಗಳೂರಿನ ಮಲ್ಲೇಶ್ವರ ನಿವಾಸಿಯಾದ ದ್ವಾರಕಾಬಾಯಿ ವೇದಾಂತಂ ಅವರು ಹಿಂದಿನ ಮಾಗಡಿ ತಾಲ್ಲೂಕಿನ, ಹಾಲಿ ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ಸೇರಿದ ತಾವರಕೆರೆ ಹೋಬಳಿ ಬ್ಯಾಲಾಳು, ಚೋಳನಾಯಕನಹಳ್ಳಿ, ಪೆದ್ದನಪಾಳ್ಯ, ದೊಡ್ಡಮಾರನಹಳ್ಳಿ ಮತ್ತು ಕಾಡುಕರೇನಹಳ್ಳಿ (ಕುರುಬರಹಳ್ಳಿ) ಗ್ರಾಮಗಳಿಗೆ ಸೇರಿ 1,198 ಎಕರೆ 34 ಗುಂಟೆ ಜಮೀನನ್ನು ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಉದ್ದೇಶಗಳಿಗೆ 1939ರಲ್ಲಿ ಶ್ರೀರಂಗನಾಥಸ್ವಾಮಿ ದೇವಸ್ಥಾನಕ್ಕೆ ದಾನ ನೀಡಿದ್ದರು. ಅದರಲ್ಲಿ ನೂರಾರು ಎಕರೆ ಜಮೀನು ಭೂಗಳ್ಳರ ಪಾಲಾಗಿದೆ. ಜಮೀನು ವಶಕ್ಕೆ ಪಡೆದು ದೇವಸ್ಥಾನ ಮತ್ತು ದೇವರ ಹೆಸರಿನಲ್ಲಿ ಖಾತೆ, ಪಹಣಿ ಮಾಡಿಸಿ ದೇವಸ್ಥಾನಕ್ಕೆ ಒಪ್ಪಿಸಬೇಕು' ಎಂದು ರವಿಕುಮಾರ್ ಒತ್ತಾಯಿಸಿದರು. ದಾನ ರೂಪದಲ್ಲಿ ಶ್ರೀರಂಗನಾಥಸ್ವಾಮಿ ದೇವಾಲಯಕ್ಕೆ ನೀಡಿರುವ ಜಾಗ ಭೂಗಳ್ಳರ ಪಾಲಾಗಿರುವ ಬಗ್ಗೆ ಈ ಹಿಂದೆಯೇ 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಬಹು ಮಾಧ್ಯಮ ಪ್ರಜಾವಾಣಿ www.prajavani.net Facebook LIVE
ಫೇಸ್‌ಬುಕ್‌ನಲ್ಲಿ ನೇರಪ್ರಸಾರ
ಇಂದು
ಪಿಯು ವಿದ್ಯಾರ್ಥಿಗಳಿಗಾಗಿ
ಆನ್‌ಲೈನ್ ಬೋಧನಾ ಸರಣಿ
ಭೌತ ಶಾಸ್ತ್ರ ಟಿಪ್ಸ್
ವಿಜಯೇಂದ್ರ ತಿವಾರಿ
ಭೌತಶಾಸ್ತ್ರ ಉಪನ್ಯಾಸಕರು,
ಗುರುಕುಲ ಇಂಡಿಪೆಂಡೆಂಟ್ ಪಿಯು ಸೈನ್ಸ್ ಕಾಲೇಜು, ಕಲಬುರಗಿ

ಸಂಜೆ 4 ರಿಂದ 6 ರವರೆಗೆ
ಮಿಸಳ್ ಹಾಪ್ಚಾ
ಕೊಲ್ಹಾರದ ಕಲ್ಲೂವಿನಂಥ ಮೊಸರು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9,
ಸಂಪಾದಕೀಯ: ಬೆಳಿಗ್ಗೆ 9.30,
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಕಾಂಗ್ರೆಸ್, ಜೆಡಿಎಸ್ ಸಭಾತ್ಯಾಗ ಮಸೂದೆಗೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್, ಜೆಡಿಎಸ್ ಸದಸ್ಯರ ಸಭಾತ್ಯಾಗದ ಮಧ್ಯೆಯೇ 'ಕರ್ನಾಟಕ ಬಂದೀಖಾನೆ ಕಾಯ್ದೆ (ತಿದ್ದುಪಡಿ) ಮಸೂದೆ' ವಿಧಾನ ಪರಿಷತ್‌ನಲ್ಲಿ ಬುಧವಾರ ಅಂಗೀಕಾರಗೊಂಡಿತು.

ಜೈಲುಗಳಲ್ಲಿ ಮೊಬೈಲ್ ಅಥವಾ ಇತರ ಸಂಪರ್ಕ ಸಾಧನಗಳನ್ನು ನಿಷೇಧಿಸುವ ಹಾಗೂ ಪೆರೋಲ್ ಅವಧಿ ಮುಕ್ತಾಯಗೊಂಡ ಬಳಿಕ ಕೈದಿ ಮರಳಿ ಹಾಜರಾಗಲು ತಪ್ಪಿದರೆ ಜಾಮೀನು ನೀಡಿದವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಈ ಮಸೂದೆ ಅವಕಾಶ ಕಲ್ಪಿಸಲಿದೆ.

ವಿರೋಧ ಪಕ್ಷಗಳ ಸದಸ್ಯರ ಆಕ್ಷೇಪಗಳಿಗೆ ಮತ್ತು ಸಂದೇಹಗಳಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಸ್ಪಷ್ಟನೆ ನೀಡಿದರು. ಆದರೆ, 'ಈ ಮಸೂದೆ ಜನವಿರೋಧಿಯಾಗಿದೆ' ಎಂದು ಆರೋಪಿಸಿ ಸದಸ್ಯರು ಸಭಾತ್ಯಾಗ ಮಾಡಿದರು. 'ಮಸೂದೆ ಜನವಿರೋಧಿ ಅಲ್ಲ. ಅಪರಾಧಿಗಳ ವಿರೋಧಿ. ವಿರೋಧ ಪಕ್ಷದವರು ಅಪರಾಧಿಗಳ ಪರ ಸಭಾತ್ಯಾಗ ನಡೆಸುತ್ತಿದ್ದಾರೆ' ಎಂದು ಬಿಜೆಪಿ ಸದಸ್ಯರು ತಿರುಗೇಟು ನೀಡಿದರು.

'ಜೈಲಿನ ಒಳಗೆ ಮೊಬೈಲ್ ಮತ್ತಿತರ ವಸ್ತುಗಳು ಸಿಗಲು ಅಲ್ಲಿನ ಸಿಬ್ಬಂದಿಯೇ ಕಾರಣ. ಜೈಲುಗಳಲ್ಲಿ ಜಾಮರ್‌ಗಳನ್ನು ಅಳವಡಿಸಬೇಕು. ಪೆರೋಲ್ ಮೇಲೆ ಹೊರಬಂದು ಅವಧಿ ಮುಗಿದ ನಂತರ ಹಾಜರಾಗದ ಕೈದಿಗಳಿಗೆ ಜಾಮೀನು ನೀಡಿದವರನ್ನು ಶಿಕ್ಷೆಗೆ ಗುರಿಪಡಿಸುವುದು ಅಮಾನವೀಯ. ಹೀಗಾದರೆ ಜಾಮೀನು ನೀಡಲು ಯಾರೂ ಮುಂದೆ ಬರುವುದಿಲ್ಲ. ಅಮಾಯಕರಿಗೆ ಅನ್ಯಾಯವಾಗುತ್ತದೆ. ಈ ತಿದ್ದುಪಡಿ ಕೈಬಿಡಬೇಕು' ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಒತ್ತಾಯಿಸಿದರು. 'ಜೈಲು ಕೈಪಿಡಿಯಲ್ಲಿ ಸುಧಾರಣೆ ತರಬೇಕಿದೆ. ಅಧಿಕಾರಿಗಳು ಸರಿ ಇದ್ದರೆ ತಿದ್ದುಪಡಿ ಅಗತ್ಯವಿಲ್ಲ. ಜೈಲು ಸುಧಾರಣಾ ಸಮಿತಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕು. ಅಧಿಕಾರಿಗಳಿಗೆ ದಂಡ ವಿಧಿಸುವ ಅಂಶವನ್ನೂ ಮಸೂದೆಯಲ್ಲಿ ಸೇರಿಸಬೇಕು. ಮಹಿಳಾ ಕೈದಿಗಳಿಗೆ ಪ್ರತ್ಯೇಕ ಜೈಲು ಮಾಡಬೇಕು' ಎಂದು ಚರ್ಚೆಯಲ್ಲಿ ಭಾಗವಹಿಸಿದ್ದ ಸದಸ್ಯರು ಸಲಹೆ ನೀಡಿದರು.



ಸಾಮರಸ್ಯ.... ಕಾವೇರಿದ ಚರ್ಚೆಯ ಮಧ್ಯೆಯೂ ಆಡಳಿತ ಮತ್ತು ವಿರೋಧ ಪಕ್ಷಗಳ ನಾಯಕರ ಸಾಮರಸ್ಯದ ಕ್ಷಣಕ್ಕೆ ವಿಧಾನಸಭೆ ಬುಧವಾರ ಸಾಕ್ಷಿಯಾಯಿತು. ಸಿದ್ದರಾಮಯ್ಯ ಬಳಿಗೆ ತೆರಳಿದ ಬಿಜೆಪಿಯ ಬಿ.ಎಸ್.ಯಡಿಯೂರಪ್ಪ, ಗುರುವಾರ ತಾವು ಏರ್ಪಡಿಸಿರುವ ಭೋಜನ ಕೂಟಕ್ಕೆ ಆಹ್ವಾನಿಸಿದರು. ವಿರೋಧ ಪಕ್ಷದ ಉಪ ನಾಯಕ ಯು.ಟಿ.ಖಾದರ್ ಇದ್ದರು.

'ರಾಜ್ಯದಲ್ಲಿ ಲೋಡ್ ಶೆಡ್ಡಿಂಗ್ ಚಿಂತನೆ ಇಲ್ಲ'

ಬೆಂಗಳೂರು: 'ರಾಜ್ಯದಲ್ಲಿ ಲೋಡ್ ಶೆಡ್ಡಿಂಗ್ ಚಿಂತನೆ ಇಲ್ಲ' ಎಂದು ಇಂಧನ ಸಚಿವ ವಿ. ಸುನೀಲ್ ಕುಮಾರ್ ಸ್ಪಷ್ಟಪಡಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಕೆ. ಹರೀಶ್‌ಕುಮಾರ್ ಅವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಸಚಿವರು, 'ವಿದ್ಯುತ್ ಉತ್ಪಾದನೆಯಲ್ಲಿ ಯಾವುದೇ ಕೊರತೆ ಉಂಟಾಗಿಲ್ಲ' ಎಂದರು.

'ಕಲ್ಲಿದ್ದಲು ಕೊರತೆಯಿಂದ ವಿದ್ಯುತ್ ಉತ್ಪಾದನೆ ಕುಂಠಿತವಾಗುತ್ತಿದೆ. ಅದನ್ನು ಮರೆಮಾಡಲು ಅಧಿಕಾರಿಗಳು ತಾಂತ್ರಿಕ ಅಡಚಣೆ ನೆಪದಲ್ಲಿ ವಿದ್ಯುತ್ ಕಡಿತ ಮಾಡುತ್ತಿದ್ದಾರೆ. ಮುಂದಿನ ಬೇಸಿಗೆಯಲ್ಲಿ ವಿದ್ಯುತ್ ಸಮಸ್ಯೆ ಮತ್ತಷ್ಟು ತೀವ್ರಗೊಳ್ಳಲಿದೆ. ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕು' ಎಂದು ಹರೀಶ್‌ಕುಮಾರ್ ಆಗ್ರಹಿಸಿದರು.

ಅದಕ್ಕೆ ಸಚಿವರು, 'ಆರಂಭದಲ್ಲಿ ಕಲ್ಲಿದ್ದಲು ಕೊರತೆ ಉಂಟಾಗಿದ್ದು ನಿಜ. ತಕ್ಷಣವೇ ನಾನು ದೆಹಲಿಗೆ ತೆರಳಿ ಕೇಂದ್ರ ಸಚಿವರು ಮತ್ತು ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಮುಖ್ಯಮಂತ್ರಿ ಕೂಡಾ ನೆರವಿಗೆ ಬಂದರು. ಎಲ್ಲ ರೀತಿಯ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡ ಕಾರಣ ಕೊರತೆ ನಿವಾರಣೆಯಾಗಿದೆ' ಎಂದರು.

'ರೈತರಿಗೆ ಏಳು ಗಂಟೆ ವಿದ್ಯುತ್ ನೀಡಲು ತಾಂತ್ರಿಕ ಸಮಸ್ಯೆ ಇದ್ದರೆ ಅದನ್ನು ಬಗೆಹರಿಸಲಾಗುವುದು' ಎಂದೂ ಸಚಿವರು ತಿಳಿಸಿದರು.

ಸೋಮಣ್ಣ ರಾಜೀನಾಮೆಗೆ ಕಾಂಗ್ರೆಸ್ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ನ್ಯಾಯಾಲಯದಿಂದ ವಿಚಾರಣೆ ಎದುರಿಸುತ್ತಿರುವ ವಸತಿ ಸಚಿವ ವಿ. ಸೋಮಣ್ಣ ಅವರನ್ನು ಸಂಪುಟದಿಂದ ಕೈಬಿಡುವಂತೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬುಧವಾರ ವಿಧಾನಸಭೆಯಲ್ಲಿ ಒತ್ತಾಯಿಸಿದರು.

ಸದನದಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ಸೋಮಣ್ಣ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದಾರೆ ಎಂದು ಆರೋಪಿಸಿ ರಾಮಕೃಷ್ಣ ಎಂಬುವವರು ನ್ಯಾಯಾಲಯಕ್ಕೆ ದೂರು ಸಲ್ಲಿಸಿದ್ದರು. ಈ ಕುರಿತು ತನಿಖೆ ನಡೆಸಿದ್ದ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಡಿವೈಎಸ್‌ಪಿ 'ಬಿ' ವರದಿ ಸಲ್ಲಿಸಿದ್ದರು. 'ಬಿ' ವರದಿ ತಿರಸ್ಕರಿಸಿದ ನ್ಯಾಯಾಲಯ ವಿಚಾರಣೆ ಆರಂಭಿಸಲು ತೀರ್ಮಾನಿಸಿದ್ದು, ಏಪ್ರಿಲ್ 16ಕ್ಕೆ ಖುದ್ದು ಹಾಜರಾಗುವಂತೆ ಸೋಮಣ್ಣ ಅವರಿಗೆ ಆದೇಶಿಸಿದೆ. ಅವರನ್ನು ಹೇಗೆ ಸಂಪುಟದಲ್ಲಿ ಮುಂದುವರಿಸುತ್ತೀರಿ' ಎಂದು ಪ್ರಶ್ನಿಸಿದರು.

'ಅಪರಾಧಿಯಲ್ಲ'

'ಸೋಮಣ್ಣ ವಿರುದ್ಧ ವ್ಯಕ್ತಿಯೊಬ್ಬರು ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು. ಎಸಿಬಿ ಅಧಿಕಾರಿ ಸಲ್ಲಿಸಿದ್ದ 'ಬಿ' ವರದಿಯನ್ನು ನ್ಯಾಯಾಲಯ ತಿರಸ್ಕರಿಸಿದೆ. ಆರೋಪ ಬಂದ ಮಾತ್ರಕ್ಕೆ ಎಲ್ಲರೂ ಅಪರಾಧಿಗಳಲ್ಲ. ನ್ಯಾಯಾಲಯದ ಆದೇಶವನ್ನು ಮೇಲಿನ ಹಂತದಲ್ಲಿ ಪ್ರಶ್ನಿಸುವುದಕ್ಕೂ ಅವಕಾಶವಿದೆ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ಕಾಂಗ್ರೆಸ್‌ನ ಹಲವು ಶಾಸಕರೂ ಸಿದ್ದರಾಮಯ್ಯ ಮಾತಿಗೆ ದನಿಗೂಡಿಸಿದರು. ಆಗ ಮಧ್ಯಪ್ರವೇಶ ಮಾಡಿದ ಜೆಡಿಎಸ್‌ನ ಎಚ್.ಡಿ. ರೇವಣ್ಣ, 'ನೋಟಿಸ್ ಜಾರಿಯಾದ ಮಾತ್ರಕ್ಕೆ ರಾಜೀನಾಮೆ ಕೇಳುವುದು ಸರಿಯಲ್ಲ' ಎಂದು ಸೋಮಣ್ಣ ಅವರ ಬೆಂಬಲಕ್ಕೆ ನಿಂತರು. ಸೋಮಣ್ಣ ಕೂಡ ಸಮಜಾಯಿಷಿ ನೀಡಲು ಮುಂದಾದರು.

'ಜೇಮ್ಸ್ ಪ್ರದರ್ಶನಕ್ಕೆ ಅಡ್ಡಿ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಅಭಿನಯದ ಕೊನೆಯ ಸಿನಿಮಾ 'ಜೇಮ್ಸ್' ಪ್ರದರ್ಶನಕ್ಕೆ ಯಾವುದೇ ರೀತಿಯಲ್ಲಿ ಅಡ್ಡಿಪಡಿಸಲು ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಜೇಮ್ಸ್ ಸಿನಿಮಾವನ್ನು ಚಿತ್ರಮಂದಿರಗಳಿಂದ ತೆಗೆದು ಹಾಕಲಾಗುತ್ತಿದೆ ಎಂಬ ಆರೋಪದ ಕುರಿತು ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಈ ಕುರಿತು ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಪ್ರತಿನಿಧಿಗಳ ಜತೆ ಮಾತನಾಡಿದ್ದೇನೆ. ಯಾವುದೇ ಕಡೆಯಲ್ಲಿ ಜೇಮ್ಸ್ ಚಿತ್ರಕ್ಕೆ ತೊಂದರೆಯಾಗಿದ್ದರೆ ಅದನ್ನು ಸರಿಪಡಿಸುವಂತೆ ತಿಳಿಸಿದ್ದೇನೆ' ಎಂದರು.

ಬೇಡ ಜಂಗಮ ಹೆಸರಿನಲ್ಲಿ ಪರಿಶಿಷ್ಟ ಜಾತಿ ಪ್ರಮಾಣಪತ್ರ ಪಡೆದ ಆರೋಪ

ರೇಣುಕಾಚಾರ್ಯ ಕುಟುಂಬದ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಡ ಜಂಗಮ ಜಾತಿಯ ಹೆಸರಿನಲ್ಲಿ ಪರಿಶಿಷ್ಟ ಜಾತಿಯ ಪ್ರಮಾಣಪತ್ರ ಪಡೆದಿರುವ ಆರೋಪ ಎದುರಿಸುತ್ತಿರುವ ಬಿಜೆಪಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮತ್ತು ಅವರ ಕುಟುಂಬದವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಕಾಂಗ್ರೆಸ್ ಶಾಸಕರು ಬುಧವಾರ ವಿಧಾನಸಭೆಯಲ್ಲಿ ಒತ್ತಾಯಿಸಿದರು.

ಮುಸ್ಲಿಂ ವ್ಯಾಪಾರಿಗಳಿಗೆ ಹಿಂದೂ ದೇವಸ್ಥಾನಗಳ ಜಾತ್ರೆ, ಉತ್ಸವಗಳಲ್ಲಿ ನಿರ್ಬಂಧ ಹೇರಿರುವ ಕುರಿತು ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸುತ್ತಿದ್ದಾಗ ರೇಣುಕಾಚಾರ್ಯ ಅಡ್ಡಿಪಡಿಸಿದರು. ಆಗ, 'ಸುಳ್ಳು ಜಾತಿ ಪ್ರಮಾಣಪತ್ರ ಪಡೆದವರು ಪಾಠ ಹೇಳಬೇಕಿಲ್ಲ' ಎಂದು ಖಾದರ್ ತಿರುಗೇಟು ನೀಡಿದರು.

ವಾಗ್ವಾದ ತಣ್ಣಗಾದ ಬಳಿಕ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಖಾದರ್ ಅವರು ರೇಣುಕಾಚಾರ್ಯ ವಿರುದ್ಧ ನಕಲಿ ಜಾತಿ ಪ್ರಮಾಣಪತ್ರ ಪಡೆದ ಆರೋಪ ಮಾಡಿದ್ದಾರೆ. ಈ ವಿಷಯವನ್ನು ಕಡತದಿಂದ ತೆಗೆದು ಹಾಕಬೇಕು' ಎಂದು ಒತ್ತಾಯಿಸಿದರು. ಆಗ ಈ ಕುರಿತ ಚರ್ಚೆ ಮತ್ತೆ ಜೋರಾಯಿತು.

> ಇಲ್ಲಿ ಕುಳಿತು ತೀರ್ಪು ನೀಡಲು ಆಗುವುದಿಲ್ಲ. ಸಂಬಂಧಿಸಿದ ಪ್ರಾಧಿಕಾರದ ಎದುರು ಯಾರಾದರೂ ದೂರು ಕೊಡಲಿ. ತಪ್ಪು ಮಾಡಿದ್ದರೆ ಕ್ರಮ ಆಗುತ್ತದೆ.
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಒಪ್ಪಿಕೊಂಡ ಶಾಸಕ: 'ನಾನು ಸಂವಿಧಾನಕ್ಕೆ ವಿರುದ್ಧವಾಗಿ ಯಾವುದೇ ಕೆಲಸ ಮಾಡಿಲ್ಲ. ನನ್ನ ಅಣ್ಣ ಪರಿಶಿಷ್ಟ ಜಾತಿ ಪ್ರಮಾಣಪತ್ರ ಪಡೆದುಕೊಂಡು ಕಲಬುರಗಿಯಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದ. ಆತನೇ ನನ್ನ ಮಗಳಿಗೂ ಪರಿಶಿಷ್ಟ ಜಾತಿ ಪ್ರಮಾಣಪತ್ರ ಕೊಡಿಸಿದ್ದ. ವಿಷಯ ಗೊತ್ತಾದ ತಕ್ಷಣ ಅದನ್ನು ಮರಳಿಸಲು ಮಗಳಿಗೆ ಸೂಚಿಸಿದ್ದೆ' ಎಂದು ರೇಣುಕಾಚಾರ್ಯ ಸದನದಲ್ಲಿ ಒಪ್ಪಿಕೊಂಡರು.

'15 ಮಂದಿಗೆ ಎಸ್‌.ಸಿ. ಪ್ರಮಾಣಪತ್ರ'

'ಬೆಂಗಳೂರು ಉತ್ತರ ತಾಲ್ಲೂಕಿನ ತಹಶೀಲ್ದಾರ್ 2012ರಲ್ಲಿ 15ಕ್ಕೂ ಅಧಿಕ ಲಿಂಗಾಯತರ ಜಂಗಮರಿಗೂ ಪರಿಶಿಷ್ಟ ಜಾತಿಯ ಪ್ರಮಾಣಪತ್ರ ನೀಡಿದ್ದಾರೆ. ಎಂ.ಪಿ. ರೇಣುಕಾಚಾರ್ಯ ಅವರ ಪುತ್ರಿ ಎಂ.ಆರ್.ಚೇತನಾ, ಎಂ.ಪಿ.ದ್ವಾರಕೇಶ್ವರ್ ಅವರ ಪುತ್ರಿಯರಾದ ಸುಜಾತಾ, ಶ್ರುತಿ ಹೆಸರಿನಲ್ಲೂ ಬೇಡ ಜಂಗಮ ಪ್ರಮಾಣಪತ್ರ ಪಡೆಯಲಾಗಿದೆ' ಎಂದು ಬಿಜೆಪಿಯ ಗೂಳಿಹಟ್ಟಿ ಶೇಖರ್ ಸದನದಲ್ಲಿ ಮಂಗಳವಾರ ಆರೋಪಿಸಿದ್ದರು.

'ಬುಡ್ಗ ಜಂಗಮ ಹಾಗೂ ಬೇಡ ಜಂಗಮ ಜಾತಿಯವರಿಗೆ ನೀಡಲಾಗುವ ಪರಿಶಿಷ್ಟ ಜಾತಿ ಪ್ರಮಾಣಪತ್ರವನ್ನು ಪ್ರಬಲವರ್ಗಕ್ಕೆ ಸೇರಿದವರು ಪಡೆದುಕೊಳ್ಳುತ್ತಿರುವುದರ ಕುರಿತ ಚರ್ಚೆ ವೇಳೆ ಅವರು, 'ಇಷ್ಟೆಲ್ಲ ಆದರೂ ಕಂದಾಯ ಇಲಾಖೆ ಅಧಿಕಾರಿಗಳು, 'ಪ್ರಬಲ ವರ್ಗದ ಯಾರಿಗೂ ಈ ರೀತಿ ಪ್ರಮಾಣಪತ್ರ ನೀಡಿಲ್ಲ' ಎಂದು ವಿಧಾನಸಭೆಗೆ ತಪ್ಪು ಉತ್ತರ ನೀಡಿದ್ದಾರೆ. ಈ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದರು.

ಸವಲತ್ತು ದುರ್ಬಳಕೆಯನ್ನು ಮೀಸಲು ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕರು ಪಕ್ಷಭೇದ ಮರೆತು ಇದನ್ನು ಖಂಡಿಸಿದ್ದರು.

'ಪ್ರಕರಣ ದಾಖಲಿಸಿ'

'ರೇಣುಕಾಚಾರ್ಯ ಶಾಸಕರು, ಅಷ್ಟೇ ಅಲ್ಲದೆ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೂಡ. ಅವರ ಮಗಳಿಗೆ ನಕಲಿ ಜಾತಿ ಪ್ರಮಾಣಪತ್ರ ಪಡೆದಿರುವುದನ್ನು ಒಪ್ಪಿಕೊಂಡಿದ್ದಾರೆ. ಪ್ರಕರಣ ದಾಖಲಿಸಿ, ತನಿಖೆ ನಡೆಸಬೇಕು' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

'ಪರಿಶಿಷ್ಟ ಜಾತಿ ಹೆಸರಿನಲ್ಲಿ ಯಾವ ಸೌಲಭ್ಯವನ್ನೂ ನಾವು ಪಡೆದುಕೊಂಡಿಲ್ಲ. ಈ ವಿಚಾರದಲ್ಲಿ ನಾನು ಭಾಗಿಯಾಗಿರುವುದನ್ನು ಸಾಬೀತುಪಡಿಸಿದರೆ ಗಲ್ಲಿಗೇರಲು ಸಿದ್ಧ' ಎಂದು ಸವಾಲು ಹಾಕಿದರು.

ಕ್ರಮಕ್ಕೆ ಪಟ್ಟು: 'ಮಗಳು ಪರಿಶಿಷ್ಟ ಜಾತಿ ಹೆಸರಿನಲ್ಲಿ ಪ್ರಮಾಣಪತ್ರ ಪಡೆದಿರುವುದರಿಂದ ರೇಣುಕಾಚಾರ್ಯ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಜರುಗಿಸಬೇಕು' ಎಂದು ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, ಪಿ.ಟಿ. ಪರಮೇಶ್ವರ ನಾಯ್ಕ್, ಭೀಮಾ ನಾಯ್ಕ್ ಮತ್ತಿತರರು ಸಭಾಧ್ಯಕ್ಷರ ಪೀಠದ ಎದುರು ಧರಣಿಗೂ ಮುಂದಾದರು. 'ಕ್ರಮ ಕೈಗೊಳ್ಳುವ ವಿಚಾರವನ್ನು ಸರ್ಕಾರ ವಹಿಸಿಕೊಳ್ಳುವುದಿಲ್ಲ. ರೇಣುಕಾಚಾರ್ಯ ಅಥವಾ ಯಾರೇ ಅಕ್ರಮವಾಗಿ ಜಾತಿ ಪ್ರಮಾಣಪತ್ರ ಪಡೆದಿದ್ದರೂ ಸಕ್ಷಮ ಪ್ರಾಧಿಕಾರದ ಎದುರು ದೂರು ಸಲ್ಲಿಸಬಹುದು. ಅಲ್ಲಿಯೇ ಕ್ರಮ ಆಗುವಂತೆ ಮಾಡಬಹುದು' ಎಂದು ಮಾಧುಸ್ವಾಮಿ ಉತ್ತರಿಸಿದರು.

ಬಿಜೆಪಿಯವರು ಭ್ರಷ್ಟರು, ಭಂಡರು: ಸಿದ್ದರಾಮಯ್ಯ

ಬೆಂಗಳೂರು: 'ಬಿಜೆಪಿಯವರು ಭ್ರಷ್ಟರು, ಭಂಡರು. ತಮ್ಮ ಹುಳುಕು ಗೊತ್ತಾಗುತ್ತದೆ ಎಂದು ಚರ್ಚೆಗೆ ಅವಕಾಶ ಕೊಡಲಿಲ್ಲ. ಪೊಲೀಸ್, ಸಾರಿಗೆ ಮತ್ತು ಆರೋಗ್ಯ ಇಲಾಖೆಗಳಲ್ಲಿನ ವ್ಯಾಪಕ ಭ್ರಷ್ಟಾಚಾರ ವರದಿಗಳು ಪ್ರಕಟ ಆಗಿವೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ವಿರೋಧ ಪಕ್ಷಗಳು ಸುಮ್ಮನಿರಬೇಕಾ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ವಿಧಾನಸಭೆಯ ಮೊಗಸಾಲೆಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಬಿಬಿಎಂಪಿ, ಗ್ರಾಮೀಣಾಭಿವೃದ್ಧಿ, ನೀರಾವರಿ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಇದನ್ನು ಪ್ರಸ್ತಾಪಿಸುವುದು ಬಿಜೆಪಿಯವರಿಗೆ ಬೇಕಿಲ್ಲ. ಅದಕ್ಕಾಗಿ ತಡೆ ಒಡ್ಡಿದ್ದಾರೆ ಎಂದರು.

ಯಡಿಯೂರಪ್ಪ ಅವರ ಮನೆಯಲ್ಲೇ ಭ್ರಷ್ಟಾಚಾರ ನಡೆಯುತ್ತದೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಲ್ಲವೇ? ಕೃಷ್ಣಾ ಮೇಲ್ದಂಡೆ ಯೋಜನೆಗೆ ₹20 ಸಾವಿರ ಕೋಟಿ ಟೆಂಡರ್ ಕರೆದಿದ್ದಾರೆ. ಇದರಲ್ಲಿ ಶೇ 10 ಕಮಿಷನ್ ತೆಗೆದುಕೊಳ್ಳುತ್ತಾರೆ ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು ತಮ್ಮ ಸರ್ಕಾರದ ವಿರುದ್ಧವೇ ಆರೋಪ ಮಾಡಿಲ್ಲವೆ? ಅವರ ಪಕ್ಷದವರೇ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಇಂತಹ ಲೂಟಿಯನ್ನು ತಡೆಯುವುದು ನಮ್ಮ ಕರ್ತವ್ಯವಲ್ಲವೇ ಎಂದು ಪ್ರಶ್ನಿಸಿದರು.

ಕೇಸ್ ಹಾಕಿ– ಸುಧಾಕರ್‌ಗೆ ಸವಾಲು: ಆರೋಗ್ಯ ಸಚಿವ ಸುಧಾಕರ್ ಯಾವುದೇ ಕೇಸ್ ಹಾಕಿದರೂ ಅದನ್ನು ಎದುರಿಸಲು ತಯಾರಾಗಿದ್ದೇವೆ. ಸುಧಾಕರ್ ಕೇಸ್ ದಾಖಲಿಸಿದರೆ ಸತ್ಯ ಹೊರತರಲು ಸಿಕ್ಕ ಒಳ್ಳೆಯ ಅವಕಾಶ ಎಂದುಕೊಳ್ಳುತ್ತೇನೆ ಎಂದು ಸಿದ್ದರಾಮಯ್ಯ ಅವರು ಹೇಳಿದರು.

ಜನ ಪರ್ಯಾಯ ಬಜೆಟ್ ಅಧಿವೇಶನದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭರವಸೆ


'ಅಧಿಕಾರಕ್ಕೆ ಬಂದರೆ ಕೃಷಿ ಕಾಯ್ದೆ ತಿದ್ದುಪಡಿ ರದ್ದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಭೂಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆಗಳಿಗೆ ತಂದಿರುವ ರೈತ ವಿರೋಧಿ ತಿದ್ದುಪಡಿಗಳು, ಜಾನುವಾರು ಹತ್ಯೆ ನಿಷೇಧ ಕಾಯ್ದೆ ರದ್ದುಪಡಿಸಲಾಗುವುದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಸಂಯುಕ್ತ ಹೋರಾಟ –ಕರ್ನಾಟಕ ನಗರದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ಜನ ಪರ್ಯಾಯ ಬಜೆಟ್ ಅಧಿವೇಶನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ಉಳುವವನೇ ನೆಲದ ಒಡೆಯನಾಗಬೇಕು ಎಂಬ ಉದ್ದೇಶದಿಂದ ಭೂಸುಧಾರಣಾ ಕಾಯ್ದೆ ಜಾರಿಗೆ ತರಲಾಗಿತ್ತು. ಕಾಯ್ದೆಗೆ ತಿದ್ದುಪಡಿ ತಂದಿರುವುದರಿಂದ 'ಉಳ್ಳವನೇ ನೆಲದೊಡೆಯ' ಎಂಬಂತಾಗಿದೆ. ಸುಪ್ರೀಂ ಕೋರ್ಟ್‌ನ ಆದೇಶವನ್ನೇ ನೆಪ ಮಾಡಿಕೊಂಡು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂಪರಭಾರೆ ನಿಷೇಧ ಕಾಯ್ದೆಯ(ಪಿಟಿಸಿಎಲ್) ಉದ್ದೇಶವನ್ನೇ ಬುಡಮೇಲು ಮಾಡಲಾಗುತ್ತಿದೆ. ಕೃಷಿಕರು ಮತ್ತು ದಲಿತರು ಭೂರಹಿತರಾಗಿ ಮತ್ತೆ ಕೃಷಿ ಕಾರ್ಮಿಕರಾಗುತ್ತಿದ್ದಾರೆ' ಎಂದರು.



ಅಧಿವೇಶನದಲ್ಲಿ ಅಂಗೀಕರಿಸಿದ ನಿರ್ಣಯದ ಪ್ರತಿಯನ್ನು ಸಿದ್ದರಾಮಯ್ಯ ಅವರಿಗೆ ರೈತ ಮುಖಂಡರಾದ ಬಡಗಲಪುರ ನಾಗೇಂದ್ರ, ಜೆ.ಸಿ. ಬಯ್ಯಾರೆಡ್ಡಿ ನೀಡಿದರು. ಮಾಜಿ ಶಾಸಕ ಬಿ.ಆರ್. ಪಾಟೀಲ, ರೈತ ಮುಖಂಡರಾದ ಎಚ್.ವಿ.ದಿವಾಕರ, ಗೌರಮ್ಮ, ಬಿ.ಕೃಷ್ಣಪ್ಪ ಟ್ರಸ್ಟ್‌ನ ಮುಖ್ಯಸ್ಥೆ ಇಂದಿರಾ ಕೃಷ್ಣಪ್ಪ ಇದ್ದರು ಪ್ರಜಾವಾಣಿ ಚಿತ್ರ

'ಜಾನುವಾರು ಹತ್ಯೆ ನಿಷೇಧ ಕಾಯ್ದೆ ಜಾರಿ ಮಾಡುವ ಮೂಲಕ ಕೃಷಿಗೆ ಯೋಗ್ಯವಲ್ಲದ ಜಾನುವಾರುಗಳನ್ನು ಮಾರಾಟ ಮಾಡಲು ಸಾಧ್ಯವಾಗದಂತೆ ಮಾಡಲಾಗಿದೆ. ದನದ ಮಾಂಸ ತಿನ್ನಬಹುದು ಮತ್ತು ಹೊರದೇಶಗಳಿಗೆ ರಫ್ತು ಮಾಡಬಹುದು. ಆದರೆ, ಹತ್ಯೆ ಮಾಡುವಂತಿಲ್ಲ ಎಂದರೆ ಹೇಗೆ' ಎಂದರು.

'ಬಿಜೆಪಿಯವರು ತೋರಿಕೆಗೆ ಗೋಪೂಜೆ ಮಾಡುತ್ತಿದ್ದಾರೆ. ದನ, ಕುರಿಗಳನ್ನು ಸಾಕಾಣಿಕೆ ಮಾಡುತ್ತಿದ್ದ ನಾವು ಹಬ್ಬದ ದಿನಗಳಲ್ಲಿ ಅವುಗಳ ಪೂಜೆ ಮಾಡಿಕೊಂಡು ಬಂದಿದ್ದೇವೆ. ಜಾನುವಾರುಗಳ ಸಗಣಿಯನ್ನು ಎಂದೂ ಬಾಚದ, ಅವುಗಳ ಪಾಲನೆ ಮಾಡದ ಗಿರಾಕಿಗಳು ಗೋಪೂಜೆ ಬಗ್ಗೆ ನಮಗೆ ಪಾಠ ಹೇಳಿಕೊಡಲು ಹೊರಟಿದ್ದಾರೆ' ಎಂದು ಲೇವಡಿ ಮಾಡಿದರು.

'ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದ ಮೇಲೆ ಸೆಸ್ ಸಂಗ್ರಹ ಸಂಪೂರ್ಣ ಕಡಿಮೆಯಾಗಿದೆ. ಎಪಿಎಂಸಿ ಸಿಬ್ಬಂದಿಗೆ ಸಂಬಳವೇ ಸಿಗದಂತಾಗಿದೆ. ಈ ಎಲ್ಲ ಅವಾಂತರಗಳನ್ನು ಸೃಷ್ಟಿಸಿರುವ ತಿದ್ದುಪಡಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಎಂಬ ಸಂಯುಕ್ತ ಹೋರಾಟ– ಕರ್ನಾಟಕದ ಹೋರಾಟಕ್ಕೆ ನಮ್ಮ ಬೆಂಬಲ ಇದೆ. ಅಧಿಕಾರಕ್ಕೆ ಬಂದ ಕೂಡಲೇ ಅವುಗಳನ್ನು ರದ್ದುಪಡಿಸಲಾಗುವುದು. ಮುಂದಿನ ದಿನಗಳಲ್ಲಿ ನೀವು ನಮ್ಮ ಬೆಂಬಲಕ್ಕೆ ನಿಲ್ಲಬೇಕು' ಎಂದರು.

21 ನಿರ್ಣಯ ಅಂಗೀಕಾರ

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿ, ಎಪಿಎಂಸಿ ಕಾಯ್ದೆ ತಿದ್ದುಪಡಿ ರದ್ದು, ಜಾನುವಾರು ಹತ್ಯೆ ನಿಷೇಧ ಕಾಯ್ದೆ ರದ್ದು, ಭೂಸುಧಾರಣಾ ಕಾಯ್ದೆ ತಿದ್ದುಪಡಿ ರದ್ದು ಸೇರಿ 21 ನಿರ್ಣಯಗಳನ್ನು ಅಧಿವೇಶನದಲ್ಲಿ ಅಂಗೀಕರಿಸಲಾಯಿತು. 'ಸರ್ಕಾರ ಕೂಡಲೇ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯದಿದ್ದರೆ ದೆಹಲಿ ಮಾದರಿಯ ಅನಿರ್ದಿಷ್ಟಾವಧಿ ಹೋರಾಟ ರೂಪಿಸಲಾಗುವುದು. ನಮ್ಮ ಈ ಅಧಿವೇಶನಕ್ಕೆ ಬರುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಆಹ್ವಾನ ನೀಡಲಾಗಿತ್ತು. ರೈತರು ಮತ್ತು ದಲಿತರು ಎತ್ತುವ ಪ್ರಶ್ನೆಗಳಿಗೆ ಉತ್ತರಿಸುವ ತಾಕತ್ತಿಲ್ಲದ ಕಾರಣಕ್ಕೇ ಅವರು ಬಂದಿಲ್ಲ' ಎಂದು ರೈತ ಮುಖಂಡ ಬಡಗಲಪುರ ನಾಗೇಂದ್ರ ಲೇವಡಿ ಮಾಡಿದರು.

'ಘೇಂಡಾಮೃಗಕ್ಕಿಂತ ದಪ್ಪ ಚರ್ಮದ ಸರ್ಕಾರ'

'ರಾಜ್ಯದಲ್ಲಿರುವುದು ಕೇವಲ ದಪ್ಪ ಚರ್ಮದ ಸರ್ಕಾರ ಅಲ್ಲ, ಘೇಂಡಾಮೃಗಕ್ಕಿಂತ ದಪ್ಪವಾದ ಚರ್ಮದ ಸರ್ಕಾರ' ಎಂದು ಸಿದ್ದರಾಮಯ್ಯ ಟೀಕಿಸಿದರು. 'ವಸತಿ ಸಚಿವ ವಿ. ಸೋಮಣ್ಣಗೆ ಜನಪ್ರತಿನಿಧಿಗಳ ನ್ಯಾಯಾಲಯ ಸಮನ್ಸ್ ನೀಡಿದೆ. ರಾಜೀನಾಮೆ ನೀಡಿ ತನಿಖೆ ಎದುರಿಸಿ ಎಂದರೆ, ರಾಜೀನಾಮೆ ಕೊಡಿಸುವುದಿಲ್ಲ ಎಂದು ಮುಖ್ಯಮಂತ್ರಿಯೇ ಹೇಳುತ್ತಾರೆ. ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ಕೆ.ಜೆ. ಜಾರ್ಜ್ ವಿರುದ್ಧ ಆರೋಪ ಬಂದ ಕೂಡಲೇ ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಿಸಿದ್ದೆ. ಈ ರೀತಿಯ ನೈತಿಕತೆ ಬಿಜೆಪಿಯವರಿಂದ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಸೂಕ್ಷ್ಮತೆ ಇಲ್ಲದ ರಾಜಕಾರಣಿಗಳ ನಡುವೆ ನಾವು ಸಿಕ್ಕಿಕೊಂಡಿದ್ದೇವೆ' ಎಂದರು.

ಶಿರವಸ್ತ್ರಕ್ಕೆ ಅವಕಾಶ ನೀಡಿ : ಕುಮಾರಸ್ವಾಮಿ ಒತ್ತಾಯ

'ತಕ್ಷಣವೇ ಪರಿಸ್ಥಿತಿ ತಿಳಿಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳಿಗೆ ಸಮವಸ್ತ್ರದ ಭಾಗವಾಗಿರುವ ವೇಲ್ ಅನ್ನೇ ಶಿರವಸ್ತ್ರವಾಗಿ ಬಳಸಲು ಅವಕಾಶ ನೀಡುವ ಮೂಲಕ ಶಿಕ್ಷಣ ಮುಂದುವರಿಸಲು ಅವಕಾಶ ನೀಡಬೇಕು. ಕೆಲವು ಹೆಣ್ಣು ಮಕ್ಕಳನ್ನು ರಿಮೋಟ್ ಕಂಟ್ರೋಲ್‌ನಂತೆ ಬಳಸುತ್ತಿರುವ ಸಂಘಟನೆಗಳನ್ನು ಮಟ್ಟ ಹಾಕಬೇಕು ಮತ್ತು ಪ್ರಕ್ಷುಬ್ಧ ವಾತಾವರಣವನ್ನು ಸೌಹಾರ್ದವಾಗಿ ತಿಳಿಗೊಳಿಸಬೇಕು'.

ವಿಧಾನಸಭೆಯಲ್ಲಿ ಬುಧವಾರ ನಿಯಮ 69 ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸರ್ಕಾರ ನೀಡಿದ ಸಲಹೆಗಳಿವು.

'ದೇಶ 75 ವರ್ಷ ಸವೆಸಿದೆ. ಅಮೃತಮಹೋತ್ಸವದ ಸಂದರ್ಭದಲ್ಲಿದ್ದಾಗ ಇಂತಹ ಬೆಳವಣಿಗೆಯನ್ನು ನೋಡುತ್ತೇವೆ ಎಂದುಕೊಂಡಿರಲಿಲ್ಲ. ಸರ್ಕಾರ ತಾಯಿ ಹೃದಯದಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕು. ಕಾಣದ ಕೈಗಳ ಕೈವಾಡ ಇದೆ ಎಂದು ಹೈಕೋರ್ಟ್ ಹೇಳಿದೆ. ಅವುಗಳನ್ನು ಆರಂಭದಲ್ಲೇ ಚಿವುಟಿ ಹಾಕಬೇಕಿತ್ತು. ಹಿಜಾಬ್ ಪ್ರಸ್ತಾಪಿಸುವುದು ಬೇಡ, ಅತ್ಯಂತ ಸೂಕ್ಷ್ಮವಾದುದು. ಸುಮ್ಮನೆ ಯಾಕೆ ಆಕ್ರೋಶಕ್ಕೆ ಒಳಗಾಗಬೇಕು ಎಂದು ಹಲವು ಶಾಸಕರು ನನಗೆ ಹೇಳಿದರು. ಆದರೆ, ರಾಜ್ಯದಲ್ಲಿ ಹದಗೆಟ್ಟಿರುವ ಸ್ಥಿತಿಯನ್ನು ತಿಳಿಗೊಳಿಸುವುದು ನಮ್ಮ ಜವಾಬ್ದಾರಿಯಲ್ಲವೇ? ಕೇವಲ ಮತ ಗಳಿಸುವುದು ಮಾತ್ರ ಮುಖ್ಯವೇ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

> ಮಂಡ್ಯದಲ್ಲಿ ಮುಸ್ಲಿಂ ಯುವತಿಗೆ ಜೀವಕ್ಕೆ ಬೆದರಿಕೆ ಇರಲಿಲ್ಲ. ಆದರೆ ಬೇರೆಯದೇ ಬಿಲ್ಡಪ್ ಕೊಡಲಾಯಿತು. ಅಲ್ಲಿಗೆ ಬೇರೆ ರಾಜ್ಯದ ಶಾಸಕರು ಬಂದು ಹಣ ಇತ್ಯಾದಿ ಕೊಟ್ಟಿದ್ದನ್ನು ಒಪ್ಪುವುದಿಲ್ಲ
> **ಎಚ್.ಡಿ.ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ನಮ್ಮ ಸಮಾಜದಲ್ಲಿ ಹಿಂದೆ ಗಂಡ ಸತ್ತ ನಂತರ ಪತ್ನಿಯ ತಲೆ ಬೋಳಿಸುವ ಪದ್ಧತಿ ಇತ್ತು. ಶಿಕ್ಷಣದಿಂದಾಗಿ ಮಹಿಳೆಯರು ಸಶಕ್ತರಾದರು. ಆ ಮೌಢ್ಯವೂ ಹೋಯಿತು. ಸತಿ ಸಹಗಮನ ಪದ್ಧತಿಯೂ ಈಗ ಇಲ್ಲ. ಸಾಕಷ್ಟು ಪರಿವರ್ತನೆಗಳಾಗಿವೆ. ಅದೇ ರೀತಿಯಲ್ಲಿ ಮುಸ್ಲಿಂ ಹೆಣ್ಣು ಮಕ್ಕಳು ಹಿಂದೆ ಮನೆಗಳಿಂದ ಹೊರಗೆ ಬರುತ್ತಿರಲಿಲ್ಲ. ಈಗ ಆಸಕ್ತಿಯಿಂದ ಶಾಲೆಗೆ ಬರುತ್ತಿದ್ದಾರೆ. ಉತ್ತಮ ಶಿಕ್ಷಣದಿಂದ ಜ್ಞಾನ ಬಂದಾಗ ಅವರಲ್ಲಿ ಪರಿವರ್ತನೆ ಆಗಬಹುದು' ಎಂದು ಆಶಿಸಿದರು.

> ಪರೀಕ್ಷೆ ಬರುತ್ತಿದ್ದು ಮುಸ್ಲಿಂ ಹೆಣ್ಣು ಮಕ್ಕಳಿಗೆ ಶಿರವಸ್ತ್ರ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಿ. ಮುಸ್ಲಿಂ ಸಮುದಾಯ ತಮ್ಮ ನೋವು ತೋಡಿಕೊಳ್ಳಲು ಬಂದ್ ಮಾಡಿತು, ಹೈಕೋರ್ಟ್ ವಿರುದ್ಧ ಅಲ್ಲ
> **ಯು.ಟಿ.ಖಾದರ್,** ವಿರೋಧಪಕ್ಷದ ಉಪನಾಯಕ

ರಾಜ್ಯ ಹಲವು ಕಡೆಗಳಲ್ಲಿ ಮುಸ್ಲಿಮರು ಜಾತ್ರೆಗಳಲ್ಲಿ ಅಂಗಡಿ–ಮಳಿಗೆ ಹಾಕಬಾರದು ಎಂಬ ಬೋರ್ಡ್‌ಗಳನ್ನು ಹಾಕಿದ್ದಾರೆ. ಹಿಂದು ಮತ್ತು ಮುಸ್ಲಿಮರು ಅಣ್ಣತಮ್ಮಂದಿರ ಹಾಗೆಯೇ ಬದುಕಬೇಕು. ಉತ್ತರಭಾರತದ ರೀತಿಯ ರಾಜಕಾರಣ ಇಲ್ಲಿ ನಡೆಯುವುದಿಲ್ಲ. ಅಲ್ಲಿನ ರಾಜಕಾರಣವೇ ಬೇರೆ. ಅದು ಇಲ್ಲಿಗೆ ಸರಿ ಹೊಂದುವುದಿಲ್ಲ. ಸರ್ವೇಜನ ಸುಖಿನೋಭವಂತು ಎಂಬ ಮಾತಿನಲ್ಲಿ ನಂಬಿಕೆ ಇಟ್ಟವರು. ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅವಕಾಶ ನೀಡಬೇಕು ಎಂದರು.

ತಂದೆ ಜಾತಿ ಮಾತ್ರವೇ ಅನ್ವಯ: ಹೈಕೋರ್ಟ್

ಬೆಂಗಳೂರು: 'ವಿವಾಹದ ನಂತರ ಪತಿಯ ಜಾತಿ ಪತ್ನಿಗೆ ವರ್ಗಾವಣೆಯಾಗುವುದಿಲ್ಲ. ತಂದೆಯ ಜಾತಿಯೇ ಮಕ್ಕಳಿಗೂ ಅನ್ವಯವಾಗುತ್ತದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಯನ್ನು ವಿವಾಹವಾಗಿರುವ ನಾನು ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದ್ದ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಿ ಜಯಗಳಿಸಿದ್ದೇನೆ. ಆದರೆ, ಈ ಆಯ್ಕೆಯನ್ನು ವಿಚಾರಣಾ ನ್ಯಾಯಾಲಯ ಅಸಿಂಧುಗೊಳಿಸಿದೆ. ಆದ್ದರಿಂದ ಈ ಆದೇಶವನ್ನು ರದ್ದುಗೊಳಿಸಬೇಕು' ಎಂದು ಕೋರಿ ಶಿವಮೊಗ್ಗದ ಬಾಳೆಕೊಪ್ಪ ನಿವಾಸಿ ಎಂ.ಜಿ. ಅರ್ಚನಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ತಿರಸ್ಕರಿಸಿದ್ದಾರೆ.

'ಪರಿಶಿಷ್ಟ ಜಾತಿ ಅಥವಾ ಪಂಗಡದಲ್ಲಿ ಹುಟ್ಟಿದವರು ಮಾತ್ರ ಆ ಜಾತಿಗೆ ಮೀಸಲಾಗಿರುವ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಬಹುದಾಗಿದೆ' ಎಂದು ಆದೇಶದಲ್ಲಿ ಸ್ಪಷ್ಟಪಡಿಸಿರುವ ಪೀಠ, 'ಯಾವ ಕುಲದಲ್ಲಿ ಜನಿಸಬೇಕು ಎಂಬುದು ದೈವ ನಿರ್ಣಯವಾಗಿರುತ್ತದೆ. ಆದರೆ, ಮನುಷ್ಯ ಸಾಧಿಸಿರುವ ಅಧಿಕಾರ (ಶಕ್ತಿ) ಮತ್ತು ಪರಾಕ್ರಮ ಆತನ ವೈಯಕ್ತಿಕ ಸಾಧನೆಯ ಫಲವಾಗಿರುತ್ತದೆ' ಎಂಬ ಮಹಾಭಾರತದ ನುಡಿಯನ್ನು ಉಲ್ಲೇಖಿಸಿದೆ.

ಕರಾವಳಿಯ 'ಗರ್ನಲ್ ಸಾಹೇಬ್ರು' ಎಂದೇ ಜನಜನಿತವಾಗಿರುವ ಮನೆತನಗಳು

ಜಾತ್ರೆಗಾಗಿ ಜೀವ ಪಣಕ್ಕಿಟ್ಟವರು

• ಹರ್ಷವರ್ಧನ ಪಿ.ಆರ್.


ಸಂಗ್ರಹ ಚಿತ್ರ

ಪ್ರಜಾವಾಣಿ ವಿಶೇಷ

ಮಂಗಳೂರು: ಕರಾವಳಿಯಲ್ಲಿ ಹೆಚ್ಚಿನ ಜಾತ್ರೆಯ ರಥೋತ್ಸವ, ದೈವಕೋಲಗಳಲ್ಲಿ ದೇವ–ದೈವದ ನಡೆ ಆರಂಭಗೊಳ್ಳುವುದೇ ಬೆಡಿಯ(ಸಿಡಿಮದ್ದು) ಮೂಲಕ. ಜಾತ್ರೆಯ ದೇವರು ಅಥವಾ ದೈವದ ಚಾಕ್ರಿ (ಸೇವೆ)ಯನ್ನು ಒಂದೊಂದು ಜಾತಿ, ಧರ್ಮದವರು ನಡೆಸಿಕೊಂಡು ಬಂದಿರುವುದು ಸಂಪ್ರದಾಯ. ಈ ಪೈಕಿ 'ಬೆಡಿ' (ಸಿಡಿಮದ್ದು) ಚಾಕ್ರಿಯನ್ನು ಶತಮಾನಗಳಿಂದ ನಿರ್ವಹಿಸುತ್ತಾ ಬಂದಿರುವುದು ಮುಸ್ಲಿಂ ಕುಟುಂಬಗಳು. ಜಾತ್ರೆಗಾಗಿ ಜೀವ ಪಣಕ್ಕಿಟ್ಟು ಚಾಕ್ರಿ ಮಾಡುವ ಈ ಮನೆತನವೆಲ್ಲ 'ಗರ್ನಲ್ ಸಾಹೇಬ್ರು' ಎಂದೇ ಜನಜನಿತ.

ಇಂತಹ ಸುಮಾರು 20ಕ್ಕೂ ಹೆಚ್ಚು ಕುಟುಂಬಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿವೆ. ಸುಮಾರು ಐದಾರು ತಲೆಮಾರುಗಳಿಂದಲೂ ಜಾತ್ರೆಯಲ್ಲಿ ಸಿಡಿಮದ್ದು ಸಿಡಿಸುತ್ತಾ ಬಂದಿದ್ದಾರೆ. ಇದರ ತಯಾರಿಯೇ ಅತ್ಯಂತ ಅಪಾಯಕಾರಿ. ಸಿಡಿಮದ್ದು ತಯಾರಿಸುವಾಗ ಅಣ್ಣ, ತಮ್ಮ, ಸಂಬಂಧಿ ಸೇರಿದಂತೆ ಕನಿಷ್ಠ ಕುಟುಂಬದ ಒಬ್ಬ ಸದಸ್ಯನ್ನಾದರೂ ಕಳೆದುಕೊಂಡಿದ್ದಾರೆ.

ಇಲ್ಲವೇ, ಕೈ, ಕಾಲು... ಇಂತಹ ನೋವುಗಳು ಪ್ರತಿ ಕುಟುಂಬದಲ್ಲಿವೆ.

'ಜಾತ್ರೆಗೆ ಸಿಡಿಮದ್ದು ಸಿದ್ಧಪಡಿಸುವ ವೇಳೆ ನಾಲ್ಕೈದು ಜನ ಮನೆಯಲ್ಲಿರುತ್ತಾರೆ. ನಮಗೆ ನಿತ್ಯವೂ ಆತಂಕವೇ. ಒಂದು ರೀತಿಯಲ್ಲಿ ಯುದ್ಧಭೂಮಿಯ ಸ್ಥಿತಿ. ಆದರೆ, ಹಿರಿಯರು ನಡೆಸಿಕೊಂಡು ಬಂದ ದೇವರ ಸೇವೆ ನಿಲ್ಲಿಸುವುದು ಬೇಡ ಎಂದು ಮನೆಯವರು ಹೇಳುತ್ತಾರೆ' ಎಂದು ಈ ಕುಟುಂಬವೊಂದರ ತಾಯಿ ತಿಳಿಸಿದರು. ಕೆಲ ವರ್ಷಗಳ ಹಿಂದೆ ಕುಟುಂಬದ ಸದಸ್ಯನೊಬ್ಬನನ್ನು ಕಳೆದುಕೊಂಡ ನೋವು ಅವರಲ್ಲಿ ಮಡುಗಟ್ಟಿತ್ತು.

'ನನ್ನ ಮುತ್ತಜ್ಜನ ಅಜ್ಜನ ಕಾಲದಿಂದಲೂ 'ಬೆಡಿ ಚಾಕ್ರಿ' ನಡೆದುಕೊಂಡು ಬಂದಿದೆ. ಅಪಾಯದ ಅರಿವಿದೆ. ಆದರೆ, ಯಾರೋ ಹೇಳಿದರು ಎಂದು ದೇವರ ಸೇವೆ ಬಿಡಲು ಸಾಧ್ಯವೇ?' ಎಂದು ಬಂಟ್ವಾಳ ಸಮೀಪದ ಗರ್ನಲ್ ಸಾಹೇಬ್ರು (ಹೆಸರು ಬಹಿರಂಗ ಪಡಿಸಲು ಇಚ್ಛಿಸದ) ಪ್ರಶ್ನಿಸಿದರು.

'ಈ ಸೇವೆಗೆ ನಮಗೆ ಎರಡು ಸೇರು (ಅಂದಾಜು 2 ಕೆ.ಜಿ.) ಭತ್ತ ನೀಡುತ್ತಿದ್ದರು. ಮದ್ರಾಸ್ ಸರ್ಕಾರ ಪರವಾನಗಿ ನೀಡಿತ್ತು. ಅದಕ್ಕೂ ಮೊದಲು ರಾಜರ ಹುಕುಂ ಇತ್ತು' ಎಂದು ನನ್ನ ಅಜ್ಜ ಹೇಳುತ್ತಿದ್ದರು. ತಂದೆಯ ಕಾಲದಲ್ಲಿ ಹಣ ನೀಡಲು ಆರಂಭಿಸಿದರು. ಕೆಲ ವರ್ಷಗಳ ಹಿಂದೆ ಬೆಡಿ ತಯಾರಿ ವೇಳೆ ನನ್ನ ಬಾವನನ್ನು ಕಳೆದುಕೊಂಡೆವು. ಆದರೆ, ಸೇವೆ ನಿಲ್ಲಿಸಿಲ್ಲ' ಎಂದರು.

'ಚಾಕ್ರಿ ಇದ್ದಾಗ ನಾವು ಮಾಂಸಾಹಾರ ಮಾಡುವುದಿಲ್ಲ. ಮಹಿಳೆಯರ ತಿಂಗಳ ದಿನ ಅಪ್ಪ ಪ್ರತ್ಯೇಕವಾಗಿ ಇರುತ್ತಿದ್ದರು. 'ಮಡಿ' ಕಾಯ್ದುಕೊಳ್ಳುತ್ತಿದ್ದರು. ಅದನ್ನೇ ನಾವೂ ಪಾಲಿಸುತ್ತೇವೆ' ಎಂದರು.

'ಜಾತ್ರೆಯ ದೇವರನ್ನು ಪ್ರಾರ್ಥಿಸಿದ ಬಳಿಕ ಬೆಡಿ ಇಡಲಾಗುತ್ತದೆ. ತಂತ್ರಿ ಹಾಗೂ ಅರ್ಚಕರು ನಂದಾದೀಪದಿಂದ ಕೊಟ್ಟ ದೀಪವನ್ನು ತಂದು ಬೆಡಿ ಸಿಡಿಸಲಾಗುತ್ತದೆ. ಆ ಬಳಿಕವೇ ದೇವರು ರಥೋತ್ಸವ, ನಗರ ಪ್ರದಕ್ಷಿಣೆ, ಕಟ್ಟೆ ಪೂಜೆ ಇತ್ಯಾದಿಗಳಿಗೆ ಹೊರಡುವುದು. ದೈವ ಸ್ಥಾನಗಳಲ್ಲೂ ಹಾಗೆಯೇ' ಎಂದು ಸಹೋದರನನ್ನು ಕಳೆದುಕೊಂಡ ಪುತ್ತೂರಿನ ಗರ್ನಲ್ ಸಾಹೇಬ್ರು ತಿಳಿಸಿದರು.

ಅದು ದೇವರ–ದೈವದ ಜಾತ್ರೆ, ರಥೋತ್ಸವ, ಕೋಲಗಳು ಮಾತ್ರವಲ್ಲ, ಕಂಬಳ, ಉತ್ಸವಗಳಲ್ಲೂ 'ಗರ್ನಲ್ ಸಾಹೇಬ್ರ' ಸದ್ದು ಮತ್ತು ಬೆಳಕು ಇದ್ದರೆಯೇ ಗಮ್ಮತ್ತು. 'ಇಲ್ಲಿ ತನಕ ನಮ್ಮ ಮನೆತನದ ಶ್ರದ್ಧೆ–ಭಕ್ತಿ ನೋಡಿ ಚಾಕ್ರಿ ನೀಡುತ್ತಿದ್ದರು. ಈಗ ಭಕ್ತಿ–ಶ್ರದ್ಧೆ ಬದಲಾಗಿ 'ಹುಟ್ಟು' ನೋಡಬೇಕು ಎಂದು ಕೆಲವರು ಒತ್ತಡ ಹಾಕುತ್ತಿದ್ದಾರಂತೆ. 'ಬೆಡಿ ಚಾಕ್ರಿ'ಗೆ ಎಂದಿಗೂ ಅಲ್ಲಾಹನು ಬೇಡ (ಮನಸ್ಸಲ್ಲಿ ಬಂದು) ಎನ್ನಲಿಲ್ಲ. ಎಲ್ಲವನ್ನೂ ಊರ ದೈವ ಹಾಗೂ ಮಹಾಲೀಂಗೇಶ್ವರ ನೋಡಿಕೊಳ್ಳುತ್ತಾರೆ' ಎಂದು ಮಾತು ನಿಲ್ಲಿಸಿದರು.


ಕಲಬುರಗಿಯ ಶರಣಬಸವೇಶ್ವರ ಜಾತ್ರೆಯ ಅಂಗವಾಗಿ ಬುಧವಾರ ಮುಸ್ಲಿಂ ಮಹಿಳೆಯೊಬ್ಬರು ಹಿಂದೂ ಮಹಿಳೆಯರಿಗೆ ಬಳೆಗಳಗಳನ್ನು ತೊಡಿಸುತ್ತಿರುವುದು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

'ಅಪ್ಪ'ನ ಜಾತ್ರೆ: ಬಳೆ, ಕುಂಕುಮ ಮಾರುವ ಮುಸ್ಲಿಮರು

• ಕಿರಣ ನಾಯ್ಕನೂರ

ಕಲಬುರಗಿ: ಇಲ್ಲಿ ನಡೆಯುತ್ತಿರುವ ಶರಣಬಸವೇಶ್ವರರ ಜಾತ್ರೆ ಭಾವೈಕ್ಯತೆಯ ಸಂದೇಶ ಸಾರುತ್ತಿದೆ.

ಕಲ್ಯಾಣ ಕರ್ನಾಟಕದ ಆರಾಧ್ಯ ದೈವ ಶರಣಬಸವೇಶ್ವರರಿಗೆ ಅಪಾರ ಭಕ್ತರಿದ್ದಾರೆ. ಅಮಾವಾಸ್ಯೆ, ಶ್ರಾವಣ ಸೋಮವಾರ, ಜಾತ್ರೆಯ ದಿನ ಅನೇಕ ಮುಸ್ಲಿಮರು ದೇವಸ್ಥಾನಕ್ಕೆ ಆಗಮಿಸಿ ಸರತಿಯಲ್ಲಿ ನಿಂತು ಶರಣಬಸವೇಶ್ವರರ ದರ್ಶನ ಪಡೆಯುತ್ತಾರೆ.

ಈಗ ರಾಜ್ಯದ ಕೆಲ ಧಾರ್ಮಿಕ ಸ್ಥಳಗಳಲ್ಲಿ 'ಮುಸ್ಲಿಂ ವ್ಯಾಪಾರಸ್ಥರಿಗೆ ನಿಷೇಧ' ಎನ್ನುವ ಕೂಗಿಗೇ ಅಪವಾದ ಎನ್ನುವಂತೆ ಅದೆಷ್ಟೋ ಮುಸ್ಲಿಂ ವ್ಯಾಪಾರಸ್ಥರು ಇಲ್ಲಿಯ ಜಾತ್ರೆಯಲ್ಲಿ ಅಂಗಡಿ ಇಟ್ಟು ನೆಮ್ಮದಿಯಿಂದ ವಹಿವಾಟು ನಡೆಸುತ್ತಿದ್ದಾರೆ.

ಶರಣಬಸವೇಶ್ವರ ಜಾತ್ರಾ ಮೈದಾನದಲ್ಲಿ ವಿವಿಧ ಬಗೆಯ ತಿನಿಸು, ಆಟ, ಅಲಂಕಾರಿಕ ಸಾಮಗ್ರಿಗಳ ಖರೀದಿ ಭರಾಟೆ ಜೋರಾಗಿ ನಡೆಯುತ್ತಿದೆ. ಅದರಲ್ಲೂ ಬಳೆ, ಕುಂಕುಮಗಳನ್ನು ಮುಸ್ಲಿಂ ಸಮುದಾಯದವರೇ ಹೆಚ್ಚಾಗಿ ಮಾರಾಟ ಮಾಡುತ್ತಿದ್ದಾರೆ.

ಒಂದೇ ಕಡೆ ಸುಮಾರು 20 ಅಂಗಡಿಗಳಿದ್ದು, ಹಿಂದೂ ಮಹಿಳೆಯರು ತಮಗೆ ಬೇಕಾದ ಬಣ್ಣ ಬಣ್ಣದ ಬಳೆ ಆರಿಸಿಕೊಂಡು ಮುಸ್ಲಿಂ ಮಹಿಳೆಯರಿಂದಲೇ ತೊಡಿಸಿಕೊಳ್ಳುತ್ತಿದ್ದಾರೆ.

ಮುಸ್ಲಿಂ ವೃದ್ಧರೊಬ್ಬರು ಕುಂಕುಮ, ವಿಭೂತಿ, ರುದ್ರಾಕ್ಷಿ ಮಾರಾಟ ಮಾಡುತ್ತಿರುವುದು ವಿಶೇಷ.

ಫಕೀರರೊಬ್ಬರು ಶರಣಬಸವೇಶ್ವರರ ಭವ್ಯ ರಥದ ಮುಂದೆ ನಿಂತು ಜನರಿಗೆ ನವಿಲು ಗರಿಯಿಂದ ಆಶೀರ್ವಾದ ಮಾಡುವುದು, ಜನರು ಭಕ್ತಿಯಿಂದ ಕಾಣಿಕೆ ನೀಡುವುದು, ಮುಸ್ಲಿಂ ಸಮುದಾಯದವರು ಮಹಾದಾಸೋಹದಲ್ಲಿ ಪ್ರಸಾದ ಸ್ವೀಕರಿಸುವುದು ಜಾತ್ರೆಯಲ್ಲಿ ಗಮನ ಸೆಳೆಯುತ್ತಿದೆ.

'ಜಾತ್ಯತೀತ ಪಾಠ ಮಾಡುವ ಅಗತ್ಯ ಇಲ್ಲ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಸಂವಿಧಾನದಲ್ಲಿ 'ಜಾತ್ಯತೀತ' ಪದ ಇರಬೇಕೊ– ಬೇಡವೊ ಎನ್ನುವುದರ ಬಗ್ಗೆ ಚರ್ಚೆ ಅಗತ್ಯ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ 'ಜಾತ್ಯತೀತ' ಪದ ಬಳಸಿರಲಿಲ್ಲ. ಕಾಂಗ್ರೆಸ್ ನೇತೃತ್ವದ ಸರ್ಕಾರ 'ಜಾತ್ಯತೀತ' ಪದ ಸೇರಿಸಿತ್ತು. ಬಹುಸಂಖ್ಯಾತ ಹಿಂದೂಗಳಿಗೆ ಮೋಸ ಮಾಡಲು ಕಾಂಗ್ರೆಸ್‌ನವರು ಉದಾರತೆ, ಜಾತ್ಯತೀತತೆ ಪಾಠ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇವನೊಬ್ಬ ನಾಮ ಹಲವು ಎನ್ನುವುದಕ್ಕೆ ಇಸ್ಲಾಂನಲ್ಲಿ ಅವಕಾಶ ಇಲ್ಲ. ಕೃಷ್ಣ, ರಾಮ ಹುಟ್ಟಿದ ನಾಡಿನಲ್ಲಿ ಅಲ್ಲಾ ಒಬ್ಬನೇ ದೇವರು ಅಂತ ಕೂಗುತ್ತಾರೆ. ಹಿಂದೂಗಳ ಅಂಗಡಿಗಳಲ್ಲಿ ಮುಸ್ಲಿಮರು ಮಾಂಸ ಖರೀದಿಸುತ್ತಾರಾ? ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಇದ್ದೇ ಇರುತ್ತದೆ ಎಂದು ಹೇಳಿದರು.

ಇಸ್ಲಾಂನಲ್ಲಿ ಜಾತ್ಯತೀತಕ್ಕೆ ಅವಕಾಶ ಇದಿಯಾ? ಹಿಂದೂಗಳು ದೇಗುಲಗಳಲ್ಲಿ ಈಶ್ವರ, ಅಲ್ಲಾ ತೇರೆ ನಾಮ್ ಎಂದು ಭಜಿಸುತ್ತಾರೆ. ಆದರೆ ಮಸೀದಿಯಲ್ಲಿ ಮೌಲ್ವಿ, ಮುತವಲ್ಲಿ, ಧರ್ಮಗುರು ಅದನ್ನು ಹೇಳುತ್ತಾರಾ? ಮೊದಲು ಮುಸ್ಲಿಮರು ಜಾತ್ಯತೀತರಾಗಬೇಕು. ನಂತರ ಬೇರೆಯವರಿಗೆ ಉಪದೇಶ ಮಾಡಬೇಕು ಎಂದು ಹೇಳಿದರು.

ಮುಸ್ಲಿಮರಿಗೆ ನಿರ್ಬಂಧ ಅಮಾನವೀಯ: ಎಚ್.ವಿಶ್ವನಾಥ್

ಮೈಸೂರು: 'ಜಾತ್ರೆ ಮತ್ತು ಧಾರ್ಮಿಕ ಉತ್ಸವಗಳಲ್ಲಿ ಮುಸ್ಲಿಂ ವ್ಯಾಪಾರಿಗಳು ವಹಿವಾಟು ನಡೆಸದಂತೆ ನಿರ್ಬಂಧ ಹೇರುತ್ತಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಇದು ಅಮಾನವೀಯ ನಡೆ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಖಂಡಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ವ್ಯಾಪಾರ ಅವರ ವೃತ್ತಿ. ಒಂದು ಸಮುದಾಯದ ವೃತ್ತಿಗೆ ಬಹಿಷ್ಕಾರ ಹಾಕುವುದು ಸರಿಯಲ್ಲ. ಅವರು ಹೊಟ್ಟೆಗೆ ಏನು ಮಾಡಬೇಕು? ಎಲ್ಲಿಗೆ ಹೋಗಬೇಕು? ಮುಸ್ಲಿಮರು ಬೇರೆಯಲ್ಲ, ಅವರು ಭಾರತೀಯರು' ಎಂದರು.

'ನಾವೆಲ್ಲರೂ ಸಂವಿಧಾನಕ್ಕೆ ಬದ್ಧರಾಗಿ ನಡೆಯಬೇಕು. ಸರ್ಕಾರ ಅವರಿಗೆ ರಕ್ಷಣೆ ಒದಗಿಸಲಿ. ಎಲ್ಲ ಜಾತಿ, ಜನಾಂಗ, ಧರ್ಮ ಮತ್ತು ಭಾಷಿಕರಿಗೂ ಇಲ್ಲಿ ಜೀವಿಸಲು, ವೃತ್ತಿ ಮಾಡಿಕೊಳ್ಳಲು ಸಂವಿಧಾನದಲ್ಲಿ ಅವಕಾಶ ನೀಡಲಾಗಿದೆ. ಸಂವಿಧಾನವನ್ನು ಮೀರಿ ಹೋಗುವುದನ್ನು ಒಪ್ಪಲಾಗದು. ಅಂತಹ ಪ್ರಯತ್ನ ಯಾರೂ ಮಾಡಬಾರದು ಎಂಬುದೇ ನನ್ನ ವಿನಂತಿ' ಎಂದು ಹೇಳಿದರು.

ಮುಸ್ಲಿಂ ವ್ಯಾಪಾರಿಗಳ ಅನುಪಸ್ಥಿತಿಯಲ್ಲಿ ಕಾಪು ಜಾತ್ರೆ

ಕಾಪು (ಉಡುಪಿ ಜಿಲ್ಲೆ): ಪ್ರಸಿದ್ಧ ಕಾಪು ಮಾರಿಗುಡಿ ಜಾತ್ರೆಯು ಮೊದಲ ಬಾರಿಗೆ ಮುಸ್ಲಿಂ ವ್ಯಾಪಾರಿಗಳ ಅನುಪಸ್ಥಿತಿಯಲ್ಲಿ ಬುಧವಾರ ಮುಕ್ತಾಯವಾಯಿತು.

ವ್ಯಾಪಾರ ಮಾಡಲು ಅನುಮತಿ ನೀಡುವಂತೆ ಕೊನೆಯ ಕ್ಷಣದವರೆಗೂ ಮುಸ್ಲಿಂ ವ್ಯಾಪಾರಿಗಳು ಮಾಡಿದ ಮನವಿಗೆ ದೇವಸ್ಥಾನದ ಆಡಳಿತ ಮಂಡಳಿಯಿಂದ ಒಪ್ಪಿಗೆ ಸಿಗಲಿಲ್ಲ. ಪರಿಣಾಮ ಮುಸ್ಲಿಂ ವ್ಯಾಪಾರಿಗಳು ಜಾತ್ರೆಯಿಂದ ಹೊರಗುಳಿಯಬೇಕಾಯಿತು.

ದೇವಸ್ಥಾನದ ಆವರಣದಲ್ಲಿ ಮುಸ್ಲಿಮರ ಬದಲಾಗಿ ಹಿಂದೂ ವ್ಯಾಪಾರಿಗಳೇ ಕೋಳಿ ಮಾರಾಟ ಮಳಿಗೆ, ಹೂ ಹಣ್ಣು, ಐಸ್‌ಕ್ರೀಂ, ಜ್ಯೂಸ್ ಕೇಂದ್ರಗಳನ್ನು ತೆರೆದಿದ್ದರು. ಎಲ್ಲ ಮಳಿಗೆಗಳಿಗೂ ಕೇಸರಿ ಧ್ವಜಗಳನ್ನು ಹಾಕಲಾಗಿತ್ತು. ಜಾತ್ರೆಯಲ್ಲಿ ಈ ಬಾರಿ ಸುಮಾರು 200 ಮಳಿಗೆಗಳಲ್ಲಿ ಒಟ್ಟಾರೆ ಸುಮಾರು ₹10 ಕೋಟಿಗೂ ಹೆಚ್ಚು ವಹಿವಾಟು ನಡೆದಿದೆ ಎಂದು ಅಂದಾಜಿಸಲಾಗಿದೆ.

ವ್ಯಾಪಾರ ನಿರ್ಬಂಧ: ಆದೇಶಿಸಲು ಒತ್ತಾಯ

ಮಂಗಳೂರು: ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ರಾಜ್ಯದ ಎಲ್ಲ ದೇವಸ್ಥಾನ, ದೈವಸ್ಥಾನಗಳ ಜಾತ್ರಾ ಮಹೋತ್ಸವ, ರಥೋತ್ಸವ ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹಿಂದೂಯೇತರರಿಗೆ ಅವಕಾಶ ನೀಡದಂತೆ ಆದೇಶ ಹೊರಡಿಸಲು ವಿಶ್ವ ಹಿಂದೂ ಪರಿಷತ್, ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಿಶ್ವ ಹಿಂದೂ ಪರಿಷತ್ ವಿಭಾಗ ಕಾರ್ಯದರ್ಶಿ ಶರಣ್ ಪಂಪ್‌ವೆಲ್, ಈ ಕುರಿತು ಧಾರ್ಮಿಕ ದತ್ತಿ ಖಾತೆ ಸಚಿವೆ ಶಶಿಕಲಾ ಜೊಲ್ಲೆ ಅವರಿಗೆ ಜಿಲ್ಲಾಧಿಕಾರಿ ಮೂಲಕ ಮನವಿ ಸಲ್ಲಿಸಲಾಗಿದೆ ಎಂದರು.

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮದ ಪ್ರಕಾರ, ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಿಸಿದ ದೇವಸ್ಥಾನಗಳ ಸುತ್ತಲಿನ ಪ್ರದೇಶದಲ್ಲಿ ಹಿಂದೂಯೇತರರಿಗೆ ಗುತ್ತಿಗೆ ನೀಡುವಂತಿಲ್ಲ ಎಂದು ಹೇಳಿದರು.

'ಅನ್ಯ ಧರ್ಮೀಯರಿಗೆ ಅವಕಾಶ ಬೇಡ'

ಪ್ರಜಾವಾಣಿ ವಾರ್ತೆ

ಮೂಡಿಗೆರೆ: 'ತಾಲ್ಲೂಕಿನ ದೇವರುಂದ ಪ್ರಸನ್ನ ರಾಮೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಯುಗಾದಿ ದಿನ ನಡೆಯುವ ರಥೋತ್ಸವದ ಸಂದರ್ಭದಲ್ಲಿ ವ್ಯಾಪಾರ ವಹಿವಾಟು ನಡೆಸಲು ಹಿಂದೂಗಳಿಗೆ ಮಾತ್ರ ಅವಕಾಶ ನೀಡಬೇಕು' ಎಂದು ಒತ್ತಾಯಿಸಿ ಬುಧವಾರ ಹಿಂದೂಪರ ಸಂಘಟನೆ ಮುಖಂಡರು ತಹಶೀಲ್ದಾರ್ ನಾಗರಾಜು ಅವರಿಗೆ ಮನವಿ ಸಲ್ಲಿಸಿದರು.

'ಅನ್ಯ ಧರ್ಮಿಯರು ಹಿಂದೂ ಧರ್ಮದ ಅವಹೇಳನ, ಹಿಂದೂಗಳ ಹತ್ಯೆ, ಲವ್ ಜಿಹಾದ್ ಮೊದಲಾದ ಕೃತ್ಯದಲ್ಲಿ ತೊಡಗಿದ್ದಾರೆ. ನ್ಯಾಯಾಲಯದ ಆದೇಶವನ್ನೂ ಉಲ್ಲಂಘಿಸಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸುತ್ತಿದ್ದಾರೆ. ಯುಗಾದಿ ಹಬ್ಬದ ಜಾತ್ರಾ ಮಹೋತ್ಸವದಲ್ಲಿ ವ್ಯಾಪಾರ ನಡೆಸಲು ಇಂಥವರಿಗೆ ಅವಕಾಶ ನೀಡಬಾರದು' ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಬಜರಂಗದಳ ತಾಲ್ಲೂಕು ಘಟಕದ ಮಾಜಿ ಅಧ್ಯಕ್ಷ ಅವಿನಾಶ್, ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳದ ತಾಲ್ಲೂಕು ಘಟಕದ ಅಧ್ಯಕ್ಷ ಮಹೇಶ್ ಸಾಲುಮರ, ಸಂಚಾಲಕ ವಿನಯ್‌ಶೆಟ್ಟಿ, ಸಹ ಸಂಚಾಲಕ ಸಂತೋಷ್, ಅಭಿಲಾಶ್ ಜನ್ನಾಪುರ, ಪ್ರಣೀತ್ ಇದ್ದರು.

ಮುಸ್ಲಿಮರು ಅಂಗಡಿ ಮಳಿಗೆ ತೆರೆಯದಿರಲು ಕ್ರಮಕ್ಕೆ ಮನವಿ

ಶೃಂಗೇರಿ: ಶೃಂಗೇರಿ ತಾಲ್ಲೂಕಿನ ಅಡ್ಡಗದ್ದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿತ್ರವಳ್ಳಿ ವನದುರ್ಗಾ ಪರಮೇಶ್ವರಿ ಜಾತ್ರೆಯಲ್ಲಿ ಅಂಗಡಿ ಮಳಿಗೆ ತೆರೆಯಲು ಅನ್ಯಧರ್ಮೀಯರಿಗೆ ಅವಕಾಶ ನೀಡದಂತೆ' ಅಡ್ಡಗದ್ದೆ ಗ್ರಾಮಸ್ಥರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರಮೋದ್ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.

ಜಾತ್ರೋತ್ಸವದಲ್ಲಿ ಹಿಂದೂಗಳು ಹರಿಕೆ, ಕಾಣಿಕೆ ನೀಡುತ್ತಾರೆ. ಅನ್ಯಧರ್ಮೀಯರು ಹೊರ ಊರಿನಿಂದ ಬಂದು ಜಾತ್ರೋತ್ಸವದಲ್ಲಿ ಅಂಗಡಿ ಮಳಿಗೆ ತೆರೆಯುತ್ತಾರೆ. ಅವರು ದೇಗುಲಕ್ಕೆ ಅಥವಾ ದೇವರಿಗೆ ಯಾವುದೇ ಕಾಣಿಕೆ, ಹರಿಕೆ ನೀಡುವುದಿಲ್ಲ. ಅವರಿಂದ ದೇಗುಲಕ್ಕೆ ಯಾವುದೇ ಅನುಕೂಲ ಇಲ್ಲ ಎಂದು ಗ್ರಾಮಸ್ಥರು ಹೇಳಿದರು.

ಹಿಜಾಬ್ ಕುರಿತು ಹೈಕೋರ್ಟ್ ನೀಡಿದ ಆದೇಶ ವಿರೋಧಿಸಿ ರಾಜ್ಯದಾದ್ಯಂತ ಅವರ ಅಂಗಡಿ ಮುಂಗಟ್ಟು ಬಂದ್ ಮಾಡಿ, ಸಂವಿಧಾನ ವಿರೋಧಿ ನಡೆ ಅನುಸರಿಸಿದ್ದಾರೆ ಎಂದು ಮನವಿಯಲ್ಲಿ ಆರೋಪಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮುಸ್ಲಿಂ ವರ್ತಕರಿಗೆ 'ಬಹಿಷ್ಕಾರ'

ಒಂದನೇ ಪುಟದಿಂದ

ಪ್ರಿಯಾಂಕ್ ಖರ್ಗೆ, ಜಮೀರ್ ಅಹಮ್ಮದ್ ಖಾನ್, ರಿಜ್ವಾನ್ ಅರ್ಷದ್, ಪಿ.ಟಿ. ಪರಮೇಶ್ವರ ನಾಯ್ಕ್ ಸೇರಿದಂತೆ ಕಾಂಗ್ರೆಸ್‌ನ ಹಲವರು ಖಾದರ್ ಬೆಂಬಲಕ್ಕೆ ನಿಂತರು. ಕೆಲವು ಕಾಲ ಸದನದಲ್ಲಿ ತೀವ್ರ ಗದ್ದಲ ನಡೆಯಿತು. ಗುಂಪು ಗುಂಪಾಗಿ ವಾಕ್ಸಮರಕ್ಕೆ ಇಳಿದಿದ್ದರಿಂದ ಯಾರು ಏನು ಹೇಳುತ್ತಿದ್ದಾರೆ ಎಂಬುದೇ ಗೊತ್ತಾಗದ ಸ್ಥಿತಿ ಉಂಟಾಯಿತು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಬಿಜೆಪಿ ಶಾಸಕರ ಬಳಿಯೇ ತೆರಳಿ ಸುಮ್ಮನಿರುವಂತೆ ಸೂಚಿಸಿ, ಎಲ್ಲರನ್ನೂ ಕುಳ್ಳಿರಿಸಿದರು. ಇತ್ತ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಮ್ಮ ಶಾಸಕರನ್ನು ಸಮಾಧಾನಪಡಿಸಿದರು.

ಬಳಿಕ ಮಾತನಾಡಿದ ಖಾದರ್, 'ಅತ್ತೂರು ಚರ್ಚ್, ಬಪ್ಪನಾಡು ದೇವಸ್ಥಾನ, ಸೈಯದ್ ಮದೀನಾ ದರ್ಗಾಗಳಲ್ಲಿ ಜಾತ್ರೆ, ಉತ್ಸವ, ಉರೂಸ್‌ಗಳಲ್ಲಿ ಎಲ್ಲ ಧರ್ಮಗಳ ಜನರೂ ಭಾಗವಹಿಸುತ್ತಾರೆ. ಧರ್ಮದ ಹೆಸರಿನಲ್ಲಿ ಈ ರೀತಿಯ ದ್ವೇಷ ಸರಿಯೆ' ಎಂದು ಪ್ರಶ್ನಿಸಿದರು.

ಮೂಲ್ಕಿಯಲ್ಲಿ ದೇವಸ್ಥಾನದ ಆಡಳಿತ ಮಂಡಳಿಯವರೇ ಬ್ಯಾನರ್ ತೆಗೆಸಿದ್ದಾರೆ. ಪೊಲೀಸರು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಈ ರೀತಿಯ ದ್ವೇಷ ಬಿತ್ತುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರಿಜ್ವಾನ್ ಅರ್ಷದ್ ಮಾತನಾಡಿ, 'ಒಂದು ಸಮುದಾಯದ ವ್ಯಾಪಾರಿಗಳು ವಹಿವಾಟು ನಡೆಸದಂತೆ ತಡೆಯುವುದು ಆ ಸಮುದಾಯಕ್ಕೆ ಮಾತ್ರವಲ್ಲ, ಇಡೀ ಸಮಾಜಕ್ಕೆ ಅಪಾಯಕಾರಿ. ಕಾಪು ಮಾರಿಗುಡಿ, ಬಪ್ಪನಾಡು ದೇವಸ್ಥಾನಗಳ ನಿರ್ಮಾಣದಲ್ಲಿ ಮುಸ್ಲಿಮರೂ ಪಾಲ್ಗೊಂಡಿದ್ದಾರೆ. ಇತಿಹಾಸ ಅಳಿಸಲು ಯಾರಿಗೂ ಸಾಧ್ಯವಿಲ್ಲ. ಸಾಮರಸ್ಯ ಹಾಳು ಮಾಡುವವರು ಸಮಾಜ ದ್ರೋಹಿಗಳು' ಎಂದರು.

ನಂತರ ಮಾತನಾಡಲು ರಘುಪತಿ ಭಟ್, ಜಮೀರ್ ಅಹಮ್ಮದ್ ಸೇರಿದಂತೆ ಹಲವರು ಅವಕಾಶ ಕೋರಿದರು. 'ಶೂನ್ಯ ವೇಳೆಯ ನೋಟಿಸ್ ನೀಡಿದವರಿಗಷ್ಟೆ ಮಾತನಾಡಲು ಅವಕಾಶ' ಎಂದ ಸಭಾಧ್ಯಕ್ಷರು, ಶಾಸಕರ ಬೇಡಿಕೆ ತಿರಸ್ಕರಿಸಿದರು.

ಕೇಂದ್ರದ ಪಾಲು: ಸಿಎಜಿ ವರದಿಯಲ್ಲಿ ಉಲ್ಲೇಖ

₹9,225 ಕೋಟಿ ಖೋತಾ

ಬೆಂಗಳೂರು: ಕೇಂದ್ರ ಸರ್ಕಾರವು ತೆರಿಗೆ–ಸುಂಕ ಹಾಗೂ ಸಹಾಯಾನುದಾನದ ರೂಪದಲ್ಲಿ ಕರ್ನಾಟಕಕ್ಕೆ ನ್ಯಾಯಯುತವಾಗಿ ನೀಡಬೇಕಾದ ಪಾಲು ವರ್ಷದಿಂದ ವರ್ಷಕ್ಕೆ ಇಳಿಯುತ್ತಿದ್ದು, ಒಂದೇ ವರ್ಷದಲ್ಲಿ ₹9,225 ಕೋಟಿ ಕಡಿಮೆಯಾಗಿದೆ.

'2019–20ರ ಸಾಲಿಗೆ ಹೋಲಿಸಿದರೆ 2020–21ರಲ್ಲಿ ತೆರಿಗೆ–ಸುಂಕದ ಪಾಲಿನಲ್ಲಿ ಶೇ 29.84ರಷ್ಟು ಹಾಗೂ ಸಹಾಯಾನುದಾನದಲ್ಲಿ ಶೇ 12.77 ಕಡಿಮೆಯಾಗಿದೆ' ಎಂದು ಭಾರತೀಯ ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ. '2021ರ ಮಾರ್ಚ್‌ಗೆ ಕೊನೆಗೊಂಡ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕ ಪರಿಶೋಧನಾ ವರದಿ'ಯಲ್ಲಿ ಈ ಅಂಶ ಪ್ರಸ್ತಾಪಿಸಲಾಗಿದೆ. ಈ ವರದಿಯನ್ನು ವಿಧಾನಮಂಡಲದಲ್ಲಿ ಬುಧವಾರ ಮಂಡಿಸಲಾಯಿತು.

ವರ್ಷವಾರು ಕೇಂದ್ರದ ಕೊಟ್ಟ ಪಾಲು(₹ಕೋಟಿಗಳಲ್ಲಿ)

ವರ್ಷ	2016-17	2017-18	2018-19	2019-20	2020-21
ಕೇಂದ್ರ ಜಿಎಸ್‌ಟಿ	-	447	8,858	8,773	6,236
ಐಜಿಎಸ್‌ಟಿ	-	3,204	707	-	-
ಕಾರ್ಪೊರೇಷನ್ ತೆರಿಗೆ	9,211	9,721	12,481	10,542	6,656
ಆದಾಯ ತೆರಿಗೆ	6,401	8,208	9,192	8,260	6,837
ಸೀಮಾಸುಂಕ	3,962	3,203	2,544	1,959	1,110
ಕೇಂದ್ರ ಅಬಕಾರಿ ಸುಂಕ	4,524	3,348	1,690	1,362	714
ಸೇವಾತೆರಿಗೆ	4,639	3,617	331	-	119
ಸಂಪತ್ತಿನ ಮೇಲಿನ ತೆರಿಗೆ	21	-0.29	4.58	0.46	-
ಆದಾಯ,ವೆಚ್ಚದ ಮೇಲಿನ ತೆರಿಗೆ	-	-	-	65.01	-
ಇತರೆ ತೆರಿಗೆ–ಸುಂಕ	0.8	-0.01	18.54	19.58	21
ಒಟ್ಟು	28,759	31,751	35,894	30,919	21,694

'2024ರ ವೇಳೆಗೆ ವಿಮಾನ ಪ್ರಯಾಣಿಕರ ಸಂಖ್ಯೆ ಹೆಚ್ಚಳ'

ನವದೆಹಲಿ (ಪಿಟಿಐ): ದೇಶದ ವಿಮಾನಯಾನ ಕ್ಷೇತ್ರ ವೇಗವಾಗಿ ಬೆಳೆಯುತ್ತಿದ್ದು, 2023–24ರ ವೇಳೆಗೆ ವಿಮಾನಗಳಲ್ಲಿ ಪ್ರಯಾಣಿಸುವವರ ಸಂಖ್ಯೆ 40 ಕೋಟಿಗೆ ಹೆಚ್ಚುವ ವಿಶ್ವಾಸ ಇದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಬುಧವಾರ ಹೇಳಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಶಾಲೆಗಳಲ್ಲಿ ಬಿಸಿಯೂಟ: ಸೋನಿಯಾ ಒತ್ತಾಯ

ನವದೆಹಲಿ: ಶಾಲೆಗಳಲ್ಲಿ ಸ್ಥಗಿತಗೊಳಿಸಲಾಗಿದ್ದ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಮತ್ತೆ ಆರಂಭಿಸಬೇಕು ಎಂದುಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಬುಧವಾರ ಒತ್ತಾಯಿಸಿದರು. ಲೋಕಸಭೆಯಲ್ಲಿ 'ಮೂರು ವರ್ಷ ಒಳಗಿನ ಮಕ್ಕಳು, ಗರ್ಭಿಣಿಯರು ಹಾಗೂ ಹಾಲುಣಿಸುವ ತಾಯಂದಿರಿಗೆ ಪೌಷ್ಟಿಕಾಂಶಯುಕ್ತ ಬಿಸಿ ಊಟ ಪೂರೈಸಲು ಕ್ರಮ ಕೈಗೊಳ್ಳಬೇಕು' ಎಂದರು.

ಕೋವಿಡ್: ಏಪ್ರಿಲ್ 1ರಿಂದ ಎಲ್ಲ ನಿರ್ಬಂಧಗಳ ತೆರವು

ಒಂದನೇ ಪುಟದಿಂದ...

ಈ ಸಂಬಂಧ ಗೃಹ ಸಚಿವಾಲಯ ಕಾರ್ಯದರ್ಶಿ ಅಜಯ್ ಭಲ್ಲಾ ಅವರು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದ್ದಾರೆ. ಆದರೆ, ಮಾಸ್ಕ್ ಧರಿಸುವುದು, ಕೈತೊಳೆದುಕೊಳ್ಳುವಂಥ ನಿಬಂಧನೆಗಳನ್ನು ಈ ಮೊದಲಿನಂತೆಯೇ ಮುಂದುವರಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಸಲಹೆ ನೀಡಿದೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

'ಕೋವಿಡ್–19 ಪ್ರಸರಣ ತಡೆಗಾಗಿ ಎರಡು ವರ್ಷಗಳ ಹಿಂದೆ ಹೊರಡಿಸಿದ್ದ ಆದೇಶದ ಅವಧಿ ಮಾರ್ಚ್ 31ಕ್ಕೆ ಅಂತ್ಯವಾಗಲಿದ್ದು, ನಂತರ ಈ ವಿಷಯವಾಗಿ ಸಚಿವಾಲಯ ಯಾವುದೇ ಆದೇಶ ಹೊರಡಿಸುವುದಿಲ್ಲ' ಎಂದಿದ್ದಾರೆ. 'ಕೊರೊನಾ ಸೋಂಕಿನ ತೀವ್ರತೆ ಹಾಗೂ ಅದರಿಂದಾಗುವ ತೊಂದರೆಗಳನ್ನು ನಿರ್ಲಕ್ಷಿಸದೇ, ಬಹಳ ಎಚ್ಚರದಿಂದಿರುವುದು ಅಗತ್ಯ. ಒಂದು ವೇಳೆ ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳ ಕಂಡುಬಂದಲ್ಲಿ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಸ್ಥಳೀಯವಾಗಿ ಅನ್ವಯವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಬಹುದು' ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

'ಕೋವಿಡ್ ಪಿಡುಗಿನ ನಿರ್ವಹಣೆಗೆ ಸಂಬಂಧಿಸಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಮ್ಮ ಸಾಮರ್ಥ್ಯ ವೃದ್ಧಿಸಿಕೊಂಡಿದ್ದೇವೆ. ರೋಗ ಪತ್ತೆ, ನಿಗಾ ವಹಿಸುವುದು, ಸಂಪರ್ಕಿತರ ಪತ್ತೆ, ಚಿಕಿತ್ಸೆ, ಲಸಿಕೆ ನೀಡುವುದು ಹಾಗೂ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಹೆಚ್ಚಳ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಸಹ ಗಮನಾರ್ಹ ಸಾಧನೆ ಕಾಣಬಹುದು. ಈ ಅಂಶಗಳು ಸಹ ಇಂಥ ನಿರ್ಧಾರ ಕೈಗೊಳ್ಳಲು ಕಾರಣವಾಗಿವೆ' ಎಂದಿದ್ದಾರೆ.

ದೇಶದಲ್ಲಿ ಕೊರೊನಾ ಸೋಂಕು ಪ್ರಸರಣವನ್ನು ತಡೆಯುವ ಸಂಬಂಧ ಕೇಂದ್ರ ಸರ್ಕಾರ ವಿಪತ್ತು ನಿರ್ವಹಣಾ ಕಾಯ್ದೆ–2005 ರಡಿ, 2020ರ ಮಾರ್ಚ್ 24ರಂದು ನಿರ್ಬಂಧಗಳನ್ನು ಜಾರಿಗೊಳಿಸಿ ಆದೇಶಿಸಿತ್ತು. ನಂತರ, ಹಲವಾರು ಬಾರಿ ಈ ನಿರ್ಬಂಧಗಳನ್ನು ಮಾರ್ಪಾಡು ಮಾಡಲಾಗಿತ್ತು.

ಏಪ್ರಿಲ್ 1ರಿಂದ ಅನ್ವಯವಾಗುವಂತೆ ಕೋವಿಡ್–19 ನಿರ್ಬಂಧಗಳನ್ನು ತೆರವುಗೊಳಿಸುವುದಾಗಿ ಗೃಹ ಸಚಿವಾಲಯ ಘೋಷಿಸಿದ್ದರೂ, ಕೊರೊನಾ ಸೋಂಕು ಪ್ರಸರಣದ ಮೇಲೆ ಜಿಲ್ಲಾ ಮಟ್ಟದಲ್ಲಿ ಕಟ್ಟುನಿಟ್ಟಿನ ನಿಗಾ ಇರಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯ ಸೂಚಿಸಿದೆ.

ತಂದೆ ಕನಸುಗಳೇ ಸಾಧನೆಗೆ ಪ್ರೇರಣೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಶಿಕ್ಷಣದ ವಿಷಯದಲ್ಲಿ ನನ್ನ ಮೇಲೆ ತಂದೆಗೆ ಅಪಾರ ಭರವಸೆ. ನನ್ನನ್ನೇ ಆಸ್ತಿ ಮಾಡಿಕೊಂಡು ಕನಸು ಕಟ್ಟಿಕೊಂಡಿದ್ದಾರೆ. ಯಾವುದಕ್ಕೂ ರಾಜಿ ಮಾಡಿಕೊಳ್ಳದೆ ಓದಿಸಿದ್ದಾರೆ. ಅವರ ಕನಸುಗಳೇ ನನ್ನ ಈಗಿನ ಸಾಧನೆಗೆ ಪ್ರೇರಣೆ'


ಡಿ.ಗಣೇಶ್ ನಾಡಿಗ

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಎಂ.ಟೆಕ್‌ನಲ್ಲಿ (ನಗರ ಹಾಗೂ ಪ್ರಾದೇಶಿಕ ಯೋಜನೆ) 16 ಚಿನ್ನದ ಪದಕಗಳಿಗೆ ಭಾಜನರಾದ ಡಿ.ಗಣೇಶ್ ನಾಡಿಗ ಅವರ ಕೃತಜ್ಞತೆಯ ನುಡಿಗಳಿವು.

ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ದವನಹಳ್ಳಿಯ ಅವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಆರ್.ವಿ.ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ (ಸಿವಿಲ್) ಪೂರೈಸಿದ್ದಾರೆ.'ಪರೀಕ್ಷೆಗೆ ಸಜ್ಜಾಗುವಾಗ ಅಮ್ಮ ತನುಜಾ ಕೈತುತ್ತು ನೀಡುತ್ತಿದ್ದರು. ನನಗೆ ಒಲಿದಿರುವ ಪದಕಗಳನ್ನು ತಂದೆ, ತಾಯಿ ಹಾಗೂ ಶಿಕ್ಷಕರಿಗೆ ಅರ್ಪಿಸುತ್ತೇನೆ' ಎಂದರು.

ಬೆಂಗಳೂರಿನ ಕಂಪನಿಯೊಂದರಲ್ಲಿ ಸಲಹೆಗಾರರಾಗಿ ಕೆಲಸ ಮಾಡುತ್ತಿರುವ ಅವರು ನಗರ ಯೋಜನೆ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುವ ಗುರಿ ಹೊಂದಿದ್ದಾರೆ. 'ಸಾರಿಗೆ ಮತ್ತು ಸಂಚಾರ ಯೋಜನೆಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ನಿರ್ಧಾರ ಕೈಗೊಳ್ಳುವುದು ಟ್ರಾಫಿಕ್ ಪೊಲೀಸರ ಕೆಲಸವಾಗಬಾರದು. ಕಾನೂನು ಸುವ್ಯವಸ್ಥೆ ಕಾಪಾಡುವ ಅವರಿಗೆ ಟ್ರಾಫಿಕ್ ಸಮಸ್ಯೆಯ ಒತ್ತಡ ಹೇರಬಾರದು. ಅದಕ್ಕೆ ನಗರ ಯೋಜನೆ ಎಂಜಿನಿಯರ್‌ಗಳು ಪರಿಹಾರ ದೊರಕಿಸಿಕೊಡಬೇಕು' ಎಂದರು.

ತಂದೆ ಹಾದಿಯಲ್ಲಿ ಹೆಜ್ಜೆ...

ತಂದೆ ಧನಂಜಯ ರೆಡ್ಡಿ ಹಾದಿಯಲ್ಲಿ ಗಣೇಶ್ ಹೆಜ್ಜೆ ಇಡುತ್ತಿದ್ದಾರೆ. ತಂದೆ ಮೈಸೂರಿನ ಎನ್‌ಐಇ ಕಾಲೇಜಿನಲ್ಲಿ ಬಿ.ಇ (ಸಿವಿಲ್) ಪದವಿಯಲ್ಲಿ ರ್‍ಯಾಂಕ್ ಪಡೆದಿದ್ದರು. ಮೈಸೂರು ವಿ.ವಿಯಲ್ಲಿ ಎಂ.ಟೆಕ್ (ನಗರ ಹಾಗೂ ಪ್ರಾದೇಶಿಕ ಯೋಜನೆ) ಪೂರೈಸಿದ್ದರು. ಗಣೇಶ್ ಈಗ ಎಂ.ಟೆಕ್‌ನಲ್ಲಿ ರ್‍ಯಾಂಕ್ ಪಡೆದಿದ್ದಾರೆ.

'ಭ್ರಷ್ಟಾಚಾರ: ಚರ್ಚಿಸಲು ಭಯವೇ?'

ಒಂದನೇ ಪುಟದಿಂದ...

'ಭ್ರಷ್ಟಾಚಾರದ ಕುರಿತು ಪ್ರಧಾನಿಯವರಿಗೆ ನೇರವಾಗಿ ಪತ್ರ ಬರೆದು ದೂರು ನೀಡಿರುವುದು ಇದೇ ಮೊದಲು. ಗುತ್ತಿಗೆದಾರರು ಶೇ 40 ರಷ್ಟು ಕಮಿಷನ್ ಕೊಟ್ಟು ಉಳಿದ ಹಣದಲ್ಲಿ ಯಾವ ಗುಣಮಟ್ಟದ ಕಾಮಗಾರಿಗಳನ್ನು ಸಾಧ್ಯ? ಈ ಎಲ್ಲ ವಿಚಾರವನ್ನು ಪ್ರಸ್ತಾಪಿಸಬೇಕಾಗಿದೆ. ಇದರ ಬಗ್ಗೆ ಪ್ರಾಥಮಿಕವಾಗಿ ವಿಷಯ ಮಂಡನೆಗೆ ಅವಕಾಶ ಕೊಡಬೇಕು. ನನ್ನ ಮಾತುಗಳು ಸಂತೃಪ್ತಿಯಾದರೆ ಪೂರ್ಣ ಚರ್ಚೆಗೆ ಅವಕಾಶ ನೀಡಿ' ಎಂದು ಸಿದ್ದರಾಮಯ್ಯ ಮನವಿ ಮಾಡಿದರು.

ಆಗ ಮಧ್ಯ ಪ್ರವೇಶಿಸಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ನಿಲುವಳಿ ಸೂಚನೆಯ ವ್ಯಾಪ್ತಿಗೆ ಇದು ಬರುವುದಿಲ್ಲ. ನೀವು ಬೇರೆ ರೂಪದಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ನೀಡುತ್ತೇನೆ' ಎಂದರು.

'ನಮ್ಮ ದೇವ್ರು ಯಾಕೆ ಹೀಗೆ ಆಡ್ತಿದೆ? ಸಿದ್ದರಾಮೇಶ್ವರ ನಮ್ಮ ಮನೆ ದೇವರು' ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿ ಮಾತುಗಳಿಂದ ಕಟ್ಟಿಹಾಕಲು ಯತ್ನಿಸಿದರು. ಅದೇ ಧಾಟಿಯಲ್ಲಿ ಉತ್ತರಿಸಿದ ಸಿದ್ದರಾಮಯ್ಯ, 'ನನ್ನ ತಾತನ ಹೆಸರು ಸಿದ್ದರಾಮ, ನನ್ನ ಹೆಸರು ಸಿದ್ದರಾಮಯ್ಯ ಮತ್ತು ನಮ್ಮ ಮನೆ ದೇವರ ಹೆಸರು ಸಿದ್ದರಾಮೇಶ್ವರ. ನಮ್ಮ ಊರಿನ ಹೆಸರೂ ಸಿದ್ದರಾಮನಹುಂಡಿ' ಎಂದರು. 'ಈ ವಿಷಯ ಇತ್ತೀಚೆಗೆ ಆಗಿದ್ದಲ್ಲ, ಅತ್ಯಂತ ಜರೂರಿನ ವಿಷಯವೂ ಅಲ್ಲ. ಆದ್ದರಿಂದ ನಿಲುವಳಿ ಸೂಚನೆಯಡಿ ಪ್ರಸ್ತಾಪಿಸಲು ಸಾಧ್ಯವಿಲ್ಲ' ಎಂದು ಮಾಧುಸ್ವಾಮಿ ಹೇಳಿದರು.

ಇದರಿಂದ ಸಿಟ್ಟಿಗೆದ್ದ ಸಿದ್ದರಾಮಯ್ಯ, 'ಹಾಗಿದ್ರೆ, ನಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲವೆ? ರಾಜ್ಯದ ಜನರ ತೆರಿಗೆ ಹಣ ಲೂಟಿ ಆಗುವುದನ್ನು ನೋಡಿಕೊಂಡು ಸುಮ್ಮನಿರಬೇಕೆ' ಎಂದರು.

ಈ ಮಾತುಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನಾಟಿತು, 'ನೀವು ಈ ರೀತಿ ಮಾತನಾಡುವುದರಲ್ಲಿ ಅರ್ಥ ಇಲ್ಲ. ಯಾರೋ ಪತ್ರ ಬರೆದ ಆಧಾರದಲ್ಲಿ ಇಲ್ಲಿ ಚರ್ಚೆ ಮಾಡಲು ಆಗುತ್ತದೆಯೇ? ಹಾಗೆಂದು ಭ್ರಷ್ಟರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ. ಪತ್ರ ಬರೆದಿದ್ದು, ಅದರ ಹಿಂದಿನ ಚಿತಾವಣೆ ಯಾರದ್ದು ಎಂಬುದರ ತನಿಖೆ ಆಗುತ್ತಿದೆ. ಎಲ್ಲ ಕಾಲದಲ್ಲಿ ನಡೆದ ಭ್ರಷ್ಟಾಚಾರಗಳ ಬಗ್ಗೆಯೂ ಮಾತನಾಡೋಣ' ಎಂದು ಬೊಮ್ಮಾಯಿ ಏರಿದ ಧ್ವನಿಯಲ್ಲಿ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ಬರೆದ ಪತ್ರ 'ಪ್ರಜಾವಾಣಿ'ಯಲ್ಲಿ ವಿವರವಾಗಿ ವರದಿಯಾಗಿತ್ತು. ಕೆಂಪಣ್ಣನವರು ಪ್ರಧಾನಿಗೆ ಪತ್ರ ಬರೆದಿದ್ದು 'ಪ್ರಜಾವಾಣಿ'ಯಲ್ಲಿ ವರದಿ ಆದ ಮೇಲೆ ಈ ಬಗ್ಗೆ ನನಗೆ ಗೊತ್ತಾಗಿದ್ದು. ಇವತ್ತಿನವರೆಗೆ ಯಾವ ಗುತ್ತಿದಾರರ ಸಂಘದವರೂ ಈ ರೀತಿ ಪ್ರಧಾನಿಗೆ ಪತ್ರ ಬರೆದಿರಲಿಲ್ಲ' ಎಂದರು.

'ಆ ಪತ್ರದಲ್ಲಿರುವ ಆರೋಪಗಳಿಗೆ ಆಧಾರ ಏನಿದೆ? ಸಾಕ್ಷ್ಯಗಳು ಇದೆಯಾ? ನಾವು ಪ್ರಾಮಾಣಿಕರಿದ್ದೇವೆ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಪತ್ರ ಬರೆದು ನಾಲ್ಕು ತಿಂಗಳು ಆಯಿತು, ಈಗ ಪ್ರಶ್ನಿಸುವ ಔಚಿತ್ಯ ಏನಿದೆ' ಎಂದು ಬೊಮ್ಮಾಯಿ ಪ್ರಶ್ನಿಸಿದರು.

'ಶೇ 40 ಲಂಚ ಮಾತ್ರ ಅಲ್ಲ; ಪೊಲೀಸ್, ಸಾರಿಗೆ ಇಲಾಖೆ, ಆರೋಗ್ಯ ಇಲಾಖೆಗಳಲ್ಲಿ ನಡೆದಿರುವ ಭ್ರಷ್ಟಾಚಾರದ ಬ್ರಹ್ಮಾಂಡವೂ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದೆ. ರಾಜ್ಯದ ಹಣ, ಜನರು ಬೆವರು ಹರಿಸಿ ದುಡಿದ ಹಣ ಲೂಟಿ ಮಾಡುತ್ತಿರುವುದನ್ನು ನೋಡಿಕೊಂಡು ಬಾಯಿ ಮುಚ್ಚಿಕೊಂಡು ಇರಬೇಕೆ' ಎಂದು ಸಿದ್ದರಾಮಯ್ಯ ಖಾರವಾಗಿ ಪ್ರಶ್ನಿಸಿದರು.

ನವೀಕರಿಸಬಹುದಾದ ಇಂಧನ ಮೂಲಗಳು ಕ್ಷೇತ್ರದಲ್ಲಿ ಸಂಶೋಧನೆ

ಸಿ.ಎನ್.ಆರ್ ರಾವ್‌ಗೆ 'ಇನ್ಯೆ ಎನರ್ಜಿ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜವಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ ಗೌರವಾಧ್ಯಕ್ಷರಾಗಿರುವ ಖ್ಯಾತ ವಿಜ್ಞಾನಿ ಪ್ರೊ.ಸಿ.ಎನ್.ಆರ್ ರಾವ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ಇನ್ಯೆ ಎನರ್ಜಿ 2020' ಪ್ರಶಸ್ತಿಯನ್ನು ಬುಧವಾರ ಪ್ರದಾನ ಮಾಡಿದರು.

ನವೀಕರಿಸಬಹುದಾದ ಇಂಧನ ಮೂಲಗಳು ಮತ್ತು ಇಂಧನ ಶೇಖರಣೆಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಮಹತ್ವದ ಸಂಶೋಧನೆಗಾಗಿ ರಾವ್ ಅವರಿಗೆ ಈ ಪ್ರತಿಷ್ಠಿತ ದೊರಕಿದೆ. ಇಂಧನ ಕ್ಷೇತ್ರದ ಸಂಶೋಧನೆಗೆ ನೀಡುವ ಅತ್ಯುನ್ನತ ಪ್ರಶಸ್ತಿ ಇದಾಗಿದೆ. ಇಂಧನ ಸಂಶೋಧನೆಯ ನೊಬೆಲ್ ಪ್ರಶಸ್ತಿ ಎಂದೇ ಪರಿಗಣಿಸಲಾಗುತ್ತದೆ. ಈ ಪ್ರಶಸ್ತಿ ಪಡೆದ ಏಷ್ಯಾದ ಮತ್ತು ಭಾರತದ ಮೊದಲ ವಿಜ್ಞಾನಿ ಎಂಬ ಹಿರಿಮೆ ರಾವ್ ಅವರದು.

ಪ್ರೊ.ರಾವ್ ಅವರು ಜಲಜನಕ ಆಧಾರಿತ ಇಂಧನದ ಮೇಲೆ ಅಧ್ಯಯನ ನಡೆಸಿದ್ದಾರೆ. ಈ ಇಂಧನ ಮೂಲ ಮಾತ್ರ ಇಡೀ ಮನುಕುಲಕ್ಕೆ ಉಪಯೋಗವಾಗಬಲ್ಲ ಏಕೈಕ ಮೂಲವಾಗಿ ಹೊರಹೊಮ್ಮಿದೆ. ಜಲಜನಕದ ಶೇಖರಣೆ, ದ್ಯುತಿರಸಾಯನ ವಿಜ್ಞಾನ ಮತ್ತು ವಿದ್ಯುದ್ರಸಾಯನ ಕ್ರಿಯೆಯಿಂದಲೂ ಜಲಜನಕ ಉತ್ಪಾದನೆ, ಸೌರಶಕ್ತಿಯಿಂದ ಜಲಜನಕ ಉತ್ಪಾದನೆ ಇವರ ಪ್ರಮುಖ ಸಾಧನೆಗಳಾಗಿವೆ. ಲೋಹದ ಆಕ್ಸೈಡ್, ಕಾರ್ಬನ್ ನ್ಯಾನೊ ಟ್ಯೂಬ್‌ಗಳು, ಗ್ರಾಫೀನ್, ಬೊರಾನ್–ನೈಟ್ರೋಜನ್–ಕಾರ್ಬನ್ ಹೈಬ್ರಿಡ್ ವಸ್ತುಗಳು, ಮಾಲಿಬ್ದಿನಮ್ ಸಲ್ಫೈಡ್ ಇವುಗಳನ್ನು ಇಂಧನ ಕ್ಷೇತ್ರದಲ್ಲಿ ಅನ್ವಯಗೊಳಿಸಿದ್ದು ಮಾತ್ರವಲ್ಲದೆ, ಹಸಿರು ಜಲಜನಕ ಉತ್ಪಾದನೆಗೆ ಇವರು ಕೊಡುಗೆ ನೀಡಿದ್ದಾರೆ. ಪ್ರಶಸ್ತಿಯ ಆಯ್ಕೆಗೆ ಈ ಅಂಶಗಳನ್ನು ಪ್ರಧಾನವಾಗಿ ಪರಿಗಣಿಸಲಾಗಿತ್ತು.

'ಪ್ರೊ.ಸಿಎನ್‌ಆರ್ ರಾವ್ ಅವರು ಜ್ಞಾನ ಮತ್ತು ಶಕ್ತಿಯ ಕಣಜ. ಅವರದ್ದು ನಿಸ್ವಾರ್ಥ ಸೇವೆ. ಮನುಷ್ಯನ ಭವಿಷ್ಯದ ಜನಾಂಗಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. ವಿಜ್ಞಾನ ಮತ್ತು ಅಧ್ಯಾತ್ಮದ ಪರಿಪೂರ್ಣ ಸಂಯೋಜನೆಯಂತಿರುವ ಅವರು ವಯಸ್ಸನ್ನು ಮಿತಿಯಾಗಿಸಿಕೊಳ್ಳದೇ ಕಠಿಣ ಸವಾಲುಗಳನ್ನು ಎದುರಿಸಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಯುವ ವಿಜ್ಞಾನಿಗಳು ಮಾನವಕುಲಕ್ಕೆ ಒಳಿತಾಗುವಂತಹ ಸಂಶೋಧನೆಗಳನ್ನು ಕೈಗೊಳ್ಳಬೇಕು' ಎಂದು ಮುಖ್ಯಮಂತ್ರಿ ಹೇಳಿದರು.

ಇಟಲಿಯ ಮಿಲಾನ್ ನಗರದ 'ಇನ್ಯೆ ಎನ್ರಿಕೊ ಫೌಂಡೇಷನ್' ನೀಡುವ ಈ ಪ್ರಶಸ್ತಿಯು ₹1.87 ಕೋಟಿ ನಗದು ಬಹುಮಾನವನ್ನು ಒಳಗೊಂಡಿದೆ. 2021ರ ಅಕ್ಟೋಬರ್ 14ರಂದು ಇಟಲಿಯ ಅಧ್ಯಕ್ಷರ ಅರಮನೆಯಲ್ಲಿ ಏರ್ಪಡಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರೊ.ರಾವ್ ಅವರು ಪ್ರಶಸ್ತಿ ಸ್ವೀಕರಿಸಬೇಕಿತ್ತು. ಆದರೆ, ಕೋವಿಡ್ ಕಾರಣದಿಂದಾಗಿ ಇದು ಸಾಧ್ಯವಾಗಿರಲಿಲ್ಲ. ಹೀಗಾಗಿ, ಪ್ರತಿಷ್ಠಾನದವರು ಪದಕ ಪುರಸ್ಕಾರವನ್ನು ಬೆಂಗಳೂರಿಗೆ ಕಳಿಸಿಕೊಟ್ಟಿದ್ದರು. ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದಲ್ಲಿ ಸಮಾರಂಭವನ್ನು ಏರ್ಪಡಿಸಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಡಾ.ಇಂದುಮತಿ ರಾವ್, ಜೆಎನ್‌ಸಿಎಎಸ್‌ಆರ್ ಮುಖ್ಯಸ್ಥ ಪ್ರೊ.ಜಿ.ಯು.ಕುಲಕರ್ಣಿ ಹಾಗೂ ನೂರಾರು ವಿಜ್ಞಾನಿಗಳು ಭಾಗವಹಿಸಿದರು.


ಪ್ರೊ.ಸಿ.ಎನ್.ಆರ್.ರಾವ್ ಅವರಿಗೆ 'ಇನ್ಯೆ ಎನರ್ಜಿ 2020' ಪ್ರಶಸ್ತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬುಧವಾರ ಪ್ರದಾನ ಮಾಡಿದರು. ಡಾ.ಸಿ.ಎನ್.ಅಶ್ವತ್ಥನಾರಾಯಣ ಇದ್ದಾರೆ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ



ಸಹಶಿಕ್ಷಕರ ನೇಮಕಾತಿ ಮಾರ್ಗದರ್ಶಿ

ಪ್ರಾಥಮಿಕ ಶಾಲಾ ಸಹ ಶಿಕ್ಷಕರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಯುತ್ತಿದೆ. ಈ ಪರೀಕ್ಷೆಯಲ್ಲಿ ಎಷ್ಟು ಪ್ರಶ್ನೆ ಪತ್ರಿಕೆಗಳಿವೆ ? ಎಷ್ಟು ಅವಧಿಯ ಪರೀಕ್ಷೆ ? ಯಾವ್ಯಾವ ವಿಷಯಗಳ ಮೇಲೆ ಪ್ರಶ್ನೆಗಳಿರುತ್ತವೆ ಎಂಬ ಪ್ರಾಥಮಿಕ ಮಾಹಿತಿಯನ್ನು ಇಲ್ಲಿ ಕೊಡಲಾಗಿದೆ

ಕೆ.ಎಚ್. ಮಂಜುನಾಥ್

ಪ್ರಾಥಮಿಕ ಶಾಲಾ ಸಹ ಶಿಕ್ಷಕರ ನೇಮಕಾತಿಗಾಗಿ ರಾಜ್ಯ ಸರ್ಕಾರ ಇತ್ತೀಚೆಗೆ ಅಧಿಸೂಚನೆ ಹೊರಡಿಸಿದೆ. ಒಟ್ಟು 15 ಸಾವಿರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ತಿಳಿಸಿದೆ. ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಈ ನೇಮಕಾತಿ ನಡೆಯಲಿದೆ. ಈ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಏಪ್ರಿಲ್ 22 ಕೊನೆ ದಿನ. ಮೇ 21 ಮತ್ತು 22ರಂದು ಪರೀಕ್ಷೆ ನಡೆಯಲಿದೆ. ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸುವುದು ಕಡ್ಡಾಯ.

ಈ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಮೂರು ಪತ್ರಿಕೆಗಳಿವೆ. ಅವುಗಳು ಹೀಗಿವೆ;

ಪ್ರಾಥಮಿಕ ಶಾಲಾ ಸಹಶಿಕ್ಷಕರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆ

ಪತ್ರಿಕೆ-1 (ಸಾಮಾನ್ಯ ಪತ್ರಿಕೆ)

ಈ ಪತ್ರಿಕೆಯಲ್ಲಿ 150 ಪ್ರಶ್ನೆಗಳಿರುತ್ತವೆ. ಪ್ರತಿ ಪ್ರಶ್ನೆಗೆ 1 ಅಂಕ. ಈ ಪತ್ರಿಕೆಯಲ್ಲಿ ಏಳು ವಿಷಯಗಳಿವೆ. ಅದರಲ್ಲಿ, ಕನ್ನಡ ಭಾಷೆ ಕುರಿತು 25, ಇಂಗ್ಲಿಷ್ ಕುರಿತು 25 ಹಾಗೂ ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ 25 ಪ್ರಶ್ನೆಗಳಿರು ತ್ತವೆ. ಮಗುವಿನ ಬೆಳವಣಿಗೆ ಮತ್ತು ಬೋಧನಾ ಸಾಮರ್ಥ್ಯದ 50 ಪ್ರಶ್ನೆಗಳು, ಆರೋಗ್ಯ ಮತ್ತು ಮೌಲಿಕಶಿಕ್ಷಣಕ್ಕೆ ಸಂಬಂಧಿಸಿದ 15 ಪ್ರಶ್ನೆಗಳು ಹಾಗೂ ಕಂಪ್ಯೂಟರ್ ಸಾಕ್ಷರತೆಗೆ ಸಂಬಂಧಿಸಿದ 10 ಪ್ರಶ್ನೆಗಳು ಇರುತ್ತವೆ.

ಸಾಮಾನ್ಯ ಕನ್ನಡ: ಈ ಪತ್ರಿಕೆಯಲ್ಲಿ ಕನ್ನಡ ವರ್ಣಮಾಲೆ, ದ್ವಿರುಕ್ತಿ, ಜೋಡು ನುಡಿ, ನುಡಿಗಟ್ಟು, ಅನ್ಯಭಾಷೆ ಪದಗಳು, ಗ್ರಾಂಥಿಕ ರೂಪ, ವಾಕ್ಯದ ಪ್ರಕಾರಗಳು, ಚಿಹ್ನೆಗಳು, ಸಮಾನಾರ್ಥಕ ಪದಗಳು, ವಿರುದ್ಧಾರ್ಥಕ ಪದಗಳು ಮತ್ತು ವ್ಯಾಕರಣಕ್ಕೆ ಸಂಬಂಧಿಸಿದ ಪ್ರಶ್ನೆಗಳಿರುತ್ತವೆ.

ಸಾಮಾನ್ಯ ಇಂಗ್ಲಿಷ್: ಈ ಪತ್ರಿಕೆಯಲ್ಲಿ Passage, Question Tag, pronunciation, Article, Dectionary Order, Prefics, ಬಿಟ್ಟ ಸ್ಥಳ ಭರ್ತಿ ಮಾಡುವುದು ಸೇರಿದಂತೆ ವಿವಿಧ ಪ್ರಶ್ನೆಗಳಿರುತ್ತವೆ.

ಸಾಮಾನ್ಯ ಜ್ಞಾನ: ಇದರಲ್ಲಿ ಪ್ರಚಲಿತ ವಿದ್ಯಮಾನಗಳು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯಮಟ್ಟದ ವಿದ್ಯಮಾನಗಳ/ ಘಟನಾವಳಿಗಳ ಕುರಿತ ಪ್ರಶ್ನೆಗಳಿರುತ್ತವೆ.

ಮಗುವಿನ ಬೆಳವಣಿಗೆ ಹಾಗೂ ಬೋಧನಾ ಶಾಸ್ತ್ರ: ಈ ವಿಭಾಗದಲ್ಲಿ ಕಲಿಕಾ ಸಿದ್ಧಾಂತಗಳು, ಪಿಯಾಜೆಯವರ ಜ್ಞಾನಾತ್ಮಕ ವಿಕಾಸ ಸಿದ್ಧಾಂತ, ಮಕ್ಕಳ ಶಿಕ್ಷಣ, ವ್ಯಕ್ತಿತ್ವ ಪರೀಕ್ಷೆಗಳು, ಸಮಗ್ರ ಮೌಲ್ಯಮಾಪನ, ಬಾಲ್ಯಾವಸ್ಥೆ, ವ್ಯಕ್ತಿತ್ವ, ದ್ವಂದ್ವಗಳು/ ಘರ್ಷಣೆಗಳು... ಇಂಥ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿರುತ್ತವೆ.

ಆರೋಗ್ಯ ಮತ್ತು ಮೌಲ್ಯ ಶಿಕ್ಷಣ: ಈ ವಿಭಾಗದಲ್ಲಿ ಮಾನವೀಯ ಮೌಲ್ಯಗಳು, ದೇಹದ ಆರೋಗ್ಯ, ಪ್ರಮುಖ ರೋಗಗಳು, ರೋಗದ ಲಕ್ಷಣಗಳು, ಆರೋಗ್ಯ ಮತ್ತು ಮೌಲಿಕ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲಾಗುತ್ತದೆ.

ಕಂಪ್ಯೂಟರ್ ಸಾಕ್ಷರತೆ: ಇದರಲ್ಲಿ ಕಂಪ್ಯೂಟರ್ ಬಿಡಿಭಾಗಗಳಾದ ಸಿಪಿಯು, ಪ್ರಮುಖ ಇನ್‌ಪುಟ್ ಮತ್ತು ಔಟ್ ಪುಟ್ ಸಾಧನಗಳು, ನುಡಿ ತಂತ್ರಾಂಶ, ಎಂ ಎಸ್ ವರ್ಡ್, ಶಾರ್ಟ್ ಕಟ್ ಕೀ ಕುರಿತ ಪ್ರಶ್ನೆಗಳಿರುತ್ತವೆ.

ಈ ಕೆಳಗಿನ ಅಂಕಗಳನ್ನು ಪರಿಗಣಿಸಿ ಮೆರಿಟ್ ನಿರ್ಧರಿಸಲಾಗುತ್ತದೆ	
ಟಿ.ಇ.ಟಿ ಅಂಕಗಳು	ಶೇ 20
ಪದವಿಯ ಅಂಕಗಳು	ಶೇ 20
ಬಿ.ಇಡಿ/ ಡಿ.ಇಡಿ ಅಂಕಗಳು	ಶೇ 10
ಈ ಸ್ಪರ್ಧಾತ್ಮಕ ಪರೀಕ್ಷೆ ಅಂಕಗಳು	ಶೇ 50

ಯಾವ ವಿಷಯದ ಶಿಕ್ಷಕರು? ಎಷ್ಟು ಹುದ್ದೆಗಳು?

ವಿಷಯ ಶಿಕ್ಷಕರು	ಹುದ್ದೆಗಳು
ಆಂಗ್ಲ ಭಾಷೆ	1,500
ಗಣಿತ ಮತ್ತು ವಿಜ್ಞಾನ	6,500
ಜೀವ ವಿಜ್ಞಾನ	2,000
ಸಮಾಜ ಶಾಸ್ತ್ರ	5,000
ಒಟ್ಟು 15 ಸಾವಿರ ಶಿಕ್ಷಕರು	

ಪತ್ರಿಕೆ-2

ಈ ಪತ್ರಿಕೆಯಲ್ಲಿ ಸಾಮರ್ಥ್ಯ ಅಥವಾ ಸಾಮಾನ್ಯ ಜ್ಞಾನಕ್ಕೆ (ಜನರಲ್ ನಾಲೆಜ್) ಸಂಬಂಧಿಸಿದ ಪ್ರಶ್ನೆಗಳಿರುತ್ತವೆ. ಇದು 150 ಅಂಕಗಳ ಪ್ರಶ್ನೆ ಪತ್ರಿಕೆ. ಸಮಾಜ ವಿಜ್ಞಾನ, ಗಣಿತ, ಜೀವ ವಿಜ್ಞಾನ ವಿಷಯಗಳ ಪ್ರಶ್ನೆಗಳಿರುತ್ತವೆ. ಆಂಗ್ಲ ಭಾಷೆಯ ಶಿಕ್ಷಕರಿಗೆ (ಅಭ್ಯರ್ಥಿಗಳಿಗೆ) ಇದು ಮಹತ್ವದ್ದು. ಇದರಲ್ಲಿ ಶೇ 45ರಷ್ಟು ಅಂಕಗಳನ್ನು ಗಳಿಸಲೇಬೇಕಾಗುತ್ತದೆ. ಈ ಅಂಕಗಳನ್ನು ಮೆರಿಟ್‌ಗೆ ಪರಿಗಣಿಸಲಾಗುವುದು.

ಎರಡನೇ ಪತ್ರಿಕೆಯನ್ನು ಯಾವ ಬೋಧನಾ ಮಾಧ್ಯಮದ ಹುದ್ದೆಗೆ ಆಯ್ಕೆ ಮಾಡಿಕೊಂಡಿರುತ್ತಾರೋ ಅದೇ ಭಾಷೆಯಲ್ಲೇ ಪರೀಕ್ಷೆ ಬರೆಯಬೇಕು ಅಥವಾ ಇಂಗಿಷ್ ಭಾಷೆಯಲ್ಲಿ ಉತ್ತರಿಸಬೇಕು. ಹೀಗಾಗಿ ಪತ್ರಿಕೆ 2 ಅನ್ನು ಯಾವ ಮಾಧ್ಯಮದಲ್ಲಿ ಉತ್ತರಿಸುತ್ತೀರಿ ಎಂಬುದನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸಬೇಕು.

ಪತ್ರಿಕೆ-3

ಇದು ಭಾಷಾ ಸಾಮರ್ಥ್ಯಕ್ಕೆ ಸಂಬಂಧಿಸಿದ್ದು. ಇದರಲ್ಲಿ ಒಟ್ಟು 100 ಅಂಕಗಳ ಪ್ರಶ್ನೆಗಳಿರುತ್ತವೆ. ಎರಡು ಗಂಟೆಗಳ ಅವಧಿಯ ಪರೀಕ್ಷೆ. ಈ ಪತ್ರಿಕೆಯಲ್ಲಿ ಶೇ 50ರಷ್ಟು ಅಂಕಗಳನ್ನು ಗಳಿಸಲೇ ಬೇಕು. ಅಭ್ಯರ್ಥಿಗಳು 2ನೇ ಪತ್ರಿಕೆಯಲ್ಲಿ ಯಾವ ಮಾಧ್ಯಮ ಎಂದು ನಮೂದಿಸಿರುತ್ತಾರೋ ಆ ಮಾಧ್ಯಮ ಭಾಷೆಯ ಭಾಷಾ ಸಾಮರ್ಥ್ಯಕ್ಕೆ ಸಂಬಂಧಿಸಿದ ವಿವರಣಾತ್ಮಕ ಪರೀಕ್ಷೆ ಇರುತ್ತದೆ. ಉದಾ: ಕನ್ನಡ ಮಾಧ್ಯಮದ ಶಿಕ್ಷಕರಿಗಾದರೆ ಕನ್ನಡ ಭಾಷೆ, ವ್ಯಾಕರಣದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

ಕನ್ನಡ ಭಾಷಾ ಸಾಮರ್ಥ್ಯದ ಈ ಪತ್ರಿಕೆಯಲ್ಲಿ ಸಮಾನಾರ್ಥಕ ಪದಗಳು, ವಿರುದ್ಧಾರ್ಥಕ ಪದಗಳು, ನುಡಿಗಟ್ಟುಗಳು, ಗಾದೆಗಳನ್ನು ಪೂರ್ಣಗೊಳಿಸಿ, ಅನ್ಯಭಾಷೆಪದಗಳು, ಕನ್ನಡ ವ್ಯಾಕರಣ, ಸ್ವಂತ ವಾಕ್ಯದಲ್ಲಿ ಬಳಸಿ, ಹೇಳಿಕೆಗೆ ಸೂಕ್ತ ಪದ ಆಯ್ಕೆ ಮಾಡಿ (ಒನ್ ವರ್ಡ್ ಸಬ್‌ಸ್ಟ್ಯೂಟ್), ಪದಬಿಡಿಸಿ ವಿಭಕ್ತಿ ಪ್ರತ್ಯಯ ಗುರುತಿಸಿ, ವಾಕ್ಯಗಳ ವಚನ ಬದಲಿಸುವುದು.. ಇತ್ಯಾದಿಗಳಿರುತ್ತವೆ. ಅಲ್ಲದೇ, 4 ಗದ್ಯ ಭಾಗದ ಒಟ್ಟು 20 ಪ್ರಶ್ನೆಗಳು ಹಾಗೂ 5 ಅಂಕದ 1 ಟಿಪ್ಪಣಿ ಬರೆಯುವ ಪ್ರಶ್ನೆ ಇರುತ್ತದೆ. ಗಾದೆಯ ಮಹತ್ವ ವಿವರಿಸುವುದು, ಸಾರಾಂಶ ಬರೆಯುವುದು, ಚಿತ್ರ ನೋಡಿ ಅಭಿಪ್ರಾಯ ಬರೆಯುವುದು ಹಾಗೂ ಪತ್ರ ಲೇಖನಕ್ಕೆ ತಲಾ 5 ಅಂಕಗಳನ್ನು ಇಡಲಾಗಿದೆ.

ಗಮನಿಸಿ: ಆಂಗ್ಲ ಭಾಷಾ ಶಿಕ್ಷಕರ ಆಯ್ಕೆಯಲ್ಲಿ ಮೊದಲ ಮತ್ತು ಎರಡನೆಯ ಪತ್ರಿಕೆಯ ಅಂಕಗಳನ್ನು ಮಾತ್ರ ಪರಿಗಣಿಸಿದರೆ ಉಳಿದ ವಿಷಯಗಳಾದ ಗಣಿತ, ಜೀವ ವಿಜ್ಞಾನ, ಸಮಾಜ ವಿಜ್ಞಾನದ ಶಿಕ್ಷಕರಿಗೆ ಪತ್ರಿಕೆ 1, 2 ಮತ್ತು 3 ಪತ್ರಿಕೆಗಳಲ್ಲಿ ಗಳಿಸಿದ ಅಂಕಗಳನ್ನು ಪರಿಗಣಿಸಲಾಗುತ್ತದೆ. ಈ ನೇಮಕಾತಿಗೆ ಸಂಬಂಧಿಸಿದಂತೆ ಅರ್ಜಿ, ವಯೋಮಿತಿ, ಮೀಸಲಾತಿ, ಪ್ರಶ್ನೆ ಪತ್ರಿಕೆಗಳ ಕುರಿತ ವಿವರಕ್ಕೆ www.schooleducation.kar.nic.in ವೆಬ್‌ಸೈಟ್ ವಿಳಾಸಕ್ಕೆ ಸಂಪರ್ಕಿಸಿ.

(ಮುಂದಿನ ವಾರ: ಶಿಕ್ಷಕರ ನೇಮಕಾತಿ ಪರೀಕ್ಷೆಗೆ ಏನೇನು ಓದಬೇಕು)

‘ಪ್ರಿಲಿಮ್ಸ್’ ಎಂಬ ನಿರ್ಣಾಯಕ ಸವಾಲು

ಗುರುರಾಜ್ ಎಸ್. ದಾವಣಗೆರೆ

ಹಿಂದಿನ ಸಂಚಿಕೆಯಲ್ಲಿ ತಿಳಿಸಿರುವಂತೆ ಸಿವಿಲ್ ಸರ್ವೀಸಸ್ ಪೂರ್ವಭಾವಿ ಪರೀಕ್ಷೆಯಲ್ಲಿ ಸಾಮಾನ್ಯ ಅಧ್ಯಯನ (ಜನರಲ್ ಸ್ಟಡೀಸ್) – 1 ಮತ್ತು ಸಾಮಾನ್ಯ ಅಧ್ಯಯನ (ಸಿಎಸ್‌ಎಟಿ) – 2 ಎಂಬ ಎರಡು ಪತ್ರಿಕೆಗಳಿರುತ್ತವೆ. ಎರಡೂ ಪತ್ರಿಕೆಗಳ ಪ್ರಶ್ನೆಗಳು ಬಹು ಆಯ್ಕೆಯ ಮಾದರಿಯಲ್ಲಿರುತ್ತವೆ. ಪೇಪರ್ 1 ಮತ್ತು 2 ಅಂಕಗಳನ್ನು ಒಟ್ಟು ರ್‍ಯಾಂಕಿಂಗ್‌ಗೆ ಪರಿಗಣಿಸಲಾಗುವುದಿಲ್ಲ. ಆದರೆ ಪೇಪರ್ 2 ರಲ್ಲಿ ಶೇ 33ರಷ್ಟು ಅಂಕಗಳನ್ನು ಗಳಿಸಲೇಬೇಕು.

ಎಂದಿನಿಂದ ತಯಾರಿ?

ಪ್ರಿಲಿಮ್ಸ್ ಪರೀಕ್ಷೆಗೆ, ಪರೀಕ್ಷೆಯ ದಿನಾಂಕಕ್ಕಿಂತ ಕನಿಷ್ಠ ಒಂದು ವರ್ಷ ಮುಂಚೆಯಿಂದ ಸಿದ್ಧತೆ ಶುರುವಾಗಬೇಕು. ಪ್ರಾರಂಭದಲ್ಲಿ ಮುಖ್ಯ ಪರೀಕ್ಷೆ ಮತ್ತು ಪೂರ್ವಭಾವಿ ಪರೀಕ್ಷೆಗಳೆರಡರಲ್ಲೂ ಬರುವ ವಿಷಯಗಳನ್ನು ಸಮಗ್ರವಾಗಿ ಅಭ್ಯಸಿಸಬೇಕು. ಪರೀಕ್ಷೆಗೆ ಕೊನೆಯ ಮೂರು ತಿಂಗಳಿರುವಾಗ ಕೇವಲ ಪ್ರಿಲಿಮ್ಸ್ ಪೇಪರ್ ಕಡೆ ಗಮನ ಕೇಂದ್ರೀಕರಿಸಬೇಕು. ಪ್ರಿಲಿಮ್ಸ್ ಪರೀಕ್ಷೆಯಲ್ಲಿ ಇತಿಹಾಸ, ಪ್ರಚಲಿತ ವಿದ್ಯಮಾನ, ಭೂಗೋಳ ವಿಜ್ಞಾನ, ರಾಜಕೀಯ ಮತ್ತು ಆಡಳಿತ, ಆರ್ಥಿಕತೆ, ಪರಿಸರ ಅಧ್ಯಯನ, ಸಾಮಾನ್ಯ ವಿಜ್ಞಾನ, ಗ್ರಹಣಶಕ್ತಿ ಮತ್ತು ಸಂವಹನ ಕೌಶಲ, ತಾರ್ಕಿಕತೆ ಮತ್ತು ನಿರ್ಣಯಿಸುವಿಕೆ ಹಾಗೂ ಮೂಲಭೂತ ಸಂಖ್ಯಾವಿಜ್ಞಾನ ಮತ್ತು ದತ್ತಾಂಶ ವ್ಯಾಖ್ಯಾನದ ಬಗ್ಗೆ ಪ್ರಶ್ನೆಗಳಿರುತ್ತವೆ.

‘ಸಿಎಸ್‌ಎಟಿ’(ಪತ್ರಿಕೆ –2) ಬಗ್ಗೆ ಅಲಕ್ಷ್ಯ ಬೇಡ

ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯಲು ಸಿವಿಲ್ ಸರ್ವಿಸಸ್ ಆಪ್ಟಿಟ್ಯೂಡ್ ಟೆಸ್ಟ್‌ನ (CSAT) ಅಂಕಗಳನ್ನು ಪರಿಗಣಿಸುವುದಿಲ್ಲ ಎಂದು ಗೊತ್ತಿರುವ ವಿದ್ಯಾರ್ಥಿಗಳು 80 ಪ್ರಶ್ನೆಗಳ ಪತ್ರಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ನೆನಪಿರಲಿ. ಈ ಪತ್ರಿಕೆಯಲ್ಲಿ ಶೇ 33 ಅಂದರೆ 66 (200 ಅಂಕಗಳಿಗೆ) ಅಂಕಗಳನ್ನು ಗಳಿಸಲೇಬೇಕು. ಎಷ್ಟೋ ಜನ ಪ್ರಥಮ ಪತ್ರಿಕೆಯಲ್ಲಿ ಕಟ್ ಆಫ್ ಅಂಕಕ್ಕೂ ಹೆಚ್ಚಿನ ಅಂಕಗಳಿಸಿರುತ್ತಾರೆ. ಆದರೆ CSATನಲ್ಲಿ ಅನುತ್ತೀರ್ಣರಾಗಿರುತ್ತಾರೆ. ಆಗ ಮುಖ್ಯ ಪರೀಕ್ಷೆಯ ದಾರಿ ಬಂದ್ ಆಗುತ್ತದೆ.

ಈ ಪಠ್ಯಕ್ರಮದಲ್ಲಿ ಅಭ್ಯರ್ಥಿಯ ಸಾಮರ್ಥ್ಯ (Aptitute) ಮತ್ತು ತಾರ್ಕಿಕತೆಯ ಕೌಶಲಗಳನ್ನು ಪರೀಕ್ಷಿಸಲಾಗುತ್ತದೆ. ಗಣಿತ, ಎಂಜಿನಿಯರಿಂಗ್ ಮತ್ತು ವಿಜ್ಞಾನ ವಿಷಯಗಳಲ್ಲಿ ಪರಿಣತಿ ಹೊಂದಿದವರಿಗೆ ಇಲ್ಲಿನ ಪ್ರಶ್ನೆಗಳು ಸುಲಭವೆನಿಸುತ್ತವೆ. ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವುದರ ಜೊತೆಗೆ ಮತ್ತು ಕೆಲವು ಅಣಕು (Mock) ಪರೀಕ್ಷೆಗಳನ್ನು ಬರೆಯುವವರು ಇದರಲ್ಲಿ ಯಶಸ್ಸು ಗಳಿಸುತ್ತಾರೆ. ಹಲವು ಸಮಸ್ಯೆಗಳನ್ನು ಬಿಡಿಸುವುದರ ಬದಲಿಗೆ ಪ್ರಶ್ನೆಗಳಿಗೆ ಸಂಬಂಧಿಸಿದ ಪರಿಕಲ್ಪನೆ (Concept) ಗಳನ್ನು ವಿಶೇಷವಾಗಿ ಕಲಿಯಬೇಕು.



ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಠ–2

ಅಂಕಿ – ಅಂಶಗಳಷ್ಟೇ ಸಾಲದು

ಪ್ರಿಲಿಮ್ಸ್ ಪರೀಕ್ಷೆ ಬರೆಯುವವರು ಸಾಕಷ್ಟು ಅಂಕಿ – ಅಂಶಗಳನ್ನು ನೆನಪಿಟ್ಟುಕೊಳ್ಳಬೇಕು ಎಂಬ ಅಭಿಪ್ರಾಯ ಕೆಲವು ಅಭ್ಯರ್ಥಿಗಳಲ್ಲಿ ಬೇರೂರಿದೆ. ಎಲ್ಲ ಪ್ರಶ್ನೆಗಳ ಉತ್ತರ ಕೇವಲ ಅಂಕಿ - ಸಂಖ್ಯೆಗಳಲ್ಲಿರುವುದಿಲ್ಲ. ಪ್ರತಿ ಪ್ರಶ್ನೆಯನ್ನೂ ಅತ್ಯಂತ ವೇಗವಾಗಿ ವಿಶ್ಲೇಷಿಸಿ ಸರಿಯಾದ ಉತ್ತರ ಆಯ್ಕೆ ಮಾಡಿಕೊಳ್ಳಬೇಕು. 200 ಪ್ರಶ್ನೆಗಳಿಗೆ ಕೇವಲ 120 ನಿಮಿಷಗಳಲ್ಲಿ ಉತ್ತರಿಸಬೇಕು. ಅಂದರೆ ಒಂದು ಪ್ರಶ್ನೆ ಉತ್ತರಿಸಲು ಒಂದು ನಿಮಿಷಕ್ಕಿಂತ ಕಡಿಮೆ ಸಮಯವಿರುತ್ತದೆ.

ಸಮಕಾಲೀನ ವಿದ್ಯಮಾನಗಳೇ ಜೀವಾಳ

ಪ್ರತಿದಿನ ವಿಶ್ವ, ದೇಶ ಹಾಗೂ ರಾಜ್ಯಗಳಲ್ಲಿ ಎಲ್ಲೆಲ್ಲಿ ಏನೇನು ನಡೆಯುತ್ತದೆ ಎಂಬುದರ ಕುರಿತು ಅಭ್ಯರ್ಥಿಗಳು ಮೈಯೆಲ್ಲಾ ಕಣ್ಣು – ಕಿವಿಯಾಗಿರಬೇಕು. ಅನೇಕ ಪ್ರಶ್ನೆಗಳು ಈ ಪ್ರಚಲಿತವಿರುವ ವಿದ್ಯಮಾನಗಳ ಕುರಿತೇ ಆಗಿರುತ್ತವೆ. ಯಾವುದಾದರೊಂದು ವಿಷಯ ದಿನ ಪತ್ರಿಕೆಯ, ಟಿವಿ ಚಾನಲ್‌ಗಳಲ್ಲಿ ಪದೇ ಪದೇ ಹೆಡಲೈನ್ ಆಗಿ ಪ್ರಕಟಗೊಂಡರೆ ಅಥವಾ ಚರ್ಚೆಯಾದರೆ ಅದರ ಬಗೆಗೆ ಹೆಚ್ಚು ಪ್ರಶ್ನೆಗಳಿರುತ್ತವೆ. ಅಂಥ ಮುಖ್ಯ ವಿಷಯಗಳ ಬಗೆಗೆ ಲಭ್ಯವಿರುವ ಎಲ್ಲ ವಿವರ ಮಾಹಿತಿಯನ್ನು ಸಂಪಾದಿಸಬೇಕು.

ಯುಪಿಎಸ್‌ಸಿ ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳುವರು ಸುಮಾರು 10 ಲಕ್ಷ. ಅದರಲ್ಲಿ ಪ್ರಿಲಿಮ್ಸ್‌ಗೆ ಹಾಜರಾಗುವವರು ಕೇವಲ ಐದಾರು ಲಕ್ಷ. ಮುಖ್ಯ ಪರೀಕ್ಷೆಗೆ ಆಯ್ಕೆಯಾಗುವವರು ಕೇವಲ 10 ರಿಂದ 11 ಸಾವಿರ. ಇವರಲ್ಲಿ ಮುಖ್ಯ ಪರೀಕ್ಷೆಯ ಮೊದಲ ಸಾವಿರ ಸ್ಥಾನಗಳನ್ನು ಗಳಿಸುವವರ ಪೈಕಿ ಮುನ್ನೂರು ಜನರಿಗೆ ಐಎಎಸ್, ಐಪಿಎಸ್ ಹುದ್ದೆಗಳು ದೊರಕುತ್ತವೆ. ಪ್ರಿಲಿಮ್ಸ್ ಪರೀಕ್ಷೆ ತೇರ್ಗಡೆಯಾಗಲು ಅಭ್ಯರ್ಥಿಗಳು ಗಳಿಸಬೇಕಾದ ಅಂಕಗಳು 98 ರಿಂದ 100 ಮಾತ್ರ. ಕಳೆದ ಹತ್ತು ವರ್ಷಗಳ ಪ್ರಿಲಿಮ್ಸ್ ಫಲಿತಾಂಶದ ಕಟ್ ಆಫ್ ಅಂಕಗಳು 96 ರಿಂದ 98 ರಲ್ಲೇ ಇವೆ. ಅಂದರೆ ಜನರಲ್ ಸ್ಟಡೀಸ್ ಪ್ರಶ್ನೆಪತ್ರಿಕೆ 1 ರಲ್ಲಿ 200 ಅಂಕಗಳಿಗೆ 100 ಹತ್ತಿರ (ನೂರಕ್ಕಿಂತ ಸ್ವಲ್ಪ ಕಡಿಮೆ) ಅಂಕಗಳಿಸಿದವರೆಲ್ಲ ಮುಖ್ಯ ಪರೀಕ್ಷೆಗೆ ಆಯ್ಕೆಯಾಗುತ್ತಾರೆ.

(ಮುಂದಿನ ವಾರ– ಪಾಠ –3 : ಪ್ರಿಲಿಮ್ಸ್ ಪರೀಕ್ಷೆಗೆ ಪಠ್ಯಕ್ರಮಗಳೇನು. ಟಿಪ್ಪಣಿ ಮಾಡಿಕೊಳ್ಳುವುದು ಹೇಗೆ. ಅಣಕು ಪರೀಕ್ಷೆಯ ಮಹತ್ವ)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಡಿ.ಡಿ.ಟಿ ಹಿನ್ನೆಲೆ

ರಸಾಯನ ಶಾಸ್ತ್ರ

45. ಡಿ.ಡಿ.ಟಿ (ಡೈಕ್ಲೋರೋಡೈ ಫಿನಾಯಿಲ್ ಟ್ರೈಕ್ಲೋರೋ ಈಥೇನ್) ಅದರ ಉಪಯುಕ್ತತೆ ಹಾಗೂ ಅದರ ದುಷ್ಪರಿಣಾಮ ಸಹಿತ ಇತರೇ ಅಂಶಗಳನ್ನು ಬರೆಯಿರಿ

ಉತ್ತರ:- 1873ರಲ್ಲಿ ಕ್ಲೋರಿನೀಕರಣಗೊಂಡ ಪ್ರಪ್ರಥಮ ಸಾವಯವ ಕೀಟನಾಶಕ ಡಿ.ಡಿ.ಟಿಯನ್ನು ತಯಾರಿಸಿದ್ದರು. ಅದರ ಪರಿಣಾಮಕಾರಿ ಕೀಟನಾಶಕತೆಯನ್ನು 1939ರಲ್ಲಿ ಸ್ವಿಟ್ಜರ್ಲೆಂಡ್‌ನ ಗೀಜಿ ಔಷಧಿ ತಯಾರಿಕಾ ಘಟಕದ ಪೌಲ್ ಮುಲ್ಲರ್ ಕಂಡುಹಿಡಿದರು. ಈ ಆವಿಷ್ಕಾರಕ್ಕಾಗಿ ಪೌಲ್ ಮುಲ್ಲರ್ 1948ರಲ್ಲಿ ವೈದ್ಯಕೀಯ ಮತ್ತು ಶಾರೀರಿಕ ವಿಜ್ಞಾನದ ನೊಬೆಲ್ ಬಹುಮಾನವನ್ನು ಪಡೆದರು. ಟೈಫಾಯಿಡ್ ಮತ್ತು ಮಲೇರಿಯಾ ರೋಗವನ್ನು ಹರಡುವ ಸೊಳ್ಳೆಯ ವಿರುದ್ಧದ ಪ್ರಭಾವಕಾರಿ ಪರಿಣಾಮದಿಂದಾಗಿ ಪ್ರಪಂಚದ ಎರಡನೇ ಮಹಾಯುದ್ಧದ ನಂತರ ಡಿ.ಡಿ.ಟಿಯನ್ನು ವಿಶ್ವದಾದ್ಯಂತ ಅಗಾಧವಾಗಿ ಬಳಸಲಾಗುತ್ತಿದೆ. 1940ರ ನಂತರ ಡಿ.ಡಿ.ಟಿಯ ಅತಿಯಾದ ಬಳಕೆಯಿಂದ ಉಂಟಾದ ಸಮಸ್ಯೆಗಳು ಕಾಣತೊಡಗಿದವು. ಹಲವಾರು ಪ್ರಬೇಧಗಳು ಡಿ.ಡಿ.ಟಿ ಪ್ರತಿರೋಧಿಸುವ ಸಾಮರ್ಥ್ಯ ಪಡೆದುದಲ್ಲದೆ, ಅದು ಮೀನುಗಳಿಗೆ ಅತ್ಯಂತ ವಿಷಯುಕ್ತವಾಗಿರುವುದು ಸಂಶೋಧನೆಯಿಂದ ಕಂಡು ಬಂತು. ಡಿ.ಡಿ.ಟಿ.ಯು ರಾಸಾಯನಿಕವಾಗಿ ಸ್ಥಿರವಾಗಿದ್ದು, ಕೊಬ್ಬನ್ನು ವಿಲೀನಗೊಳಿಸುವ ಸಂಯುಕ್ತವಾಗಿರುವುದು ಸಮಸ್ಯೆಯಾಗಿದೆ.


ಡಿ.ಡಿ.ಟಿಯು ಪ್ರಾಣಿಗಳಲ್ಲಿ ಬೇಗ ಚಯಾಪಚಯಗೊಳ್ಳದೆ ಕೊಬ್ಬಿನ ಅಂಗಾಂಶಗಳಲ್ಲಿ ಸಂಗ್ರಹವಾಗುತ್ತ, ಸಂಚಯನಗೊಳ್ಳುತ್ತದೆ. ಹೀಗೆ ಆಹಾರದ ಮೂಲಕ ಡಿ.ಡಿ.ಟಿ ಸೇವನೆ ಮಾಡುತ್ತ ಹೋದರೆ ಪ್ರಾಣಿಗಳ ದೇಹದಲ್ಲಿ ನಿರಂತರವಾಗಿ ಶೇಖರಗೊಳ್ಳುತ್ತದೆ. 1973ರಲ್ಲಿ ಅಮೆರಿಕವು ಡಿ.ಡಿ.ಟಿಯ ಬಳಕೆಯನ್ನು ನಿಷೇಧಿಸಿದ್ದರೂ ಪ್ರಪಂಚದ ವಿವಿಧ ಭಾಗಗಳಲ್ಲಿ ಅದರ ಬಳಕೆ ಈಗಲೂ ಮುಂದುವರಿದಿದೆ.

46. ಬೆಂಜೀನ್‌ನ ಅತ್ಯಂತ ಸರಳ ಹೈಡ್ರಾಕ್ಸಿ ಉತ್ಪನ್ನ ಯಾವುದು?

ಉತ್ತರ:- ಬೆಂಜೀನ್‌ನ ಅತ್ಯಂತ ಸರಳ ಹೈಡ್ರಾಕ್ಸಿ ಉತ್ಪನ್ನ ಫೀನಾಲ್.

47. ಕೆಳಗಿನ ಸಂಯುಕ್ತಗಳ IUPAC ಹೆಸರುಗಳನ್ನು ನೀಡಿ


(i) $CH_3-CH(Cl)-CH(CH_3)-CH(CH_3)-CH_2OH$ (ii) $CH_3-CH(CH_3)-O-CH_2CH_3$



ಉತ್ತರ:-
1. 4–ಕ್ಲೋರೋ–2,3–ಡೈಮಿಥೈಲ್ ಪೆಂಟೇನ್ –1–ಓಲ್
2. 2– ಈಥಾಕ್ಸಿ ಫ್ರೋಪೇನ್
3. 2,6–ಡೈಮಿಥೈಲ್ ಫೀನಾಲ್
4. 1–ಈಥಾಕ್ಸಿ –2–ನೈಟ್ರೋ ಸೈಕ್ಲೋಹೆಕ್ಸೇನ್

48. ಮಿಥೇನೊಲ್ ಫೀನಾಲ್ ಮತ್ತು ಮಿಥೋಕ್ಸಿ ಮಿಥೇನ್‌ಗಳ ರಚನಾತ್ಮಕ ಅಂಶಗಳನ್ನು ಚಿತ್ರಿಸಿ.

ಉತ್ತರ:-



49. (a) ಪೆಂಟೇನ್–1–ಓಲ್, ಬ್ಯೂಟೇನ್–1–ಓಲ್, ಬ್ಯೂಟೇನ್–2–ಓಲ್ ಈಥೇನೊ ಪ್ರೋಪೇನ್–1–ಓಲ್, ಮಿಥೇನೊಲ್
(b) ಪೆಂಟೇನ್–1–ಓಲ್, ಎನ್–ಬ್ಯೂಟೇನ್, ಪೆಂಟೇನಾಲ್, ಈಥಾಕ್ಸಿಈಥೇನ್

ಉತ್ತರ
(a) ಮಿಥೇನೊಲ್, ಈಥೇನೊಲ್, ಪ್ರೋಪೇನ್–1–ಓಲ್, ಬ್ಯೂಟೇನ್–2–ಓಲ್, ಬ್ಯೂಟೇನ್–1–ಓಲ್, ಪೆಂಟೇನ್–1–ಓಲ್.
(b) ಎನ್–ಬ್ಯೂಟೇನ್, ಈಥಾಕ್ಸಿಈಥೇನ್, ಪೆಂಟೇನಾಲ್ ಮತ್ತು ಪೆಂಟೇನ್–1–ಓಲ್.

ನೆನಪಿಡಿ: ಕೆಲವು ಫೀನಾಲ್‌ಗಳು ಮತ್ತು ಈಥೇನೊಲ್‌ನ pKa ಬೆಲೆಗಳು.

ಸಂಯುಕ್ತ	ಸೂತ್ರ	pK_a
o- ನೈಟ್ರೋಫೀನಾಲ್	o-O2N-C6H4-OH	7.2
m- ನೈಟ್ರೋಫೀನಾಲ್	m-O2N-C6H4-OH	8.3
p- ನೈಟ್ರೋಫೀನಾಲ್	p-O2N-C6H4-OH	7.1
ಫೀನಾಲ್	C6H5-OH	10.0
o- ಕ್ರೆಸಾಲ್	o-CH3-C6H4-OH	10.2
m- ಕ್ರೆಸಾಲ್	m-CH3C6H4-OH	10.1
p- ಕ್ರೆಸಾಲ್	p-CH3-C6H4-OH	10.2
ಈಥೇನೊಲ್	C2H5OH	15.9

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಭೌತಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ: 12 ಸಂಭವನೀಯ ಪ್ರಶ್ನೆ ಉತ್ತರಗಳು

ಅನುವಂಶೀಯತೆ ಮತ್ತು ಜೀವ ವಿಕಾಸ

ಜೀವಶಾಸ್ತ್ರ

1. ಅನುವಂಶೀಯತೆ ಎಂದರೇನು?
- ಜೀವಿಗಳ ಗುಣಲಕ್ಷಣಗಳು ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ವಂಶವಾಹಿಗಳ ಮೂಲಕ ವರ್ಗಾವಣೆಯಾಗುವ ಪ್ರಕ್ರಿಯೆ.


2. ತಳಿಶಾಸ್ತ್ರದ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ?
- ಗ್ರೆಗರ್ ಜೊಹಾನ್ ಮೆಂಡಲ್

3. ಹೊಸ ಪ್ರಭೇದಗಳ ಉಗಮಕ್ಕೆ ಕಾರಣವಾದ ಅಂಶಗಳಾವುವು?
- ವರ್ಣತಂತುಗಳ ಸಂಖ್ಯೆಯಲ್ಲಿ ಬದಲಾವಣೆ
- ಅನುವಂಶೀಯ ದಿಕ್ಚ್ಯುತಿ
- ನಿಸರ್ಗದ ಆಯ್ಕೆ
- ಭೌಗೋಳಿಕವಾಗಿ ಪ್ರತ್ಯೇಕಿಸಲ್ಪಟ್ಟ ಜೀವಿ ಸಮೂಹಗಳ ನಡುವೆ ಸಂತಾನೋತ್ಪತ್ತಿ.

4. ರಚನಾನುರೂಪಿ ಅಂಗಗಳು ಎಂದರೇನು? ಉದಾಹರಣೆ ಕೊಡಿ.
- ಒಂದೇ ರೀತಿಯ ರಚನಾ ವಿನ್ಯಾಸ ಹೊಂದಿದ್ದು ವಿಭಿನ್ನ ಕಾರ್ಯಗಳನ್ನು ನಿರ್ವಹಿಸುವ ಅಂಗಗಳು.

ಉದಾ: ಮಾನವನ ಕೈಗಳು, ಕುದುರೆಯ ಮುಂಗಾಲುಗಳು.

5. ಮಾನವರಲ್ಲಿ ಮಗುವಿನ ಲಿಂಗವು ಹೇಗೆ ನಿರ್ಧರಿತವಾಗುತ್ತದೆ? ವಿವರಿಸಿ.
- ಮಾನವರಲ್ಲಿ ಮಗುವಿನ ಲಿಂಗವನ್ನು ನಿರ್ಧರಿಸುವುದು ತಂದೆಯ ವೀರ್ಯಾಣುಗಳು. ಏಕೆಂದರೆ ವೀರ್ಯಾಣುಗಳಲ್ಲಿ 2 ವಿಧಗಳಿವೆ. ಅರ್ಧದಷ್ಟು ವೀರ್ಯಾಣುಗಳು X ಕ್ರೋಮೋಸೋಮ್‌ನ್ನು ಹೊಂದಿದ್ದರೆ, ಉಳಿದ ಅರ್ಧದಷ್ಟು ವೀರ್ಯಾಣುಗಳು Y ಕ್ರೋಮೋಸೋಮ್‌ನ್ನು ಹೊಂದಿರುತ್ತವೆ. ತಾಯಿಯ ಅಂಡಾಣುಗಳು X ಕ್ರೋಮೋಸೋಮ್‌ನ್ನು ಮಾತ್ರ ಹೊಂದಿರುತ್ತವೆ. X ಕ್ರೋಮೋಸೋಮ್‌ನ್ನು ಹೊಂದಿರುವ ವೀರ್ಯಾಣು X ಕ್ರೋಮೋಸೋಮ್ ಹೊಂದಿರುವ ಅಂಡಾಣುವಿನ ಜೊತೆ ಸಂಯೋಗವಾದರೆ ಹೆಣ್ಣು(XX.....) ಮಗುವಾಗುತ್ತದೆ. ಒಂದು ವೇಳೆ Y ಕ್ರೋಮೋಸೋಮ್‌ನ್ನು ಹೊಂದಿರುವ ವೀರ್ಯಾಣು X ಕ್ರೋಮೋಸೋಮ್‌ನ್ನು ಹೊಂದಿರುವ ಅಂಡಾಣುವಿನ ಜೊತೆ ಸಂಯೋಗವಾದರೆ ಗಂಡು(XY) ಮಗುವಾಗುತ್ತದೆ.



6. ಮೆಂಡಲರ ಏಕತಳೀಕರಣ ಪ್ರಯೋಗದ F2 ಪೀಳಿಗೆಯ ಚಕ್ಕರ್ ಬೋರ್ಡ್ ಬರೆದು, ಫಲಿತಾಂಶ ತಿಳಿಸಿ.
- ಎತ್ತರದ ಬಟಾಣಿ ಸಸ್ಯ X ಕುಬ್ಜ ಬಟಾಣಿ ಸಸ್ಯ

TT X tt
ಲಿಂಗಾಣುಗಳು – T t
Tt F1 ಸಂತತಿ –
ಎಲ್ಲವೂ ಎತ್ತರದ ಸಸ್ಯಗಳು

ಲಿಂಗಾಣುಗಳು	T	t
T	TT	Tt
t	Tt	tt

ಫಲಿತಾಂಶ: ಫೀನೋಟಿಪಿಕ್ ಅನುಪಾತ- 3 : 1
ಜೀನೋಟಿಪಿಕ್ ಅನುಪಾತ - 1 : 2 : 1

7. ದುಂಡನೆಯ ಹಳದಿ(RRYY) ಮತ್ತು ಸುಕ್ಕಾದ ಹಸಿರು ಬಟಾಣಿ(rryy) ಬೀಜಗಳ ನಡುವಿನ ಮೆಂಡಲರ ದ್ವಿತಳೀಕರಣ ಪ್ರಯೋಗದ F2 ಪೀಳಿಗೆಯ ಚಕ್ಕರ್ ಬೋರ್ಡ್ ಬರೆದು, ಫಲಿತಾಂಶ ತಿಳಿಸಿ.
- ದುಂಡಾದ ಹಳದಿಬೀಜ X ಸುಕ್ಕಾದ ಹಸಿರುಬೀಜ

RRYY X rryy
ಲಿಂಗಾಣುಗಳು – RY ry
RrYy F1 ಸಂತತಿ –
ಎಲ್ಲವೂ ದುಂಡಾದ ಹಳದಿಬೀಜ

ಲಿಂಗಾಣುಗಳು	RY	Ry	rY	ry
RY	RRYY	RRYy	RrYY	RrYy
Ry	RRYy	RRyy	RrYy	Rryy
rY	RrYY	RrYy	rrYY	rrYy
Ry	RrYy	Rryy	rrYy	rryy

ಫಲಿತಾಂಶ: 9 : 3 : 3 : 1

ಎ. ಬಾಲರಾಜು. ಎಂ.ಎಸ್ಸಿ., ಎಂ.ಇಡಿ.
ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಪ್ರಜಾವಾಣಿ ನೋಡಿಯೊ
ಹತ್ತನೇ ತರಗತಿ ಜೀವಶಾಸ್ತ್ರ ‘ಹೆರಿಡಿಟಿ ಅಂಡ್ ಇವಲ್ಯೂಷನ್’ ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


JOCKEY
FACTORY SECONDS
UPTO 50% OFF*
INNERWEAR | LEISUREWEAR | ACTIVEWEAR
KIDSWEAR | SOCKS
• 10 am to 8 pm • Open All Days • Master/Visa Card Accepted
* T & C apply
Venues in Bangalore
• West Of Chord Road: Sri Vidyaranya Prarthana Mandira, (Sri Avani Sringeri Shankar Mutt) Mahalaxmipuram, Next To Anupama English School - 560 086
• Kundalahalli Gate: S K R Convention Hall, #68, Thubarahalli, Varthur Main Road - 560 066
• Malleswaram: The Canara Union, No.42, 8th Main, Canara Union Road - 560 003
• Jayanagar: Premachandra Kalyana Mahal, T.Mariyappa Road, 2nd Block, (Near Ashoka Pillar) - 560 011
• Rajarajeswari Nagar: Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
• Vijay Nagar: Five O Gallery, No.50, 17th Cross, M.C. Road, Near Vijay Nagar Bus Stop - 560 040
• Infantry Road: Safina Plaza, No.84/85 - 560 001
• Bannerghatta Road: Santhome Parish Church Hall, Hulimavu, Near Meenakshi Mall - 560 076
• Banashankari: Sri Hari Kalyana Mantap, 30th Main, Banshankari, B.S.K. 3rd Stage, Near K.I.M.S. - 560 085
• Koramangala: Apoorva International, #35A, Raheja Arcade, Opp Star Box - 560 095
• Basavanagudi: Amolak Apparels, #104, Bull Temple Road, Near Ramakrishna Ashram - 560 019
Org. by: Surya Agency Pvt. Ltd.



ಸುಭಾಷಿತ

ನಮ್ಮ ಬದುಕನ್ನು ನಾವೇ ಕಟ್ಟಿಕೊಳ್ಳಬೇಕು. ಅನ್ಯರ ಹೆಗಲನ್ನು ಅವಲಂಬಿಸಬೇಕಾದುದು ಅಂತ್ಯಸಂಸ್ಕಾರದ ಸಂದರ್ಭದಲ್ಲಿ ಮಾತ್ರ.

-ಭಗತ್ ಸಿಂಗ್

ತೈಲ, ಎಲ್‌ಪಿಜಿ ಬೆಲೆ ಏರಿಕೆ ಕಷ್ಟಕಾಲದಲ್ಲಿ ಹೊರೆ ಹೆಚ್ಚಳ ಬೇಡ

ಪೆಟ್ರೋಲ್, ಡೀಸೆಲ್ ಮತ್ತು ಮನೆಗಳಲ್ಲಿ ಬಳಸುವ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ಹೆಚ್ಚಿಸಲಾಗಿದೆ. ಉತ್ತರಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಹತ್ತಿರವಾಗುವವರೆಗೆ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಪ್ರತಿದಿನ ಎಂಬಂತೆ ಹೆಚ್ಚಿಸಲಾಗುತ್ತಿತ್ತು. ತೈಲೋತ್ಪನ್ನಗಳ ಬೆಲೆ ಏರಿಕೆಗೂ ತನಗೂ ಸಂಬಂಧ ಇಲ್ಲ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯ ಆಧಾರದಲ್ಲಿ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಆಗುತ್ತಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತಿತ್ತು. ಆದರೆ, ಚುನಾವಣೆ ಸಂದರ್ಭದಲ್ಲಿ ಮಾತ್ರ ಸುಮಾರು ನಾಲ್ಕು ತಿಂಗಳ ಅವಧಿಗೆ ದೇಶದಲ್ಲಿ ಪೆಟ್ರೋಲ್ ಬೆಲೆ ಹಾಗೂ ಡೀಸೆಲ್ ಬೆಲೆ ಸ್ಥಿರವಾಗಿದ್ದವು. ಆಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಏರಿಳಿಕೆ ಆಗಿರಲಿಲ್ಲವೇ? ಇದಕ್ಕೆ ಉತ್ತರ ಸಾರ್ವಜನಿಕರಿಗೂ ಗೊತ್ತಿದೆ, ಸರ್ಕಾರಕ್ಕೂ ಗೊತ್ತಿದೆ. ಕೇಂದ್ರದ ಎನ್‌ಡಿಎ ಸರ್ಕಾರದ ನೇತೃತ್ವವನ್ನು ವಹಿಸಿರುವ ಬಿಜೆಪಿಯು ಮುಕ್ತ ಮಾರುಕಟ್ಟೆಯ ತತ್ವಗಳ ಪರವಾಗಿ ಮಾತನಾಡುತ್ತದೆ, ಪೆಟ್ರೋಲ್-ಡೀಸೆಲ್ ಬೆಲೆಯನ್ನು ನಿಯಂತ್ರಣಮುಕ್ತಗೊಳಿಸಿದೆ. ಆದರೆ, ಚುನಾವಣೆ ಸಂದರ್ಭದಲ್ಲಿ ಮಾತ್ರ ತೈಲ ಬೆಲೆಯನ್ನು ಸ್ಥಿರವಾಗಿ ಇರಿಸುತ್ತದೆ. ಇದು ಮುಕ್ತ ಮಾರುಕಟ್ಟೆಯ ಪರ ನೀತಿ ಅಲ್ಲ; ಇದು ಚುನಾವಣಾ ಲೆಕ್ಕಾಚಾರದ ನೀತಿ ಆಗುತ್ತದೆ. ದೇಶದಲ್ಲಿ ಕೋವಿಡ್ ಅಲೆ ಆರಂಭವಾದಾಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ವಿಪರೀತವಾಗಿ ಕುಸಿಯಿತು. ಅದರ ಲಾಭವನ್ನು ಸರ್ಕಾರವು ಜನರಿಗೆ ವರ್ಗಾಯಿಸಲಿಲ್ಲ. ಇದು ತೈಲ ಬೆಲೆಯನ್ನು ನಿಯಂತ್ರಣ ಮುಕ್ತಗೊಳಿಸಿದ ಉದ್ದೇಶಕ್ಕೆ ತಕ್ಕುದಾಗಿ ಇರಲಿಲ್ಲ. ಸರ್ಕಾರವು ತನ್ನ ಒಲವು ಯಾವ ತತ್ವದ ಕಡೆ ಇದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.



ಜನಸಾಮಾನ್ಯರ ತಿಂಗಳ ಖರ್ಚಿನ ಮೇಲೆ ವಿಪರೀತ ಒತ್ತಡ ಸೃಷ್ಟಿಸುವ ತೈಲೋತ್ಪನ್ನಗಳ ಬೆಲೆಯನ್ನು ಇನ್ನಷ್ಟು ಹೆಚ್ಚಿಸುವ ಮೊದಲು ಸಮಗ್ರವಾಗಿ ಆಲೋಚಿಸಿ ತೀರ್ಮಾನಿಸುವುದು ಸೂಕ್ತ

ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದ್ದು, ಜನಸಾಮಾನ್ಯರ ಹಿತಾಸಕ್ತಿ ರಕ್ಷಿಸುವ ಉದ್ದೇಶದಿಂದ ಇಂಧನ ಬೆಲೆಯನ್ನು ನಿಯಂತ್ರಣದಲ್ಲಿ ಇರಿಸಲು ಜಾಗರೂಕತೆಯಿಂದ, ಅಗತ್ಯ ಎದುರಾದಾಗ ಮಧ್ಯಪ್ರವೇಶ ಮಾಡಲಾಗುವುದು ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ರಾಜ್ಯಸಭೆಯಲ್ಲಿ ಹಿಂದಿನ ವಾರ ಹೇಳಿದ್ದರು. ಈಗ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಸತತವಾಗಿ ಎರಡು ದಿನಗಳಿಂದ ಏರಿಕೆ ಆಗಿದೆ. ಹಿಂದಿನ ಅನುಭವದ ಆಧಾರದಲ್ಲಿ ಹೇಳುವುದಾದರೆ, ಈ ಬೆಲೆ ಏರಿಕೆಯು ಇನ್ನೂ ಕೆಲವು ದಿನಗಳವರೆಗೆ ಮುಂದುವರಿಯುವ ಸಾಧ್ಯತೆ ಇದೆ. ಸರ್ಕಾರವೇ ಹೇಳಿರುವ 'ಅಗತ್ಯ ಎದುರಾದಾಗ ಮಧ್ಯಪ್ರವೇಶ' ಎಂಬ ಮಾತಿನ ಅರ್ಥ ಏನು? ಜನವರಿ ಮತ್ತು ಫೆಬ್ರುವರಿಯಲ್ಲಿ ಚಿಲ್ಲರೆ ಹಣದುಬ್ಬರ ದರವು ಭಾರತೀಯ ರಿಸರ್ವ್ ಬ್ಯಾಂಕ್ ಹಾಕಿಕೊಂಡಿರುವ ಮಿತಿಯನ್ನು ಮೀರಿದೆ. ಈಗ ಡೀಸೆಲ್ ಬೆಲೆ ಹೆಚ್ಚಳವು ಹಣದುಬ್ಬರವನ್ನು ಇನ್ನಷ್ಟು ಹೆಚ್ಚುವಂತೆ ಮಾಡಲಿದೆ ಎಂಬ ವಿಚಾರವಾಗಿ ಅನುಮಾನಗಳೇನೂ ಬೇಕಿಲ್ಲ. ಈಗಿನ ಪರಿಸ್ಥಿತಿಯು, ಹಣದುಬ್ಬರ ಪ್ರಮಾಣ ನಿಯಂತ್ರಿಸಲು ಆರ್‌ಬಿಐಗೆ ಬಡ್ಡಿ ದರ ಹೆಚ್ಚಿಸುವ ಒತ್ತಡವನ್ನು ಸೃಷ್ಟಿಸಬಹುದು. ಹಾಗೆ ಆದಲ್ಲಿ, ಈಗ ಕೆಲವು ತಿಂಗಳುಗಳಿಂದ ಅರ್ಥ ವ್ಯವಸ್ಥೆಯಲ್ಲಿ ಕಂಡುಬಂದಿರುವ ಲವಲವಿಕೆಯು ಮಂಕಾಗಬಹುದು. ದೇಶದಲ್ಲಿ ತೈಲೋತ್ಪನ್ನಗಳ ಬೆಲೆ ಹೆಚ್ಚಿಸುವ ಹಾಗೂ ಇಳಿಸುವ ಅಧಿಕಾರವು ಮಾರುಕಟ್ಟೆಯ ಕೈಯಲ್ಲಿ ಇಲ್ಲ, ಅದು ಇರುವುದು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಕೈಯಲ್ಲಿ ಎಂಬುದನ್ನು ಚುನಾವಣಾ ಸಂದರ್ಭವು ತೋರಿಸಿಕೊಟ್ಟಿದೆ. ಹೀಗಾಗಿ, ಈಗಿನ ಸಂದರ್ಭದಲ್ಲಿ ತೈಲೋತ್ಪನ್ನಗಳ ಬೆಲೆಯನ್ನು ಇನ್ನಷ್ಟು ಹೆಚ್ಚಿಸುವ ಮೊದಲು ಸಮಗ್ರವಾಗಿ ಆಲೋಚಿಸಿ ತೀರ್ಮಾನ ಕೈಗೊಳ್ಳುವುದು ಸೂಕ್ತವಾದೀತು.

ಒಂದು ವರ್ಷಕ್ಕೂ ಕಡಿಮೆ ಅವಧಿಯಲ್ಲಿ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯು ₹140ರಷ್ಟು ಹೆಚ್ಚಳವಾಗಿದೆ. 2020ರ ಮೇ ತಿಂಗಳವರೆಗೆ ಎಲ್‌ಪಿಜಿಗೆ ಸಬ್ಸಿಡಿ ನೀಡಲಾಗುತ್ತಿತ್ತು. ನಂತರದಲ್ಲಿ ಸಬ್ಸಿಡಿ ಮೊತ್ತ ವರ್ಗಾವಣೆಯು ಬಹುತೇಕ ಸ್ಥಗಿತವಾಗಿದೆ ಎಂದು ವರದಿಯಾಗಿದೆ. ಹೀಗಿದ್ದರೂ, ಕೇಂದ್ರ ಸರ್ಕಾರವು ಈ ವಿಚಾರವಾಗಿ ಅಧಿಕೃತವಾಗಿ ಒಂದಿನಿತೂ ಮಾತನಾಡುತ್ತಿಲ್ಲ. ಸಬ್ಸಿಡಿಯನ್ನು ಸ್ಥಗಿತಗೊಳಿಸಿದ್ದು ಏಕೆ ಎಂಬುದನ್ನು ಸಾರ್ವಜನಿಕರಿಗೆ ತಿಳಿಸುವ ಹೊಣೆಗಾರಿಕೆಯನ್ನಾದರೂ ಅದು ತೋರಿಸಬೇಕಿತ್ತು. ಅದನ್ನು ಇದುವರೆಗೂ ಮಾಡದೆ ಇರುವುದು ಸರಿಯಲ್ಲ. ವರದಿಗಳ ಪ್ರಕಾರ, ಈಗ ಸಾರ್ವಜನಿಕರು 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್‌ಗೆ ಪಾವತಿ ಮಾಡಬೇಕಿರುವ ಮೊತ್ತವು ಇದುವರೆಗಿನ ಗರಿಷ್ಠ ಮೊತ್ತ. ಪೆಟ್ರೋಲ್, ಡೀಸೆಲ್ ಬೆಲೆ ಇನ್ನೂ ಕೆಲವು ಸಮಯದವರೆಗೆ ಆಗಾಗ ಹೆಚ್ಚಳ ಆಗಲಿದೆ ಎಂದು ಉದ್ಯಮದ ಮೂಲಗಳು ಹೇಳಿರುವುದಾಗಿ ವರದಿಯಾಗಿದೆ. ಈಗಿನ ಬೆಲೆ ಏರಿಕೆಯು ಸಾರ್ವಜನಿಕರ, ಅದರಲ್ಲೂ ಮುಖ್ಯವಾಗಿ ಕಡಿಮೆ ಆದಾಯ ಇರುವ ವರ್ಗಗಳ ತಿಂಗಳ ಖರ್ಚಿನ ಮೇಲೆ ವಿಪರೀತ ಒತ್ತಡ ಸೃಷ್ಟಿಸುತ್ತದೆ ಎಂಬುದರಲ್ಲಿ ಅನುಮಾನ ಇಲ್ಲ.

ಉಪಶಮನಕಾರಿ ಆರೈಕೆ ಹಾಗೂ ಬದುಕಿನ ಅಂತಿಮ ದಿನಗಳ ಆರೈಕೆಯ ಮಹತ್ವ ಮನಗಾಣಬೇಕಿದೆ

ಘನತೆಯ ಸಾವು ಮತ್ತು ಆರೈಕೆ



ವಿಶ್ಲೇಷಣೆ

ಪ್ರೊ. ಶ್ರೀಲತಾ ರಾವ್ ಶೇಷಾದ್ರಿ

ಉಪಶಮನಕಾರಿ ಆರೈಕೆ ಹಾಗೂ ಬದುಕಿನ ಅಂತಿಮ ದಿನಗಳ ಆರೈಕೆ ಎಂದರೇನು? ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಪ್ರಕಾರ, 'ಉಪಶಮನಕಾರಿ ಆರೈಕೆ' ಎಂದರೆ ಜೀವಕ್ಕೆ ಅಪಾಯಕಾರಿಯಾದ ಕಾಯಿಲೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಂದ ನರಳುತ್ತಿರುವ ರೋಗಿಗಳು ಹಾಗೂ ಅವರ ಕುಟುಂಬದವರ ಬದುಕಿನ ಗುಣಮಟ್ಟ ಸುಧಾರಿಸುವಂತಹ ಆರೈಕೆಯ ವಿಧಾನ. ಇದು ದೈಹಿಕ, ಮಾನಸಿಕ ಅಥವಾ ಆಧ್ಯಾತ್ಮಿಕ ನೆಲೆಯಲ್ಲಿ ಯಾತನೆಯನ್ನು ತಡೆದು ಪರಿಹರಿಸುತ್ತದೆ. ಇದಕ್ಕಾಗಿ ವೈದ್ಯರು, ದಾದಿಯರು, ಸಹಾಯಕ ಸಿಬ್ಬಂದಿ, ಅರೆ ವೈದ್ಯಕೀಯ ಸಿಬ್ಬಂದಿ, ಔಷಧಶಾಸ್ತ್ರಜ್ಞರು, ಫಿಸಿಯೊಥೆರಪಿ ಪರಿಣತರು ಹಾಗೂ ಸ್ವಯಂಸೇವಕರ ತಂಡ ಇರಬೇಕಾಗುತ್ತದೆ. ಯಾತನೆ, ನೋವಿನಿಂದ ಮುಕ್ತವಾಗಿ ಘನತೆಯಿಂದ ಸಾಯಲು ರೋಗಿಗಳಿಗೆ ಅವಕಾಶ ಮಾಡಿಕೊಡುವುದು ಇದರ ಮೂಲ ಉದ್ದೇಶ.

'ಬದುಕಿನ ಅಂತಿಮ ದಿನಗಳ ಆರೈಕೆ'ಯೂ ಇದೇ ರೀತಿ ಸಾವಿಗೆ ಹತ್ತಿರವಾಗಿರುವ ಸಂದರ್ಭದಲ್ಲಿ ನೀಡಲಾಗುವ ಬೆಂಬಲ ಹಾಗೂ ವೈದ್ಯಕೀಯ ಆರೈಕೆಯ ಕಡೆಗೆ ಗಮನಹರಿಸುತ್ತದೆ. ದೀರ್ಘಕಾಲದ ಕಾಯಿಲೆಯಿಂದ ಬಳಲುವ ವೃದ್ಧರಿಗೂ ಸಾವಿಗೆ ಮುಂಚೆ ಅನೇಕ ದಿನ, ವಾರ ಅಥವಾ ತಿಂಗಳುಗಟ್ಟಲೆ ಆರೈಕೆಯ ಅಗತ್ಯವಿರುತ್ತದೆ. ಇಂತಹ ಪ್ರಕರಣಗಳಲ್ಲಿ ಆಸ್ಪತ್ರೆಗೆ ಸೇರಿಸುವುದು ಸೂಕ್ತವಾಗುವುದಿಲ್ಲ. ಏಕೆಂದರೆ, ದೀರ್ಘಾವಧಿ ಚಿಕಿತ್ಸೆಯ ಪರಿಹಾರಕ್ಕಿಂತ ತೀವ್ರತರ ಲಕ್ಷಣಗಳಿಗೆ ತಕ್ಷಣದ ಪರಿಹಾರದ ನೆಮ್ಮದಿ ಮುಖ್ಯವಾಗಿರುತ್ತದೆ.

ಎರಡು ಮುಖ್ಯ ಪ್ರವೃತ್ತಿಗಳು, ಭಾರತದಲ್ಲಿ ಉಪಶಮನಕಾರಿ ಆರೈಕೆ ಹಾಗೂ ಬದುಕಿನ ಕೊನೆಯ ದಿನಗಳ ಆರೈಕೆಯ ಅಗತ್ಯವನ್ನು ಹೆಚ್ಚಿಸುತ್ತಿವೆ. ಮೊದಲನೆಯದು, ರಾಷ್ಟ್ರದಾದ್ಯಂತ ದೀರ್ಘಾವಧಿಯ ಕಾಯಿಲೆಗಳು ಹೆಚ್ಚಾಗುತ್ತಿರುವುದು. ಅದರಲ್ಲೂ ದೀರ್ಘಾವಧಿ ಆರೈಕೆ, ದೈಹಿಕ-ಮಾನಸಿಕ ನೋವು ನಿರ್ವಹಣೆ ಅಗತ್ಯವಿರುವ ವಿವಿಧ ಬಗೆಯ ಕ್ಯಾನ್ಸರ್‌ಗಳು ವಿಶೇಷವಾಗಿ ಹೆಚ್ಚಾಗುತ್ತಿವೆ. ಭಾರತದಲ್ಲಿ ಪ್ರತೀ ಒಂದು ಗಂಟೆಗೆ 60 ಜನರು ಕ್ಯಾನ್ಸರ್ ಹಾಗೂ ನೋವಿನಿಂದ ಸಾಯುತ್ತಾರೆ ಎಂದು ಅಂದಾಜು ಮಾಡಲಾಗಿದೆ. ಮುಖ್ಯವಾಗಿ ಈ ಗುಂಪಿನಲ್ಲಿ ಎಲ್ಲ ವಯೋಮಾನದ ವಯಸ್ಕರು ಹಾಗೂ ಮಕ್ಕಳು ಒಳಗೊಳ್ಳುತ್ತಾರೆ.

ಎರಡನೆಯದು, ವಿಶ್ವಬ್ಯಾಂಕ್ ಅಂಕಿಅಂಶಗಳ ಪ್ರಕಾರ, ಸರಾಸರಿ ಜೀವಿತಾವಧಿ 1960ರಲ್ಲಿ 41.5 ವರ್ಷಗಳಷ್ಟಿದ್ದದ್ದು 2019ರ ವೇಳೆಗೆ ಸುಮಾರು 70 ವರ್ಷಗಳಿಗೆ ಏರಿಕೆಯಾಗಿದೆ. ಹೀಗಾಗಿ ವೃದ್ಧರ ಜನಸಂಖ್ಯೆ ಹೆಚ್ಚಾಗುತ್ತಿದೆ: 2021ರಲ್ಲಿ 13.8 ಕೋಟಿ ವೃದ್ಧರು ಭಾರತದಲ್ಲಿದ್ದು ಈ ಪೈಕಿ 6.7 ಕೋಟಿ ಪುರುಷರು ಹಾಗೂ 7.1 ಕೋಟಿ ಮಹಿಳೆಯರು ಎಂದು ಭಾರತ ಸರ್ಕಾರ ಅಂದಾಜು ಮಾಡಿದೆ. ಸುಮಾರು 60 ಲಕ್ಷ ಜನರಿಗೆ ಉಪಶಮನಕಾರಿ ಚಿಕಿತ್ಸೆ ಹಾಗೂ ಬದುಕಿನ ಅಂತಿಮ ದಿನಗಳ ಆರೈಕೆ ಅಗತ್ಯ ಪ್ರತಿವರ್ಷ ಉಂಟಾಗಬಹುದು ಎಂದೂ ಅಂದಾಜಿಸಲಾಗಿದೆ. ಹೀಗಿದ್ದೂ ಇಂತಹ ಆರೈಕೆಗಳನ್ನು ಪಡೆದುಕೊಳ್ಳುವ ಅವಕಾಶ ಇರುವವರು ಶೇಕಡ 1- 2ಕ್ಕಿಂತ ಕಡಿಮೆ. ಬಹುತೇಕ ಮಂದಿ ಆಸ್ಪತ್ರೆ ಆಧಾರಿತ ಪರಿಹಾರವನ್ನು ಆಶ್ರಯಿಸುತ್ತಾರೆ. ಇದು ಪರಿಣಾಮಕಾರಿಯಲ್ಲ, ಜೊತೆಗೆ ದುಬಾರಿ.

ಸುಮಾರು 30 ವರ್ಷಗಳ ಹಿಂದೆ ಭಾರತದ ಹಲವು ನಗರ ಪ್ರದೇಶಗಳಲ್ಲಿ ಎನ್‌ಜಿಒ ಹಾಗೂ ದಾನಧರ್ಮ ದತ್ತಿಸಂಸ್ಥೆಗಳು ನಡೆಸುವ ಉಪಶಮನಕಾರಿ ಚಿಕಿತ್ಸಾ ಕೇಂದ್ರಗಳು ಸ್ಥಾಪನೆಗೊಂಡವು. ನಂತರ 2012ರಲ್ಲಿ ಈ ಅಗತ್ಯವನ್ನು ಭಾರತ ಸರ್ಕಾರವೂ ಮನಗಂಡು ರಾಷ್ಟ್ರೀಯ ಆರೋಗ್ಯ ಅಭಿಯಾನದ ಭಾಗವಾಗಿ ಉಪಶಮನಕಾರಿ ಚಿಕಿತ್ಸಾ ಕಾರ್ಯಕ್ರಮವನ್ನು ಆರಂಭಿಸಿತು. ಆರೋಗ್ಯ ವ್ಯವಸ್ಥೆ, ಇತರ ಸಮುದಾಯ ಸಂಪನ್ಮೂಲಗಳು ಹಾಗೂ ರೋಗಿಯದೇ ಕುಟುಂಬದವರನ್ನು ಒಳಗೊಂಡಂತಹ ವಿಸ್ತೃತ ಬಹುಶಿಸ್ತೀಯ ವಿಧಾನವನ್ನು ಈ ಕಾರ್ಯಕ್ರಮವು ಅಳವಡಿಸಿಕೊಂಡಿದೆ. ಆದರೆ, ಈ ಯೋಜನೆಯು ಅನುಷ್ಠಾನದ ಮಾರ್ಗದರ್ಶಿಸೂತ್ರಗಳನ್ನು ಮಾತ್ರ ನೀಡುತ್ತದೆ, ಹೆಚ್ಚುವರಿ ಸಂಪನ್ಮೂಲಗಳನ್ನೇನೂ ನೀಡುವುದಿಲ್ಲ. ಹೀಗಾಗಿ ರಾಜ್ಯ ಮಟ್ಟದಲ್ಲಿ ಈ ಕಾರ್ಯಕ್ರಮದ ಪರಿಣಾಮ ಅಷ್ಟೇನೂ ಕಂಡುಬರುವುದಿಲ್ಲ.

ಉಪಶಮನಕಾರಿ ಹಾಗೂ ಬದುಕಿನ ಅಂತಿಮ ದಿನಗಳ ಆರೈಕೆ ಕಾರ್ಯಕ್ರಮದ ಯಶಸ್ವಿ ಮಾದರಿಯ ಗಮನಾರ್ಹ ಉದಾಹರಣೆ ಎಂದರೆ, 'ಕೇರಳ ಮಾದರಿ'. ವಿಶಿಷ್ಟವಾದಂತಹ ಸಮುದಾಯ ಆಧಾರಿತ ಮಧ್ಯಪ್ರವೇಶ ಇದು. ಪರಿಪೂರ್ಣವಾದ ಈ ಆರೈಕೆ ಕ್ರಮವು ಮನೆಯಲ್ಲೇ ಆರೈಕೆಯನ್ನು ಉಚಿತವಾಗಿ ಒದಗಿಸಿಕೊಡುತ್ತದೆ. ಇದು, ಕುಟುಂಬದ ಎಲ್ಲಾ ಸದಸ್ಯರು- ರೋಗಿಗಳು ಹಾಗೂ ಆರೈಕೆ ಮಾಡುವವರ ಯೋಗಕ್ಷೇಮ ನೋಡಿಕೊಳ್ಳುತ್ತದೆ. ಮಾನಸಿಕ, ಆಧ್ಯಾತ್ಮಿಕ ಹಾಗೂ ಆರ್ಥಿಕ ಬೆಂಬಲವನ್ನೂ ಒದಗಿಸಿಕೊಡುತ್ತದೆ. ಅಗತ್ಯ ಬಿದ್ದಲ್ಲಿ ಮನೆಗೆ ದಾದಿಯ ಸೇವೆ, ವೈದ್ಯಕೀಯ ಉಪಕರಣ ಒದಗಿಸಿಕೊಡುವುದು, ಆಸ್ಪತ್ರೆಗೆ ಹೋಗಲು ಸಾರಿಗೆ ಬೆಂಬಲ ಮತ್ತು ಆರೈಕೆ ನೀಡುವವರಿಗೆ ಮಾನಸಿಕ, ಸಾಮಾಜಿಕ ಬೆಂಬಲದ ಜೊತೆಗೆ ಆಪ್ತಸಲಹೆಯೂ ಸೇರುತ್ತವೆ. ಉಪಶಮನಕಾರಿ ಆರೈಕೆಗಾಗಿ ಕೇರಳವು 2022ರ ಬಜೆಟ್‌ನಲ್ಲಿ ಅನುದಾನ ತೆಗೆದಿರಿಸಿದೆ. ಜನಸಮುದಾಯದ ಕಿರುಕಾಣಿಕೆಗಳ ಮೂಲಕವೂ ಹಣ ಸಹಾಯ ಒದಗಿಸಲಾಗುವುದು.



ವಿವಿಧ ಕ್ಷೇತ್ರಗಳ ಅಸಂಖ್ಯ ಸ್ವಯಂಸೇವಕರ ಪ್ರಯತ್ನಗಳ ಮೇಲೆ ಕಟ್ಟಲಾದ ಕೇರಳ ಮಾದರಿಯು, ಬದುಕಿನ ಅಂತಿಮ ಹಂತಗಳಲ್ಲಿ ಸುಸ್ಥಿರ ರೀತಿಯಲ್ಲಿ ಬದುಕಿನ ಗುಣಮಟ್ಟವನ್ನು ಸುಧಾರಿಸುವುದು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದೆ.

ಇಂತಹ ಪ್ರಯತ್ನಗಳು ಹೆಚ್ಚು ವ್ಯಾಪಕವಾಗಿ ಲಭ್ಯವಾಗಬೇಕು. ಎದುರಿಸಬೇಕಾದ ಹಲವು ಸವಾಲುಗಳೂ ಇವೆ. ಮೊದಲಿಗೆ, ಭಾರತದಲ್ಲಿ ಕಾಲಕ್ರಮೇಣ, ರೋಗಿಯ ಆರೈಕೆಯ ತತ್ವ ಎಂದರೆ ಆರೈಕೆ ಒದಗಿಸುವುದಕ್ಕಿಂತ 'ಕಾಯಿಲೆ ವಾಸಿ ಮಾಡುವುದಕ್ಕೆ' ಹೆಚ್ಚಿನ ಗಮನ ಕೇಂದ್ರೀಕೃತವಾಗಿದೆ. ಇದರಿಂದಾಗಿ, ಬಹುದೊಡ್ಡ ಸಂಖ್ಯೆಯ ರೋಗಿಗಳು ಅನಗತ್ಯ ಹಾಗೂ ಆಕ್ರಮಣಕಾರಿ ವೈದ್ಯಕೀಯ ಹಸ್ತಕ್ಷೇಪಗಳಿಗೆ ಗುರಿಯಾಗುತ್ತಾರೆ; ಜೊತೆಗೆ ತಮ್ಮ ಪ್ರೀತಿಪಾತ್ರರ ಅಂತಿಮ ದಿನಗಳಲ್ಲಿ ಭರಿಸಲಾಗದ ಚಿಕಿತ್ಸಾ ವೆಚ್ಚದ ಕಾರಣದಿಂದಾಗಿ ವೈದ್ಯಕೀಯ ಸಲಹೆಗೆ ವಿರುದ್ಧವಾಗಿ ಬಹುತೇಕ ಶೇಕಡ 80ರಷ್ಟು ರೋಗಿಗಳನ್ನು ಐಸಿಯುನಿಂದ ರೋಗಿಯ ಕುಟುಂಬಸ್ಥರು ಮನೆಗೆ ಕರೆದೊಯ್ಯುತ್ತಾರೆ.


ಎರಡನೆಯದಾಗಿ, ಉಪಶಮನಕಾರಿ ಚಿಕಿತ್ಸೆ ಒದಗಿಸುವ ಸಾಮರ್ಥ್ಯವಿರುವ ತರಬೇತಾದ ಸಿಬ್ಬಂದಿಯ ತೀವ್ರ ಕೊರತೆ ಇದೆ. ಆರೈಕೆಯ ಈ ಮುಖ್ಯ ವಲಯದ ಬಗ್ಗೆ ವೈದ್ಯಕೀಯ ಪಠ್ಯಗಳು ಹೆಚ್ಚಿನ ಗಮನವನ್ನೇ ನೀಡಿಲ್ಲ. ಸಮುದಾಯ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ಕಾರ್ಯಕ್ರಮಗಳು ಇದ್ದರೂ ಇದನ್ನು ಇನ್ನೂ ಹೆಚ್ಚು ವಿಸ್ತರಿಸುವ ಅಗತ್ಯ ಇದೆ. ಮೂರನೆಯದಾಗಿ, ಉಪಶಮನಕಾರಿ ಆರೈಕೆಗೆ ಹಣಕಾಸು ಸಂಗ್ರಹ ಹಾಗೂ ಸೇವಾಸೌಲಭ್ಯ ನೀಡಿಕೆಯಲ್ಲಿನ ಸ್ವಯಂಸೇವೆಯ ಚೈತನ್ಯವನ್ನು ಕೊಂಡಾಡಬಹುದಾದರೂ ವಿಭಿನ್ನ ಸನ್ನಿವೇಶಗಳಲ್ಲಿ ಇದನ್ನೇ ಪುನರಾವರ್ತಿಸುವುದು ಕಷ್ಟ.

ಉಪಶಮನಕಾರಿ ಆರೈಕೆ ಘಟಕಗಳ ಕಾರ್ಯ ಚಟುವಟಿಕೆಗಳಿಗೆ ಬಹಳಷ್ಟು ಹಣವನ್ನು ಸರ್ಕಾರ ಹಂಚಿಕೆ ಮಾಡಬೇಕು. ಅಲ್ಲದೆ ಇದನ್ನು ನಿಜಕ್ಕೂ ಸುಸ್ಥಿರವಾಗಿಸಲು ಈ ಸೇವೆಗಳನ್ನು ಒದಗಿಸುತ್ತಿರುವ ಸ್ವಯಂಸೇವಕರಿಗೆ ಒಂದಿಷ್ಟು ಅನುಕೂಲಗಳನ್ನು ಒದಗಿಸಬೇಕು. ಅಂತಿಮವಾಗಿ, ರೋಗಿಗಳಿಗೆ ವಿಷಯ ಸಂವಹನ ಮಾಡಲು ವೈದ್ಯರು ಹಾಗೂ ಇತರ ವೈದ್ಯಕೀಯ ತಜ್ಞರು ಸಮಯ ತೆಗೆದುಕೊಂಡು ಅವರಿಗಿರುವ ಆಯ್ಕೆಗಳ ಬಗ್ಗೆ ಮಾಹಿತಿ ನೀಡಬೇಕು. ಉಪಶಮನಕಾರಿ ಚಿಕಿತ್ಸೆ ಕುರಿತಾದ ಅರಿವು ಈಗಲೂ ಸೀಮಿತವಾಗಿದ್ದು, ಅಂತಹ ಸೇವೆಗಳ ಲಭ್ಯತೆಯ ಕುರಿತಾದ ಜಾಗೃತಿಯಂತೂ ಇನ್ನೂ ಕಡಿಮೆ ಇದೆ.

ಪ್ರೀತಿಪಾತ್ರರನ್ನು ಕಳೆದುಕೊಂಡು ಅಪಾರ ದುಃಖ ಅನುಭವಿಸಿರುವವರಿಗೆ, ಅವರ ಅಂತಿಮ ದಿನಗಳಲ್ಲಿ ಆರೈಕೆ ಮಾಡುವ ಕಷ್ಟ ಹಾಗೂ ಕಡೆಗೆ ಉಳಿದುಕೊಳ್ಳಬಹುದಾದ ಪ್ರಶ್ನೆಗಳೂ ಗೊತ್ತಿರುವಂತಹವು. 'ನಾವು ಸಾಧ್ಯವಿದ್ದಂತಹ ಅತ್ಯುತ್ತಮ ಆರೈಕೆ ಒದಗಿಸಿದೆವೇ? ಭಿನ್ನ ರೀತಿಯಲ್ಲಿ ಇನ್ನೇನಾದರೂ ಮಾಡಬಹುದಿತ್ತೇ? ನಾವು ಸರಿಯಾಗಿ ನೋಡಿಕೊಂಡೆವೇ?'

ಇಂತಹ ಸಮಯದಲ್ಲಿ ಯಾತನೆ ಅನುಭವಿಸುತ್ತಿರುವ ರೋಗಿ ಹಾಗೂ ನಂತರ ಪ್ರೀತಿಪಾತ್ರರನ್ನು ಕಳೆದುಕೊಳ್ಳುವ ಕುಟುಂಬಕ್ಕೆ ಅಪಾರ ಸಾಂತ್ವನ ಒದಗಿಸಲು ಉಪಶಮನಕಾರಿ ಚಿಕಿತ್ಸೆ ಕಾರ್ಯಕ್ರಮದ ಲಭ್ಯತೆಯ ಅವಕಾಶ ಮುಖ್ಯವಾಗುತ್ತದೆ.

ಚುರುಮುರಿ



ಎಣ್ಣೆ ಏಟು

• ಸಿ.ಎನ್.ರಾಜು

'ರೀ, ನಿಮ್ಮ ಮನೆ ಒಗ್ಗರಣೆ ಸೌಂಡಿನಿಂದ ನಮ್ಮ ಮಗಳ ಓದಿಗೆ ಡಿಸ್ಟರ್ಬ್ ಆಗುತ್ತೆ, ಒಗ್ಗರಣೆಯ ಸಾಸಿವೆ ಸಿಡಿತ ಕೇಳಿದ್ರೆ ನನ್ನ ಹೊಟ್ಟೆಯಲ್ಲಿ ಬಾಂಬ್ ಸಿಡಿದಂತಾಗುತ್ತೆ. ನೀವು ಒಗ್ಗರಣೆ ಹಾಕಕೂಡದು...' ಪಕ್ಕದ ಮನೆ ಪದ್ಮಾ ಬಂದು ಅನುಗೆ ವಾರ್ನಿಂಗ್ ಕೊಟ್ಟಳು.

'ನಮ್ಮ ಮನೆ ಒಗ್ಗರಣೆಗೆ ನಿಮ್ಮ ಅಪ್ಪಣೆ ಬೇಕಿಲ್ಲ, ನಿಮ್ಮ ಒಗ್ಗರಣೆಗೆ ನಾನು ಯಾವತ್ತಾದ್ರೂ ಆಕ್ಷೇಪ ಮಾಡಿದ್ದೀನಾ?' ಅನು ತಿರುಗಿಸಿ ಹೇಳಿದಳು.

'ನಮ್ಮದು ಒಗ್ಗರಣೆ ಇಲ್ಲದ ಸಂಸಾರ. ಮಗಳ ಪರೀಕ್ಷೆ, ರಷ್ಯಾ- ಉಕ್ರೇನ್ ಯುದ್ಧ ಮುಗಿಯುವವರೆಗೂ ಎಣ್ಣೆಯನ್ನು ಅವಾಯ್ಡ್ ಮಾಡಿದ್ದೇವೆ'.

'ಎಣ್ಣೆ ರೇಟಿನ ಏಟಿನಿಂದ ನಿಮಗೆ ತಲೆ ಕೆಟ್ಟಿದೆ, ಡಾಕ್ಟರ್ ಹತ್ರ ಹೋಗಿ ಟ್ರೀಟ್‌ಮೆಂಟ್ ತಗೊಳ್ಳಿ...' ಅನು ಸಿಟ್ಟಿಗೆದ್ದಳು.

'ನನಗೇನು ತಲೆ ಕೆಟ್ಟಿಲ್ಲ, ಎಣ್ಣೆ ಪದಾರ್ಥ ತಿಂದು ನಿಮಗೆ ಕೊಬ್ಬು ಜಾಸ್ತಿಯಾಗಿದೆ...' ಪದ್ಮಾ ರೇಗಿದಳು.

'ಸಾಸಿವೆ ಸಿಡಿಯುವಷ್ಟಾದ್ರೂ ಒಗ್ಗರಣೆಗೆ ಎಣ್ಣೆ ಹಾಕುವುದು ಬೇಡ್ವೇನ್ರೀ?'

'ಬೇಕಾಗೊಲ್ಲ, ಬೆಲೆ ಇಳಿಯುವವರೆಗೂ ಎಣ್ಣೆಯ ಸಹವಾಸ ಬೇಡ ಅಂತ ನಾನು ಆಯಿಲ್‌ಲೆಸ್ ಅಡುಗೆ ಮಾಡುತ್ತಿದ್ದೇನೆ. ಮನೆಗೆ ಅತಿಥಿಗಳು ಬಂದಾಗ ಅವರಿಗಾಗಿ ಎಣ್ಣೆಯಲ್ಲಿ ವಡೆ, ಬೋಂಡ ತೇಲಿಸಿದರೆ ನಾವು ಮುಳುಗಿಬಿಡ್ತೀವಿ ಅಂತ ನನ್ನ ಗಂಡ ಬಾಣಲಿ, ಜಾಲರಿಯನ್ನು ಅಟ್ಟದ ಮೇಲಿಟ್ಟಿದ್ದಾರೆ'.

'ನಮಗೆ ಆಯಿಲ್‌ಲೆಸ್ ಅಡುಗೆ ರುಚಿಸುವುದಿಲ್ಲ...'

'ಕೊನೆಯದಾಗಿ ಹೇಳ್ತೀನಿ, ನಿಮ್ಮ ಮನೆ ಒಗ್ಗರಣೆ ಸೌಂಡು, ಘಾಟು ನಮ್ಮ ಮನೆ ಕಡೆ ಬರಕೂಡದು'.

'ಹಾಗಂತ ಕಿಟಕಿ, ಬಾಗಿಲು ಹಾಕಿಕೊಂಡು ಒಗ್ಗರಣೆ ಹಾಕಲಾಗುತ್ತಾ?'

'ಏನಾದ್ರೂ ಮಾಡಿಕೊಳ್ಳಿ, ನಮ್ಮ ಮಗಳ ಮೆಡಿಕಲ್ ಸೀಟು ಮಿಸ್ಸಾದ್ರೆ ಅದಕ್ಕೆ ನಿಮ್ಮ ಒಗ್ಗರಣೆಯೇ ಕಾರಣ ಅಂತ ನಿಮ್ಮ ವಿರುದ್ಧ ಮಾನವ ಹಕ್ಕು ಉಲ್ಲಂಘನೆ ಕೇಸ್ ಹಾಕ್ತೀನಿ, ಹುಷಾರು...' ಪದ್ಮಾ ಎಚ್ಚರಿಸಿ ಹೋದಳು.

ದಿನದ ಟ್ವೀಟ್

ತಪ್ಪು ನಡೆ



ಧರ್ಮದ ಆಧಾರದ ಮೇಲೆ ಯಾವುದೇ ಸಮುದಾಯದವರು ಇನ್ಯಾವುದೇ ಸಮುದಾಯದ ಮೇಲೆ ವ್ಯಾಪಾರ ನಿರ್ಬಂಧ ಹಾಕುವುದು ವ್ಯಾಪಾರ ಧರ್ಮಕ್ಕೆ ವಿರುದ್ಧವಾದುದು. ತಪ್ಪು ನಡೆ. ಸಮಾಜದಲ್ಲಿ ಸಮಸ್ಯೆಗಳಿರುವುದು ನಿಜ. ಪರಿಹಾರ ಸುಲಭವಾಗಿಲ್ಲ ಎನ್ನುವುದೂ ನಿಜ. ಆದರೆ ವ್ಯಾಪಾರ ನಿರ್ಬಂಧವು ಸಮಸ್ಯೆ ಮತ್ತು ಪರಿಹಾರ ಎರಡನ್ನೂ ಜಟಿಲಗೊಳಿಸುತ್ತದೆಯೇ ಹೊರತು ಒಂದನ್ನೂ ಹಗುರಗೊಳಿಸುವುದಿಲ್ಲ.

ಹರೀಶ ಕುಲಕರ್ಣಿ, ನಾಗರಿಕ

ಕಿಡಿನುಡಿ



ಮಂಗಳೂರು ಸಮೀಪದ ಕುಗ್ರಾಮವೊಂದರಲ್ಲಿ ನಾನು ವಾಸಿಸುತ್ತಿದ್ದೇನೆ. ಮನೆ ನಿರ್ಮಾಣಕ್ಕೆ ಬರುವ ಮೇಸ್ತ್ರಿಯ ಸಹಾಯಕ ಇಲ್ಲಿ ₹ 650 ದಿನಗೂಲಿ ಪಡೆಯುತ್ತಾನೆ. ಅವನು ಐದು ದಿನಗಳಿಗೆ ಪಡೆಯುವ ಕೂಲಿಯು ತುಳು ಶಿಕ್ಷಕರ ಇಡೀ ತಿಂಗಳ ವೇತನವಾಗಿರುತ್ತದೆ, ಅದರ ಪಾವತಿ ಕೂಡ 30 ತಿಂಗಳುಗಳಿಂದ ಬಾಕಿ ಇದೆ. ಇದು, ರಾಜಕಾರಣಿಗಳು, ತುಳುವರು ಮತ್ತು ಕರ್ನಾಟಕಕ್ಕೆ ಅವಮಾನಕರ.

ಮಹಿ ಮುಲ್ಕಿ, ಬರಹಗಾರ

25 ವರ್ಷಗಳ ಹಿಂದೆ

ಸೋಮವಾರ, 24-3-1997

• **ಆಲಮಟ್ಟಿ: ಮಾತುಕತೆ ಮೂಲಕ ಇತ್ಯರ್ಥಕ್ಕೆ ಪ್ರಧಾನಿ ಸಲಹೆ**

ಬೆಂಗಳೂರು, ಮಾ. 23– ಆಲಮಟ್ಟಿ ಅಣೆಕಟ್ಟೆ ವಿಚಾರದಲ್ಲಿ ಬಚಾವತ್ ನ್ಯಾಯಮಂಡಳಿ ಈಗಾಗಲೇ ನೀಡಿರುವ ತೀರ್ಪಿಗೆ ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳು ಎರಡೂ ಬದ್ಧವಾಗಿವೆ. ಅದರಲ್ಲಿ ಸರಿ ತಪ್ಪುಗಳ ಏನೇ ಭಾವನೆಗಳಿದ್ದರೂ ಎರಡೂ ರಾಜ್ಯಗಳ ಮುಖಂಡರು ಪರಸ್ಪರ ಚರ್ಚೆ ಮೂಲಕವೇ ಇತ್ಯರ್ಥ ಮಾಡಿಕೊಳ್ಳಬೇಕು ಎಂದು ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಇಂದು ಇಲ್ಲಿ ಸೂಚಿಸಿದರು.

'ಆಲಮಟ್ಟಿ ವಿಚಾರದಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶದ ನಿಲುವು ಏನಿದೆ, ಅದು ಎರಡೂ ರಾಜ್ಯಗಳಿಗೆ ಬಿಟ್ಟಿದ್ದು. ಕೇಂದ್ರ ಸರ್ಕಾರ ಎಂದೂ ಇದರಲ್ಲಿ ಸೇರಿಲ್ಲ ಅಥವಾ ಭಾಗಿಯಾಗಿಲ್ಲ. ಜಲಸಂಪನ್ಮೂಲ ಖಾತೆ ಸಚಿವಾಲಯವೂ ಇದರಲ್ಲಿ ಸೇರಿಲ್ಲ' ಎಂದು ಸ್ಪಷ್ಟಪಡಿಸಿದರು.

• **ಪಾಕಿಸ್ತಾನದ ಜತೆ ಚರ್ಚೆಗೆ ಫಾರೂಕ್ ಷರತ್ತು**

ಉಧಾಂಪುರ, ಮಾ. 23 (ಪಿಟಿಐ)– ಜಮ್ಮು ಮತ್ತು ಕಾಶ್ಮೀರ 'ಭಾರತದ ಅವಿಭಾಜ್ಯ ಅಂಗ'ವೆಂದು ಪಾಕಿಸ್ತಾನ ಒಪ್ಪಿಕೊಳ್ಳದ ಹೊರತು ಆ ದೇಶದ ಜೊತೆ ನಡೆಸುವ ಯಾವುದೇ ಮಾತುಕತೆ ಅರ್ಥಹೀನ ಎಂದು ಕಾಶ್ಮೀರದ ಮುಖ್ಯಮಂತ್ರಿ ಡಾ. ಫಾರೂಕ್ ಅಬ್ದುಲ್ಲಾ ಅಭಿಪ್ರಾಯಪಟ್ಟಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 24-3-1972

• **ಅರಸುಗೆ ಗೃಹ ಖಾತೆ; ಕೃಷ್ಣ- ಕೈಗಾರಿಕೆ, ಸಿದ್ದವೀರಪ್ಪ- ಆರೋಗ್ಯ**

ಬೆಂಗಳೂರು, ಮಾ. 23– ಶ್ರೀ ದೇವರಾಜ ಅರಸು ಅವರ ನಾಯಕತ್ವದಲ್ಲಿ ರಾಜ್ಯದ ಜನತೆಯ ಅಪಾರ ಆತ್ಮೀಯ ವಿಶ್ವಾಸ ಪಡೆದ ಆಡಳಿತ ಕಾಂಗ್ರೆಸ್ ಪಕ್ಷದ 22 ಮಂದಿ ಸದಸ್ಯರ ಮಂತ್ರಿಮಂಡಲ ಇಂದು ಅಧಿಕಾರ ವಹಿಸಿಕೊಂಡಿತು.

ಮುಖ್ಯಮಂತ್ರಿ ಶ್ರೀ ಅರಸು, ಸರ್ವಶ್ರೀ ಎಚ್.ಎಂ.ಚನ್ನಬಸಪ್ಪ ಹಾಗೂ ಕೆ.ಎಚ್. ಪಾಟೀಲ್ ಅವರುಗಳು ಕಳೆದ 20 ರಂದು ಪ್ರಮಾಣವಚನ ಸ್ವೀಕರಿಸಿದ್ದು ಉಳಿದ 10 ಮಂದಿ ಸಚಿವರು ಹಾಗೂ 9 ಮಂದಿ ರಾಜ್ಯ ಸಚಿವರು ಇಂದು ಪ್ರಮಾಣವಚನ ಸ್ವೀಕರಿಸಿದರು.

ಸಚಿವರು: ಎಚ್.ಸಿದ್ದವೀರಪ್ಪ, ಬಿ.ಬಸವಲಿಂಗಪ್ಪ, ಎಂ.ಮಲ್ಲಿಕಾರ್ಜುನಸ್ವಾಮಿ, ಎ.ಆರ್. ಬದರೀ ನಾರಾಯಣ್, ಶಂಕರ ಆಳ್ವ, ಎನ್. ಹುಚ್ಚಮಾಸ್ತಿ ಗೌಡ, ಅಜೀಜ್ ಸೇಠ್, ಎಂ.ವೈ.ಘೋರ್ಪಡೆ, ಎಸ್.ಎಂ.ಕೃಷ್ಣ, ಡಿ.ಕೆ. ನಾಯಕರ್.

ರಾಜ್ಯ ಸಚಿವರು: ವಿ.ಎಸ್.ಕೌಜಲಗಿ, ಆರ್.ಡಿ.ಕಿತ್ತೂರ್, ದೇವೇಂದ್ರಪ್ಪ ಘಾಳಪ್ಪ, ಶಿವಣ್ಣ ಭೀಮಪ್ಪ ಕಲಮಲ, ಕೆ.ಟಿ. ರಾಥೋಡ್, ಎನ್.ಚಿಕ್ಕೇಗೌಡ, ಎಚ್.ಎನ್. ನಂಜೇಗೌಡ, ಶ್ರೀಮತಿ ಈವಾವಾಸ್, ಸಂಗಪ್ಪ ನಗರಾಳ.

ಸಂಗತ

'ಔಷಧಿ' ಬೇಕಾಗಿದೆ ಅಪ್ಪ- ಅಮ್ಮನಿಗೆ!

ಶಾಲಾ ಕಾಲೇಜು 'ಪರೀಕ್ಷಾ ಜ್ವರ'ದಿಂದ ಮಕ್ಕಳಿಗಿಂತ ಹೆಚ್ಚಾಗಿ ಬಳಲುತ್ತಿರುವ ಅಪ್ಪ- ಅಮ್ಮ, ಒತ್ತಡ ನಿರ್ವಹಣೆಯ ಕೌಶಲವನ್ನು ಅರಿಯಬೇಕಿದೆ

• ಡಾ. ಕೆ.ಎಸ್.ಪವಿತ್ರ

ಕೋವಿಡ್ ಪಾಸಿಟಿವ್, ನೆಗೆಟಿವ್ ಎಂದು ತಲೆಕೆಡಿಸಿಕೊಳ್ಳುತ್ತಿದ್ದ ಅಪ್ಪ-ಅಮ್ಮ-ಶಾಲೆಗಳು ಈಗ ಪರೀಕ್ಷೆಯಲ್ಲಿ ಮಕ್ಕಳ ಅಂಕ, ಪಾಸಾ, ಫೇಲಾ ಎಂಬ ಬಗ್ಗೆ ಚಿಂತಿಸುವ ಧಾವಂತದಲ್ಲಿದ್ದಾರೆ. ಆನ್‌ಲೈನ್ ಪಾಠ ನಡೆದಿದ್ದರೂ, ಆನ್‌ಲೈನ್ ಪರೀಕ್ಷೆಗಳಿಗೂ ಆಫ್‌ಲೈನ್ ಪರೀಕ್ಷೆಗಳಿಗೂ ಇರುವ ವ್ಯತ್ಯಾಸವಂತೂ ಈಗ ಮತ್ತಷ್ಟು ಸ್ಪಷ್ಟವಾಗುತ್ತಿದೆ.

ಇತ್ತೀಚೆಗೆ ಹೊರಬಿದ್ದ ಸಿಬಿಎಸ್‌ಇ ಮೊದಲ ಹಂತದ ಹತ್ತನೇ ತರಗತಿಯ ಫಲಿತಾಂಶವನ್ನೇ ನೋಡಬಹುದು. ಪರೀಕ್ಷೆ ಆನ್‌ಲೈನ್ ಇದ್ದಾಗ 40ಕ್ಕೆ 40 ಅಂಕ ತೆಗೆದ ಕೆಲ ವಿದ್ಯಾರ್ಥಿಗಳು ಈಗ ತೆಗೆದಿರುವುದು 4-5 ಅಂಕಗಳನ್ನಷ್ಟೆ! ಆನ್‌ಲೈನ್ ಕ್ಲಾಸು, ಆನ್‌ಲೈನ್ ಪರೀಕ್ಷೆಗಳ ಜೊತೆಗೆ ಆನ್‌ಲೈನ್ ಕಾಪಿ ಹೊಡೆಯುವ ವಿಧಾನಗಳ ಬಗೆಗೂ ನಾವು ಅಧ್ಯಯನ ಮಾಡಲೇಬೇಕಾದ ಪರಿಸ್ಥಿತಿ!

ದೇಶದ ಬಹುತೇಕ ಶಾಲೆಗಳು ನೇರವಾಗಿ ಆರಂಭವಾಗಿದ್ದರೂ 'ಆನ್‌ಲೈನ್' ಎಂಬ ಆಯ್ಕೆಯನ್ನೂ ನೀಡಲಾಗಿದೆ. ನಗರಗಳಲ್ಲಿ ಶಾಲಾ ಬಸ್ಸುಗಳಲ್ಲೇ ಮಕ್ಕಳನ್ನು ಕಳಿಸುತ್ತಿದ್ದ ತಂದೆ-ತಾಯಿಗಳಿಗೆ ಈಗ ಹೊಸ ತಲೆನೋವು. ಶಾಲಾ ಬಸ್ಸುಗಳು ಬಹುಕಡೆಗಳಲ್ಲಿ ಇನ್ನೂ ಆರಂಭವಾಗಿಲ್ಲ. ಏಕೆ? ಶಾಲೆಗಳಿಗೆ ಬರಬೇಕಾದ 'ಫೀಸು' ಬಂದಿಲ್ಲ. ಫೀಸು ಕಟ್ಟಬಹುದಾದ ಅಪ್ಪ-ಅಮ್ಮ ಯೋಚನೆ ಮಾಡಿದ್ದು 'ಇನ್ನು ಕೆಲ ತಿಂಗಳಿಗೆ ಫೀಸು ಕಟ್ಟುವುದಾದರೂ ಏಕೆ?' ಹಾಗೆಂದು ಬೆಂಗಳೂರಿನಂತಹ ನಗರಗಳಲ್ಲಿ ಶಾಲೆಗೆ-ಮನೆಗೆ ಮಕ್ಕಳನ್ನು ಬಿಡುವುದು, ಕರೆತರುವುದು ಸುಲಭಸಾಧ್ಯವೇ? ಹಾಗಾಗಿ ಇನ್ನೂ ಬಹುಮಕ್ಕಳು ಆನ್‌ಲೈನ್ ಶಾಲೆಯಲ್ಲಿಯೇ ಓದುತ್ತಿದ್ದಾರೆ.


ಶಾಲೆ ಆನ್‌ಲೈನ್- ಆಫ್‌ಲೈನ್ ಏನೇ ಆಗಲಿ, 'ಪರೀಕ್ಷೆ'ಯ ಗೀಳು ಮಾತ್ರ ನಮ್ಮನ್ನು ಬಿಟ್ಟಿಲ್ಲ. ಶಾಲೆಗಳಿಗೂ ಪರೀಕ್ಷೆ ಬೇಕೇ ಬೇಕು. ಏಕೆಂದರೆ ಫೀಸು ಕಟ್ಟಲು ಬಡಪೆಟ್ಟಿಗೆ ಕೇಳದ ಅಪ್ಪ-ಅಮ್ಮ, ಪರೀಕ್ಷೆಯ ಹಾಲ್ ಟಿಕೆಟ್ ಕೊಡುವುದಿಲ್ಲ ಎಂದರೆ, ಫೀಸು ಕಟ್ಟಲು ಮುಂದಾಗುತ್ತಾರೆ. ಹೀಗಾಗಿ ಪರೀಕ್ಷೆ ಎಂಬುದು ಮಕ್ಕಳ ಕಲಿಕೆಗೆ ಬೇಕೋ ಬೇಡವೋ ಆದರೆ ಶಾಲೆಗಳಿಗೆ ಮತ್ತು ಅಪ್ಪ-ಅಮ್ಮನಿಗಂತೂ ಬೇಕೇ ಬೇಕು!

ಕೋವಿಡ್‌ಗೆ ಮೊದಲೂ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿನ ಪರೀಕ್ಷಾ ಕ್ರಮಗಳ ಬಗ್ಗೆ ಹಲವು ಚರ್ಚೆಗಳು ನಡೆದಿವೆ. ಕೋವಿಡ್ ನಂತರದ ದಿನಗಳಲ್ಲಿ ಈ ಪ್ರಶ್ನೆಗಳು ಮತ್ತಷ್ಟು ಜಟಿಲವಾಗಿವೆ. ಹೊಸ ಸವಾಲುಗಳನ್ನು ನಮ್ಮ ಮುಂದಿಡುತ್ತವೆ.

ಈ ಹಿಂದೆ ಪರೀಕ್ಷೆಯ ಹಿಂದಿನ ದಿನಗಳಲ್ಲಿ ಮನೋವೈದ್ಯರ ಬಳಿ ಬರುವ ಮಕ್ಕಳ ಸಂಖ್ಯೆ ಹಠಾತ್ ಏರುತ್ತಿತ್ತು. ತಲೆನೋವು, ಪರೀಕ್ಷಾ ಭಯ, ವಾಂತಿ, ಸತತ ಅಳುವಿನಂತಹ ವಿವಿಧ ಸಮಸ್ಯೆಗಳು ಮಕ್ಕಳಲ್ಲಿ ಕಂಡುಬರುತ್ತಿದ್ದವು. ಕಳೆದ ಎರಡು ವರ್ಷಗಳಲ್ಲಿ ಆನ್‌ಲೈನ್ ಪರೀಕ್ಷೆಗಳು- ಹಾಗೆಯೇ 'ಪಾಸ್' ಎಂಬ ಕಾರಣಗಳಿಂದ ಇರಬಹುದು, ಈ ಸಂಖ್ಯೆ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಗಿತ್ತು. ಆದರೆ ಪ್ರಸ್ತುತ ಪರಿಸ್ಥಿತಿ ಅದು 'ಬಿರುಗಾಳಿಯ ಮುನ್ನ ತೋರುವ ಮೇಲ್ನೋಟದ ಸ್ತಬ್ಧತೆ'ಯಷ್ಟೇ ಎಂದು ತಿಳಿಯಪಡಿಸುತ್ತಿದೆ.

ಹೆಚ್ಚಿನ ಶಾಲೆಗಳು ಆನ್‌ಲೈನ್ ಪರೀಕ್ಷೆ ನಡೆಸುತ್ತಿದ್ದದ್ದು ಹೇಗೆ? ಪ್ರಶ್ನೆಪತ್ರಿಕೆಯನ್ನು ವಾಟ್ಸ್‌ಆ್ಯಪ್‌ನಲ್ಲಿ ಅಥವಾ ಗೂಗಲ್ ಕ್ಲಾಸ್ ರೂಂನಲ್ಲಿ ಹಾಕುವುದು, ನಿಗದಿತ ಅವಧಿಯಲ್ಲಿ ಮಕ್ಕಳು ಉತ್ತರಿಸಿ 'ಅಪ್‌ಲೋಡ್' ಮಾಡಬೇಕು ಅಥವಾ ನಿರ್ದಿಷ್ಟ ದಿನದಂದು ಅಪ್ಪ-ಅಮ್ಮ ಅದನ್ನು ಶಾಲೆಗೆ ಹೋಗಿ ನೀಡಬೇಕು. ಸಾಮಾನ್ಯವಾಗಿ ಆನ್‌ಲೈನ್ ಪರೀಕ್ಷೆಗಳಲ್ಲಿ ನಡೆಯುವುದು-ಅಪ್ಪ-ಅಮ್ಮಂದಿರ ಪರೀಕ್ಷೆ!

'ಅಂಕಗಳು ಹೇಗಾದರೂ ಬಂದರೆ ಸಾಕು' ಎಂಬ ಚಡಪಡಿಕೆಯಲ್ಲಿ ಅಪ್ಪ-ಅಮ್ಮ ಉತ್ತರ ಹೇಳಿಕೊಡುವುದು, ಪುಸ್ತಕವನ್ನೇ ಮುಂದಿಟ್ಟು 'ಓಪನ್ ಬುಕ್ ಪರೀಕ್ಷಾ ವ್ಯವಸ್ಥೆ'ಯಾಗಿಸಿಬಿಡುವುದು ಇವು ಹೆಚ್ಚಿನ ಮಕ್ಕಳಿಗೆ ಅಪ್ಪ-ಅಮ್ಮ ಪರೀಕ್ಷೆಯಲ್ಲಿ ಸಹಾಯ ಮಾಡಿರಬಹುದಾದ ವಿಧಗಳು. ಇದರ ನೇರ ಪರಿಣಾಮವೆಂದರೆ, ಇದೀಗ ಪರೀಕ್ಷೆಯನ್ನು ನೇರವಾಗಿ, ಶಾಲೆಗೆ ಬಂದು, ಶಿಕ್ಷಕರ ಎಚ್ಚರದ ಕಣ್ಣುಗಳ ಮುಂದೆ ಬರೆಯುತ್ತಿರುವ ಮಕ್ಕಳಲ್ಲಿ ಅತೀವವಾಗಿ ಹೆಚ್ಚಿರುವ ಆತಂಕ. ಬರೆಯುವ ಕೌಶಲ ಮಕ್ಕಳಲ್ಲಿ ಕಡಿಮೆಯಾಗಿರುವುದರ ಬಗೆಗಿನ ಆತಂಕ ನಮ್ಮನ್ನು ಈಗಾಗಲೇ ಕಾಡಿದೆ. ಅದರೊಂದಿಗೆ 'ಪರೀಕ್ಷಾ ಕೌಶಲ'ಗಳ ಕೊರತೆಯೂ ಮಕ್ಕಳನ್ನು ಕಾಡತೊಡಗಿದೆ.



ಎರಡೂವರೆ ಗಂಟೆಗಳಲ್ಲಿ ಬರೆಯಲಾಗುತ್ತಿದ್ದ ಪರೀಕ್ಷೆಯ ಅರ್ಧ ಪತ್ರಿಕೆಯನ್ನೂ ಇಂದು ಪೂರ್ಣ ಮಾಡಲು ಮಕ್ಕಳಿಗೆ ಕಷ್ಟ ಎನಿಸುತ್ತಿದೆ. ಹಾಗಾಗಿಯೇ 'ಸಿಬಿಎಸ್‌ಇ ಪರೀಕ್ಷೆಯನ್ನೇ ನಡೆಸಬಾರದು' ಎಂಬ ಮನವಿಯನ್ನು ಕೋರ್ಟಿಗೆ ಕೆಲ ಮಕ್ಕಳು ಮಾಡಿರುವುದು! (ಆ ಮನವಿಯನ್ನು ನ್ಯಾಯಾಲಯ ಪುರಸ್ಕರಿಸಲಿಲ್ಲ ಎಂಬುದು ಗಮನಾರ್ಹ).

ಹಾಗಿದ್ದರೆ ಮಾಡಬೇಕಾದ್ದೇನು? ಕೋವಿಡ್ ನಂತರ ಆರೋಗ್ಯ- ಆರ್ಥಿಕತೆ- ಸಮಾಜ ಚೇತರಿಸಿಕೊಳ್ಳಲು ಸಮಯ ಬೇಕಷ್ಟೆ. ಹಾಗೆಯೇ ಶಿಕ್ಷಣ ವ್ಯವಸ್ಥೆಯೂ! ಮಕ್ಕಳಿಗೂ ಕಲಿಕೆಗೆ ಸಮಯವೂ ಬೇಕು, ಸಹಾಯವೂ ಬೇಕು. ಅಪ್ಪ ಅಮ್ಮ ನೆರವಾಗಬೇಕಾದ್ದು ಪರೀಕ್ಷೆಗಿಂತ ಹೆಚ್ಚಾಗಿ ಕಲಿಕೆಯಲ್ಲಿ ಎಂಬುದನ್ನು ನಾವು ಮನಗಾಣಬೇಕು. ಹಾಗಾಗಿ ಮಕ್ಕಳ ಪರೀಕ್ಷೆಗಳನ್ನು ಒಂದಿಷ್ಟು ಸಹಾನುಭೂತಿಯಿಂದ ನೋಡುವ, ತಾವೂ ಒತ್ತಡಕ್ಕೆ ಒಳಗಾಗಿ, ಅವರನ್ನೂ ಒತ್ತಡಕ್ಕೆ ತಳ್ಳುವುದನ್ನು ತಡೆಯುವ ಕೌಶಲಗಳು ಅಪ್ಪ- ಅಮ್ಮಂದಿರಿಗೆ ಇಂದು ಹಿಂದೆಂದಿಗಿಂತ ಹೆಚ್ಚು ಬೇಕು.

ವಾಚಕರ ವಾಣಿ

ಧರ್ಮಭೇದ, ರಾಜಕೀಯ ಮೇಲಾಟ ಬೇಡ

ಎಲ್ಲೆಡೆ ಜಾತ್ರೆಯ ಸಂಭ್ರಮ ಆರಂಭವಾಗಿದೆ. ಜಾತ್ರೆಯಲ್ಲಿನ ವ್ಯಾಪಾರವು ಎಷ್ಟೋ ಕುಟುಂಬಗಳ ಜೀವನಕ್ಕೆ ಆಧಾರವಾಗಿರುತ್ತದೆ. ಆದರೆ ಕರಾವಳಿಯಲ್ಲಿ ಧರ್ಮದ ದಳ್ಳುರಿ ತಲೆ ಎತ್ತಿದೆ. ಧರ್ಮದ ಹೆಸರಿನಲ್ಲಿ ಮೂಡಿಸಿರುವ ವಿರಸ ಇತರ ಜಿಲ್ಲೆಗಳಿಗೂ ವ್ಯಾಪಿಸುತ್ತಿದೆ. ವ್ಯಾಪಾರಕ್ಕೆ ಜಾತಿ, ಮತವು ಸಮಸ್ಯೆ ಆಗಬಾರದು. ಆದರೆ ಹಿಂದೂ ದೇವಾಲಯಗಳ ಮುಂದೆ ಮುಸ್ಲಿಮರ ವ್ಯಾಪಾರಕ್ಕೆ ತಡೆ ಒಡ್ಡಲಾಗುತ್ತಿದೆ. ಈ ಬಗೆಯ ಭೇದಭಾವದ ನಡೆ ಜನರಲ್ಲಿ ಬಿರುಕು ಮೂಡಿಸುತ್ತದೆ. ಸಮಾಜದಲ್ಲಿ ಶಾಂತಿ ಕದಡಲು ಕಾರಣವಾಗುತ್ತದೆ. ದೇಗುಲದ ಆಡಳಿತ ಮಂಡಳಿಯವರು ಧರ್ಮಭೇದ ಮಾಡಬಾರದು. ಶಾಂತಿ– ಸುವ್ಯವಸ್ಥೆಗೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕು. ಇದರಲ್ಲಿ ಎಲ್ಲರ ಹಿತ ಅಡಗಿದೆ.

ಎಂ.ಎಸ್.ಉಷಾ ಪ್ರಕಾಶ್, ಮೈಸೂರು

ರೈಲಿನಲ್ಲಿ ಇರಲಿ ಸ್ಥಳ ಸೂಚನಾ ಫಲಕ

ದೇಶದಲ್ಲಿ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ರೈಲುಗಳು ಪ್ರಯಾಣಿಕರನ್ನು ಹೊತ್ತು ಸಂಚರಿಸುತ್ತವೆ. ಇದೊಂದು ರೀತಿ ಜನಸ್ನೇಹಿ ಸಾರಿಗೆ ವ್ಯವಸ್ಥೆ. ಆದರೆ ನಮ್ಮ ರೈಲ್ವೆಗೆ ಆಧುನಿಕ ಸ್ಪರ್ಶ ಬೇಕಾಗಿದೆ. ರಾತ್ರಿ ಹೊತ್ತು ಪ್ರಯಾಣಿಕರು ತಾವು ಎಲ್ಲಿ ಇದ್ದೇವೆ ಎಂದು ತಿಳಿದುಕೊಳ್ಳಲು ಸಾಧ್ಯವಾಗದೆ, ಇಳಿಯಬೇಕಾದ ನಿಲ್ದಾಣಕ್ಕೆ ಬದಲಾಗಿ ಹಿಂದಿನ ಅಥವಾ ಮುಂದಿನ ನಿಲ್ದಾಣಗಳಲ್ಲಿ ಇಳಿದ ಉದಾಹರಣೆಗಳು ಬಹಳಷ್ಟಿವೆ.

ರೈಲ್ವೆ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ರೈಲಿನ ಒಳಗೆ ನಿಲ್ದಾಣಗಳ ಹೆಸರು ತೋರಿಸುವ ಎಲ್‌ಇಡಿ ಫಲಕಗಳನ್ನು ಅಳವಡಿಸುವ ಅಥವಾ ನಿಲ್ದಾಣದ ಹೆಸರಿನ ಮುದ್ರಿತ ಧ್ವನಿ ಕೇಳಿಸುವ ವ್ಯವಸ್ಥೆ ಮಾಡಬೇಕು. ಇದರಿಂದ, ನಿದ್ರೆಗೆ ಜಾರಿದ ಪ್ರಯಾಣಿಕರಿಗೆ ಹಾಗೂ ತಾವು ಯಾವ ನಿಲ್ದಾಣದಲ್ಲಿ ಇದ್ದೇವೆ ಎಂದು ತಿಳಿದುಕೊಳ್ಳಲು ಬಯಸುವವರಿಗೆ ಅನುಕೂಲವಾಗುತ್ತದೆ.

ಚನ್ನಕೇಶವ ಜಿ.ಕೆ., ತರೀಕೆರೆ

ಸಾಂಸ್ಕೃತಿಕ ಜಗತ್ತಿನ ದುರಂತ

ತಮ್ಮ ವಿದ್ವತ್‌ಪೂರ್ಣ ಕನ್ನಡದ ಪ್ರಾಸಬದ್ಧ ಮಾತುಗಳ ಮೂಲಕ ಎಲ್ಲ ವರ್ಗದ ಜನರನ್ನೂ ರಂಜಿಸುತ್ತಿದ್ದ ಹಿರೇಮಗಳೂರು ಕಣ್ಣನ್ ಅವರಿಗೆ ಬೌದ್ಧಿಕವಾಗಿ ಬೆತ್ತಲಾಗಲು ರಂಗಾಯಣದ ವೇದಿಕೆಯೇ ಸೂಕ್ತ ಎನಿಸಿರಬೇಕು. ಸೊಂಟದ ಕೆಳಗಿನ ಮಾತುಗಳನ್ನೇ ಹಾಸ್ಯ ಎಂಬ, ಮೂರನೇ ದರ್ಜೆಯ ಚಿತ್ರನಟರನ್ನೂ ನಾಚಿಸುವ ರೀತಿಯಲ್ಲಿ ಕಣ್ಣನ್ ತಮ್ಮೊಳಗಿನ ಬೌದ್ಧಿಕ ಮಾಲಿನ್ಯವನ್ನು ಹೊರಹಾಕಿದ್ದಾರೆ. ಹಾಗೆಯೇ, ವ್ಯಕ್ತಿ ಎಷ್ಟೇ ಕವಿಶ್ರೇಷ್ಠತೆಯ ಗರಿಮೆ ಹೊತ್ತಿದ್ದರೂ ಮನದಾಳದಿ ಬೇರೂರಿರುವ ಅಸಾಂಸ್ಕೃತಿಕತೆ ಮತ್ತು ಅಸೂಕ್ಷ್ಮಗಳು ಬತ್ತಿಹೋಗುವುದಿಲ್ಲ ಎನ್ನುವುದನ್ನೂ ಕಣ್ಣನ್ 'ಬಹುರೂಪಿ ತಾಯಿ'ಯ ಮಡಿಲಲ್ಲೇ ಕುಳಿತು ನಿರೂಪಿಸಿದ್ದಾರೆ. ಕನ್ನಡದ ಸಾಂಸ್ಕೃತಿಕ ಲೋಕದ ಮಾಲಿನ್ಯ ಮತ್ತಷ್ಟು ಕದಡಿ ರಾಡಿಯಾಗಿರುವುದಕ್ಕೆ ಈ 'ಕವಿಪುಂಗವರು' ಸಾಕ್ಷಿಯಾಗಿದ್ದಾರೆ.

ತಾವು ನಿಂತ ನೆಲ ಮತ್ತು ಆಕ್ರಮಿಸಿರುವ ನೆಲೆ, ತಾವು ಪ್ರತಿನಿಧಿಸುವ ಸಂದರ್ಭ ಮತ್ತು ಸಭೆಯ ಔಚಿತ್ಯವನ್ನೂ ಮನಗಾಣದಿರುವಷ್ಟು ಮಟ್ಟಿಗೆ ಮತೀಯತೆ ಮತ್ತು ಜಾತಿ-ಮತ ಶ್ರೇಷ್ಠತೆಯ ಉನ್ಮಾದ ಈ ರೀತಿಯ ಅಭಿವ್ಯಕ್ತಿಗೆ ಕಾರಣ ಎನ್ನುವುದು ಸ್ಪಷ್ಟ. ಸಾಮಾಜಿಕ ಸೂಕ್ಷ್ಮಗಳನ್ನರಿಯದ, ಮಾನವೀಯ ಸಂವೇದನೆಯೂ ಇಲ್ಲದ ಶ್ರೇಷ್ಠತೆ ಮತ್ತು ಪಾರಮ್ಯದ ವ್ಯಸನ ಹೊತ್ತವರಿಗೆ ರಂಗಾಯಣದಂತಹ ಸಾಂಸ್ಕೃತಿಕ ವೇದಿಕೆ ಭೂಮಿಕೆಯಾಗಿದ್ದು ಕನ್ನಡ ಸಾಂಸ್ಕೃತಿಕ ಜಗತ್ತಿನ ಅತಿ ದೊಡ್ಡ ದುರಂತ. ರಂಗಾಯಣದ ಪಾಲಿಗೆ ಇದು ಆಘಾತಕಾರಿಯೂ ಹೌದು. ಬಹುರೂಪಿಯ ತಾಯಿಯನ್ನು ಜನಿಸಿದಲ್ಲಿಯೇ ಸಮಾಧಿ ಮಾಡುವ ಇಂತಹ ಬೌದ್ಧಿಕ ದಾರಿದ್ರ್ಯವನ್ನು ಖಂಡಿಸದೇ ಹೋದರೆ, ಬಹುಶಃ ಈಗ ಆವರಿಸಿರುವ ಸಾಂಸ್ಕೃತಿಕ ಮಾಲಿನ್ಯ ಮತ್ತಷ್ಟು ಹರಡುತ್ತದೆ.

ನಾ.ದಿವಾಕರ, ಮೈಸೂರು

ಬೆತ್ತಲೆಯಾದ 'ಕಣ್ಣನ್ ಮಾಮ'

ಯಾವುದೇ ವ್ಯಕ್ತಿ ರಾಜಕೀಯವಾಗಿ ಒಂದು ಪಕ್ಷ, ಸಿದ್ಧಾಂತಕ್ಕೆ ಅಂಟಿಕೊಳ್ಳುವುದು ತಪ್ಪಲ್ಲ. ಎಡ-ನಡು-ಬಲಗಳೆಂದಾದರೂ ಘೋಷಿಸಿಕೊಳ್ಳಲಿ. ಆದರೆ, 'ಕನ್ನಡದ ಪುರೋಹಿತ' ನಾಮಧೇಯದ ಹಿರೇಮಗಳೂರು ಕಣ್ಣನ್ ಅವರು ಮೊನ್ನೆ ದಿನ ರಂಗಾಯಣದ ಸಭೆಯಲ್ಲಿ, ಹೆಣ್ಣು ಮಕ್ಕಳು 'ಬಿಚ್ಚಿ ತೋರಿಸುವ' ಕುರಿತು ಆಡಿದ ಮಾತುಗಳು, ಆಡಿ ತೋರಿಸಿದ ಹಾವಭಾವ ಅವರನ್ನು ಕುಬ್ಜರನ್ನಾಗಿಸಿದವು.

ಹಿರೇಮಗಳೂರಿನ ದೇವಾಲಯದಲ್ಲಿ ಕೋದಂಡರಾಮನಿಗೆ, ಜೊತೆಯಲ್ಲಿರುವ ಸೀತೆಗೆ ಸ್ನಾನ ಮಾಡಿಸಿ, ಪೂಜೆಗೈಯುವಾಗ ಇವರ ಮನವು ಹೇಗೆಲ್ಲ ಯೋಚಿಸುತ್ತಿದ್ದೀತು? ತನು, ಮನಗಳೆರಡನ್ನೂ ಶುದ್ಧವಾಗಿ ಇಟ್ಟುಕೊಂಡವರೆಂದೇ ನಂಬಿಕೊಂಡು ಬಂದ ಅವರ ಈ ನಡೆ ಆಘಾತ ತಂದಿದೆ. ಬೆತ್ತಲೆಯಾದ 'ಕಣ್ಣನ್ ಮಾಮ' ಅವರಿಗೆ ಈ ವಯಸ್ಸಿನಲ್ಲಿ ಅಂಟಿದ ಮನು(ನೋ)ರೋಗ ಉಳಿದವರಿಗೂ ವ್ಯಾಪಿಸದಿರಲಿ.

ಕಲ್ಪಿತ ಶ್ರೀನಿವಾಸ್, ದಾವಣಗೆರೆ

ಟೋಲ್ ಶುಲ್ಕ: ನಷ್ಟ ಸಮೀಕರಣ ಬೇಡ

ದೇಶದಾದ್ಯಂತ ಎಲ್ಲ ಹೆದ್ದಾರಿಗಳಲ್ಲಿ ಪ್ರತೀ 60 ಕಿ.ಮೀಗೆ ಒಂದೇ ಟೋಲ್ ಸಂಗ್ರಹ ಕೇಂದ್ರ ಇರಲಿದ್ದು, 60 ಕಿ.ಮೀ. ಅಂತರದ ನಡುವೆ ಇರುವಂತಹ ಹೆಚ್ಚುವರಿ ಟೋಲ್ ಬೂತ್‌ಗಳನ್ನು ಮೂರು ತಿಂಗಳೊಳಗಾಗಿ ಮುಚ್ಚಲಾಗುವುದು ಎಂಬ, ಕೇಂದ್ರ ಹೆದ್ದಾರಿ ಮತ್ತು ಸಾರಿಗೆ ಸಚಿವರ ಹೇಳಿಕೆಯು ವಾಹನ ಸವಾರರಿಗೆ ಸ್ವಲ್ಪಮಟ್ಟಿಗೆ ನಿರಾಳ ಭಾವ ಉಂಟುಮಾಡಿದೆ. 60 ಕಿ.ಮೀ. ಅಂತರದಲ್ಲಿ ಎರಡು– ಮೂರು ಟೋಲ್ ಬೂತ್‌ಗಳು ಇರುವುದಲ್ಲದೆ, ಕೆಲವು ಕಡೆ 7 ಕಿ.ಮೀ. ಅಂತರದಲ್ಲೂ ಎರಡೆರಡು ಟೋಲ್ ಬೂತ್‌ಗಳು ಇವೆ. ಸಾರಿಗೆ ಸಚಿವರ ಈ ಕ್ರಮ, ಪ್ರಯಾಣದ ಅವಧಿ ಕಡಿಮೆ ಮಾಡುವುದರೊಂದಿಗೆ ವಾಹನ ಸವಾರರಿಗೆ ಟೋಲ್ ಕಿರಿಕಿರಿಯನ್ನೂ ತಗ್ಗಿಸುತ್ತದೆ. ಕೊನೆಗೂ ಸಾರಿಗೆ ಸಚಿವರು ಟೋಲ್ ಶುಲ್ಕ ನಿಯಮಾವಳಿಗೆ ಬದ್ಧರಾಗಿದ್ದು ಸಂತಸದ ವಿಷಯ. ಆದರೆ, ಈ ದಿಸೆಯಲ್ಲಿ ಆಗುವ ನಷ್ಟವನ್ನು ಟೋಲ್ ಶುಲ್ಕವನ್ನು ಏರಿಸುವುದರ ಮೂಲಕ ಸಮೀಕರಿಸದಿರಲಿ.


ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

690ರ ಪೈಕಿ 598 ಶಾಸಕರು ಕೋಟ್ಯಧೀಶರು–ಎಡಿಆರ್ ವರದಿ

ಶಾಸಕರು ಕೋಟಿ ಒಡೆಯರು!

ಕೋಟ್ಯಧೀಶ ಶಾಸಕರ ಪ್ರಮಾಣ (%)



ಶಾಸನಸಭೆಗಳು ಇತ್ತೀಚಿನ ವರ್ಷಗಳಲ್ಲಿ ಸಿರಿವಂತರ ಕೇಂದ್ರಗಳಾಗುತ್ತಿವೆ. ಬಹುತೇಕ ಪಕ್ಷಗಳು ಕೋಟ್ಯಧೀಶರಿಗೇ ಮಣೆ ಹಾಕುತ್ತಿದ್ದು, ಅವರು ವಿಧಾನಸಭೆಗಳನ್ನು ಪ್ರವೇಶಿಸು ತ್ತಿದ್ದಾರೆ. ತಮ್ಮ ಬಳಿ ಒಂದು ಕೋಟಿ ರೂಪಾಯಿ ಹಾಗೂ ಅದಕ್ಕೂ ಅಧಿಕ ಮೌಲ್ಯದ ಆಸ್ತಿಪಾಸ್ತಿಯಿದೆ ಎಂದು ಘೋಷಿಸಿಕೊಂಡ ಶಾಸಕರ ಸಂಖ್ಯೆ ಏರುತ್ತಲೇ ಇದೆ ಎಂಬುದು 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' (ಎಡಿಆರ್) ವರದಿಯ ದತ್ತಾಂಶಗಳನ್ನು ವಿಶ್ಲೇಷಿಸಿದಾಗ ವೇದ್ಯವಾಗುತ್ತದೆ. ಈಚೆಗೆ ನಡೆದ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಗೆದ್ದಿರುವ 690 ಶಾಸಕರ ಪೈಕಿ 598 ಶಾಸಕರು (ಶೇ 87ರಷ್ಟು) ಕೋಟ್ಯಧೀಶರು

ಉತ್ತರ ಪ್ರದೇಶ

403 ಸದಸ್ಯಬಲದ ಉತ್ತರ ಪ್ರದೇಶ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾಗಿರುವವರ ಪೈಕಿ 366 ಜನಪ್ರತಿನಿಧಿಗಳು ಕೋಟ್ಯಧೀಶರು ಎಂಬ ಮಾಹಿತಿಯನ್ನು ಎಡಿಆರ್ ವರದಿ ಬಹಿರಂಗಪಡಿಸಿದೆ. ಚುನಾವಣೆ ವೇಳೆ ಅಭ್ಯರ್ಥಿಗಳು ಸಲ್ಲಿಸಿದ ಪ್ರಮಾಣಪತ್ರದಲ್ಲಿ ಒದಗಿಸಿದ್ದ ಆಸ್ತಿ ವಿವರಗಳನ್ನು ವಿಶ್ಲೇಷಿಸಿದಾಗ ಈ ಅಂಶ ಕಂಡುಬಂದಿದೆ. ಐದು ವರ್ಷಗಳ ಹಿಂದೆ 322 ಕೋಟ್ಯಧೀಶ ಶಾಸಕರು ಚುನಾಯಿತರಾಗಿದ್ದರು. ಈ ಐದು ವರ್ಷಗಳ ಅವಧಿಯಲ್ಲಿ ಶಾಸನಸಭೆಗೆ 44 ಹೊಸ ಕೋಟ್ಯಧಿಪತಿಗಳು ಆರಿಸಿಬಂದಿದ್ದಾರೆ. ಬಿಜೆಪಿಯ 255 ಶಾಸಕರ ಪೈಕಿ 233, ಎಸ್ಪಿಯ 111 ಶಾಸಕರ ಪೈಕಿ 100 ಮಂದಿ ಕೋಟಿ ಒಡೆಯರು. ಕಾಂಗ್ರೆಸ್ ಗೆದ್ದಿರುವ ಎರಡೂ ಕ್ಷೇತ್ರಗಳ ಶಾಸಕರು, ಬಿಎಸ್‌ಪಿಯ ಒಬ್ಬ ಶಾಸಕ, ಸುಹಲ್‌ದೇವ ಭಾರತೀಯ ಪಕ್ಷ ಹಾಗೂ ನಿಷಾದ್ ಪಕ್ಷದಿಂದ ಆಯ್ಕೆಯಾಗಿರುವ ಎಲ್ಲ 6 ಶಾಸಕರು ಕೋಟ್ಯಧೀಶರು

ಉತ್ತರಾಖಂಡ

70 ಸದಸ್ಯಬಲದ ವಿಧಾನಸಭೆಗೆ ಆಯ್ಕೆಯಾಗಿರುವ 58 ಶಾಸಕರು (ಶೇ 83) ಕೋಟಿ ಒಡೆಯರು. 2017ರಲ್ಲಿ 51 ಶಾಸಕರು ತಾವು ಕೋಟ್ಯಧೀಶರು ಎಂದು ಘೋಷಿಸಿಕೊಂಡಿದ್ದರು. ಈ ಬಾರಿ ಆಯ್ಕೆಯಾಗಿರುವವರ ಪೈಕಿ ಬಿಜೆಪಿಯ 40, ಕಾಂಗ್ರೆಸ್‌ನ 15, ಬಿಎಸ್‌ಪಿಯ ಇಬ್ಬರು ಹಾಗೂ ಒಬ್ಬ ಪಕ್ಷೇತರರು ಈ ಪಟ್ಟಿಯಲ್ಲಿದ್ದಾರೆ

ಮಣಿಪುರ

60 ಸದಸ್ಯಬಲದ ವಿಧಾನಸಭೆಯಲ್ಲಿ 48 ಶಾಸಕರು (ಶೇ 80) ₹1 ಕೋಟಿಗಿಂತ ಹೆಚ್ಚು ಆಸ್ತಿಯ ಒಡೆಯರಾಗಿದ್ದಾರೆ. ಐದು ವರ್ಷಗಳ ಹಿಂದೆ ಆಯ್ಕೆಯಾಗಿದ್ದ ಶಾಸಕರ ಪೈಕಿ 32 ಜನರು ಮಾತ್ರ ಕೋಟ್ಯಧೀಶರಿದ್ದರು. ಈ ಬಾರಿ ಬಿಜೆಪಿಯ 25, ಎನ್‌ಪಿಪಿಯ 6, ಕಾಂಗ್ರೆಸ್, ಎನ್‌ಪಿಎಫ್ ಹಾಗೂ ಜೆಡಿಯುನ ತಲಾ ಐವರು, ಇಬ್ಬರು ಪಕ್ಷೇತರರು ಕೋಟ್ಯಧೀಶ ಶಾಸಕರ ಪಟ್ಟಿಯಲ್ಲಿದ್ದಾರೆ

ಗೋವಾ


40 ಸದಸ್ಯಬಲದ ಗೋವಾ ವಿಧಾನಸಭೆಯ ಒಬ್ಬ ಶಾಸಕನನ್ನು ಹೊರತುಪಡಿಸಿದರೆ ಉಳಿದ 39 ಶಾಸಕರು (ಶೇ 98) ಕೋಟ್ಯಧೀಶರಾಗಿದ್ದಾರೆ. ರೆವಲ್ಯೂಷನರಿ ಗೋವನ್ ಪಾರ್ಟಿಯ ಏಕೈಕ ಶಾಸಕ ಕೋಟ್ಯಧೀಶರ ಪಟ್ಟಿಯಲ್ಲಿಲ್ಲ. ಬಿಜೆಪಿಯ 20, ಕಾಂಗ್ರೆಸ್‌ನ 11, ಎಎಪಿಯ 2, ಎಂಜಿಪಿಯ 3, ಗೋವಾ ಫಾರ್ವರ್ಡ್ ಪಕ್ಷದ ಒಬ್ಬ ಶಾಸಕ ಹಾಗೂ ಮೂವರು ಪಕ್ಷೇತರ ಶಾಸಕರು ತಮ್ಮ ಬಳಿ ₹1 ಕೋಟಿಗಿಂತ ಹೆಚ್ಚು ಆಸ್ತಿ ಇದೆ ಎಂದು ಘೋಷಿಸಿಕೊಂಡಿದ್ದಾರೆ. 2017ರ ಚುನಾವಣೆಯಲ್ಲಿ ಗೆದ್ದಿದ್ದ ಎಲ್ಲ ಶಾಸಕರೂ ಕೋಟಿ ಒಡೆಯರಾಗಿದ್ದರು

ಪಂಜಾಬ್

117 ಸದಸ್ಯಬಲದ ವಿಧಾನಸಭೆಗೆ ಆಯ್ಕೆಯಾಗಿರುವ ಶಾಸಕರ ಪೈಕಿ 87 ಜನರು ಕೋಟಿ ರೂಪಾಯಿಗಿಂತ ಅಧಿಕ ಆಸ್ತಿಪಾಸ್ತಿಯ ವಾರಸುದಾರರಾಗಿದ್ದಾರೆ. ಹಿಂದಿನ ಚುನಾವಣೆಯಲ್ಲಿ ಆಯ್ಕೆಯಾಗಿದ್ದ 95 ಶಾಸಕರು ಕೋಟಿ ಒಡೆಯರಾಗಿದ್ದರು. ಎಎಪಿಯ 92 ಶಾಸಕರ ಪೈಕಿ 63 ಶಾಸಕರು, ಕಾಂಗ್ರೆಸ್‌ನ 17, ಅಕಾಲಿದಳದ ಮೂವರೂ, ಬಿಜೆಪಿಯ ಇಬ್ಬರೂ, ಬಿಎಸ್‌ಪಿಯ ಒಬ್ಬ ಶಾಸಕ ಕೋಟ್ಯಧೀಶರು

ಶಾಸಕರ ನಡುವೆ ಸಂಪತ್ತಿನ ಹಂಚಿಕೆ

- ₹5 ಕೋಟಿಗಿಂತ ಅಧಿಕ ಸಂಪತ್ತು ಹೊಂದಿರುವ ಶಾಸಕರ ಪ್ರಮಾಣ
- ₹2 ಕೋಟಿಯಿಂದ ₹5 ಕೋಟಿವರೆಗೆ ಸೊತ್ತು ಹೊಂದಿರುವ ಶಾಸಕರ ಪ್ರಮಾಣ
- ₹50 ಲಕ್ಷದಿಂದ ₹2 ಕೋಟಿವರೆಗೆ ಆಸ್ತಿ ಹೊಂದಿರುವ ಶಾಸಕರ ಪ್ರಮಾಣ
- ₹10 ಲಕ್ಷದಿಂದ ₹50 ಲಕ್ಷದವರೆಗೆ ಆಸ್ತಿ ಹೊಂದಿರುವ ಶಾಸಕರ ಪ್ರಮಾಣ
- ₹10 ಲಕ್ಷಕ್ಕಿಂತ ಕಡಿಮೆ ಆಸ್ತಿ ಹೊಂದಿರುವ ಶಾಸಕರ ಪ್ರಮಾಣ



ಉತ್ತರ ಪ್ರದೇಶ

ದೇಶದ ಅತಿದೊಡ್ಡ ವಿಧಾನಸಭೆಯ ಶೇಕಡಾ ಅರ್ಧಕ್ಕಿಂತ ಕಡಿಮೆ ಪ್ರಮಾಣದ (ಶೇ 45.41) ಶಾಸಕರು ಅಥವಾ 183 ಶಾಸಕರು ತಲಾ ₹5 ಕೋಟಿಗಿಂತ ಅಧಿಕ ಸಂಪತ್ತಿನ ವಾರಸುದಾರರಾಗಿದ್ದಾರೆ. ₹2 ಕೋಟಿಗಿಂತ ₹5 ಕೋಟಿವರೆಗೆ ಸೊತ್ತು ಹೊಂದಿರುವ ಶಾಸಕರ ಸಂಖ್ಯೆ 122

ಗೋವಾ

ರಾಜ್ಯದ 30 ಶಾಸಕರು ತಲಾ ₹5 ಕೋಟಿಗಿಂತ ಹೆಚ್ಚು ಆಸ್ತಿಯ ಒಡೆಯರಾಗಿದ್ದಾರೆ. 8 ಶಾಸಕರ ಬಳಿ ₹2 ಕೋಟಿಗಿಂತ ಹೆಚ್ಚು ಆಸ್ತಿ ಇದೆ. ತನ್ನ ಬಳಿಕ 2 ಕೋಟಿ ರೂಪಾಯಿಗಿಂತ ಕಡಿಮೆ ಆಸ್ತಿಯಿದೆ ಎಂದು ಒಬ್ಬರು,ತನ್ನ ಬಳಿ ₹50 ಲಕ್ಷಕ್ಕಿಂತ ಕಡಿಮೆ ಸಂಪತ್ತು ಇದೆ ಎಂದು ಮತ್ತೊಬ್ಬರು ಘೋಷಿಸಿಕೊಂಡಿದ್ದಾರೆ

ಉತ್ತರಾಖಂಡ

ರಾಜ್ಯ ವಿಧಾನಸಭೆಗೆ ₹5 ಕೋಟಿಗೂ ಅಧಿಕ ಸೊತ್ತು ಹೊಂದಿರುವ 23 ಶಾಸಕರನ್ನು ಜನರು ಆಯ್ಕೆ ಮಾಡಿದ್ದಾರೆ. ₹2 ಕೋಟಿಯಿಂದ ₹5 ಕೋಟಿಯಷ್ಟು ಆಸ್ತಿ ಹೊಂದಿದ 21 ಶಾಸಕರು ಆರಿಸಿ ಬಂದಿದ್ದಾರೆ. 19 ಶಾಸಕರು ತಮ್ಮ ಬಳಿ ₹50 ಲಕ್ಷದಿಂದ ₹2 ಕೋಟಿವರೆಗೂ ಸಂಪತ್ತು ಇದೆ ಎಂದು ಪ್ರಕಟಿಸಿದ್ದಾರೆ

ಮಣಿಪುರ

ಕೋಟ್ಯಧಿಪತಿಗಳ ಪೈಕಿ 12 ಶಾಸಕರ ಬಳಿಯಿರುವ ಆಸ್ತಿ ₹5 ಕೋಟಿಗಿಂತಲೂ ಅಧಿಕವಾಗಿದೆ. 25 ಶಾಸಕರು ₹2 ಕೋಟಿಯಿಂದ ₹5 ಕೋಟಿ ಸಂಪತ್ತಿನ ಒಡೆಯರಾಗಿದ್ದಾರೆ. 17 ಶಾಸಕರ ಬಳಿ ₹50 ಲಕ್ಷದಿಂದ ₹2 ಕೋಟಿಯಷ್ಟು ಮೌಲ್ಯದ ಆಸ್ತಿ ಇದೆ. 10 ಲಕ್ಷ ರೂಪಾಯಿಯಿಂದ 50 ಲಕ್ಷ ರೂಪಾಯಿವರೆಗೆ ಆಸ್ತಿ ಘೋಷಿಸಿಕೊಂಡವರು ನಾಲ್ವರು ಮಾತ್ರ

ಪಂಜಾಬ್

ಈ ಬಾರಿ ಪಂಜಾಬ್ ವಿಧಾನಸಭೆಗೆ ಆಯ್ಕೆಯಾಗಿರುವ ಶಾಸಕರ ಪೈಕಿ ಶೇ 33.33ರಷ್ಟು ಶಾಸಕರು (39 ಜನ) ₹5 ಕೋಟಿಗಿಂತ ಅಧಿಕ ಸೊತ್ತಿನ ವಾರಸುದಾರರಾಗಿದ್ದಾರೆ. ₹2 ಕೋಟಿಗಿಂತ ₹5 ಕೋಟಿವರೆಗೆ ಸೊತ್ತು ಹೊಂದಿರುವ ಶಾಸಕರ ಸಂಖ್ಯೆ 27. 32 ಜನರು ತಮ್ಮ ಬಳಿ ₹50 ಲಕ್ಷದಿಂದ ₹2 ಕೋಟಿವರೆಗೆ ಆಸ್ತಿ ಇದೆ ಎಂದು ಘೋಷಿಸಿಕೊಂಡಿದ್ದಾರೆ

ಮರು ಆಯ್ಕೆಯಾದ ಶಾಸಕರ ಸರಾಸರಿ ಸ್ವತ್ತು ಭಾರಿ ಏರಿಕೆ

	2017ರಲ್ಲಿ ಆಯ್ಕೆಯಾದ ಶಾಸಕರ ಸರಾಸರಿ ಆಸ್ತಿ ಮೌಲ್ಯ	2022ರಲ್ಲಿ ಮರು ಆಯ್ಕೆಯಾದ ಶಾಸಕರ ಸರಾಸರಿ ಆಸ್ತಿ ಮೌಲ್ಯ
ಉತ್ತರ ಪ್ರದೇಶ (211 ಶಾಸಕರು)	₹5.24 ಕೋಟಿ	₹8.28 ಕೋಟಿ
ಗೋವಾ (17 ಶಾಸಕರು)	₹13.72 ಕೋಟಿ	₹23.93 ಕೋಟಿ
ಉತ್ತರಾಖಂಡ (35 ಶಾಸಕರು)	₹4.96 ಕೋಟಿ	₹7.56 ಕೋಟಿ
ಮಣಿಪುರ (35 ಶಾಸಕರು)	₹1.61 ಕೋಟಿ	₹3.31 ಕೋಟಿ
ಪಂಜಾಬ್ (25 ಶಾಸಕರು)	₹17.07 ಕೋಟಿ	₹17.41 ಕೋಟಿ

ಉತ್ತರ ಪ್ರದೇಶದಲ್ಲಿ ಐದು ವರ್ಷಗಳ ಹಿಂದೆ ಗೆದ್ದಿದ್ದ 211 ಶಾಸಕರು ಈ ಬಾರಿಯೂ ಮರು ಆಯ್ಕೆಯಾಗಿದ್ದಾರೆ. ಇವರೆಲ್ಲರ ಸರಾಸರಿ ಆಸ್ತಿಯ ಮೊತ್ತ ₹8.28 ಕೋಟಿ. 2017ರಲ್ಲಿ ವಿಧಾನಸಭೆಗೆ ಆಯ್ಕೆಯಾಗಿದ್ದ ಈ ಶಾಸಕರ ಸರಾಸರಿ ಸೊತ್ತಿನ ಮೌಲ್ಯ ₹5.24 ಕೋಟಿ ಇತ್ತು. ಈ ಐದು ವರ್ಷಗಳಲ್ಲಿ ಮತ್ತೆ ಚುನಾಯಿತರಾದ ಈ ಶಾಸಕರ ಆಸ್ತಿಯ ಸರಾಸರಿ ಮೌಲ್ಯದಲ್ಲಿ ಸುಮಾರು ₹3.04 ಕೋಟಿಯಷ್ಟು ಹೆಚ್ಚಳವಾಗಿದೆ. ಗೋವಾದಲ್ಲಿ 17 ಶಾಸಕರು ಮತ್ತೆ ವಿಧಾನಸಭೆಗೆ ಮರು ಆಯ್ಕೆಯಾಗಿದ್ದಾರೆ. 2017ರಲ್ಲಿ ಆಯ್ಕೆಯಾಗಿದ್ದ ಶಾಸಕರ ಸರಾಸರಿ ಆಸ್ತಿ ಮೌಲ್ಯ ₹13.72 ಕೋಟಿ ಇತ್ತು. 2022ರಲ್ಲಿ ಮತ್ತೆ ವಿಧಾನಸಭೆಗೆ ಆಯ್ಕೆಯಾದ ಶಾಸಕರ ಆಸ್ತಿ ಮೌಲ್ಯ ₹23.93 ಕೋಟಿಗೆ (ಶೇ 74ರಷ್ಟು ಹೆಚ್ಚಳ) ತಲುಪಿದೆ. ಅಂದರೆ ಪ್ರತಿ ಶಾಸಕರ ಆಸ್ತಿಯು ಸರಾಸರಿ ₹10.21 ಕೋಟಿಯಷ್ಟು ಅಧಿಕವಾಗಿದೆ.

ಉತ್ತರಾಖಂಡದಲ್ಲಿ 35 ಶಾಸಕರು ಮತ್ತೆ ವಿಧಾನಸಭೆ ಪ್ರವೇಶಿಸಿದ್ದಾರೆ. ಇವರ ಸರಾಸರಿ ಆಸ್ತಿ ಮೌಲ್ಯ 7.56 ಕೋಟಿ ರೂಪಾಯಿ. ಐದು ವರ್ಷಗಳ ಹಿಂದೆ ಆಯ್ಕೆಯಾಗಿದ್ದ ಶಾಸಕರ ಸರಾಸರಿ ಆಸ್ತಿ ಮೌಲ್ಯ ₹4.96 ಕೋಟಿ ರೂಪಾಯಿ ಇತ್ತು. ಅಂದರೆ ಐದು ವರ್ಷಗಳ ಅವಧಿಯಲ್ಲಿ ಮರು ಆಯ್ಕೆಯಾದ ಶಾಸನಸಭೆ ಪ್ರತಿನಿಧಿಗಳ ಆಸ್ತಿ ಮೌಲ್ಯದಲ್ಲಿ ಸರಾಸರಿ ₹2.59 ಕೋಟಿ (ಶೇ 52) ಹೆಚ್ಚಳವಾಗಿದೆ. ಮಣಿಪುರದಲ್ಲಿ ಈ ಬಾರಿ 35 ಶಾಸಕರು ಮರು ಆಯ್ಕೆಯಾಗಿದ್ದಾರೆ. 2017ರಲ್ಲಿ ಆಯ್ಕೆಯಾಗಿದ್ದ ಶಾಸಕರ ಸರಾಸರಿ ಆಸ್ತಿ ಮೌಲ್ಯ ₹1.61 ಕೋಟಿ ಇತ್ತು. ಈ ಬಾರಿ ₹3.31 ಕೋಟಿಗೆ (ಶೇ 105ರಷ್ಟು ಏರಿಕೆ) ಹೆಚ್ಚಳವಾಗಿದೆ. ಪಂಜಾಬ್‌ನಲ್ಲಿ ಈ ಬಾರಿ ಮರು ಆಯ್ಕೆಯಾಗಿರುವ 25 ಶಾಸಕರ ಆಸ್ತಿ ಮೌಲ್ಯದಲ್ಲಿ ಗಮನಾರ್ಹ ಬದಲಾವಣೆ ಆಗಿಲ್ಲ. ಆಸ್ತಿ ಮೌಲ್ಯ ಶೇ 2ರಷ್ಟು ಹೆಚ್ಚಿದೆ. ಮರು ಆಯ್ಕೆಯಾದ ಪ್ರತಿ ಶಾಸಕನ ಸರಾಸರಿ ಆಸ್ತಿಯು ₹17.07 ಕೋಟಿಯಿಂದ ₹17.41 ಕೋಟಿಗೆ ಹೆಚ್ಚಳವಾಗಿದೆ.

ಆಧಾರ: ಎಡಿಆರ್



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 76

ಕಪಿಮುಖ ಹೊತ್ತ ನಾರದ

ರಾಜಕುಮಾರಿ ಶ್ರೀಮತಿಯನ್ನು ಸ್ವಯಂವರದಲ್ಲಿ ಹೇಗಾದರೂ ತಾನೇ ವರಿಸಬೇಕೆಂಬ ದುರಾಸೆಪಟ್ಟ ನಾರದ, ಇದಕ್ಕಾಗಿ ಕುತಂತ್ರ ಹೆಣೆಯಲು ಸಿದ್ದನಾದ. 'ತಾನು ಸುಂದರ ಪುರುಷ-ಧಾರಿಯಾಗಬೇಕು. ಆಗ ಅವಳು ಪ್ರಸನ್ನಳಾಗಿ ತನಗೆ ಮಾಲೆ ಹಾಕಿ ವರಿಸುತ್ತಾಳೆ' ಎಂದು ಊಹಿಸಿ, ವಿಷ್ಣುವಿನ ಸೌಂದರ್ಯ ಕೋರಲು ವೈಕುಂಠಕ್ಕೆ ಬರುತ್ತಾನೆ. 'ರಾಜ ಶೀಲನಿಧಿ ತನ್ನ ಮಗಳ ಕೋರಿಕೆಯಂತೆ ಸ್ವಯಂವರವನ್ನು ಏರ್ಪಡಿಸಿದ್ದಾನೆ. ದಶದಿಕ್ಕುಗಳಿಂ-ದಲೂ ಸಾವಿರಾರು ರಾಜಕುಮಾರರು ಸ್ವಯಂವರಕ್ಕೆ ಬಂದಿದ್ದಾರೆ. ರಾಜಕುಮಾರಿ ಶ್ರೀಮತಿಯನ್ನು ವರಿಸಲು ನನಗೆ ಆಸೆಯಾಗಿದೆ. ನಿನ್ನ ಸೌಂದರ್ಯವನ್ನು ನನಗೆ ಕೊಟ್ಟರೆ. ನಾನವಳನ್ನು ಖಂಡಿತವಾಗಿಯೂ ಪಡೆಯುತ್ತೇನೆ. ಆದ್ದರಿಂದ ನಿನ್ನ ಸ್ವರೂಪವನ್ನು ನನಗೆ ನೀಡು' ಎಂದು ವಿಷ್ಣುವನ್ನ ಕೋರುತ್ತಾನೆ.

ಆಗ ವಿಷ್ಣು 'ಹರಿ'ಯ (ಕಪಿಯ) ಮುಖವನ್ನೂ ನಾರದನಿಗೆ ಅನುಗ್ರಹಿಸುತ್ತಾನೆ. ನಾರದನು ಹರಿಯ ಸ್ವರೂಪವನ್ನು ಪಡೆದೆ ಅಂತ ಹಿಗ್ಗುತ್ತಾನೆ. ಶ್ರೀಹರಿಯ ಮರ್ಮ ಏನೆಂಬುದನ್ನು ಅರಿಯದೆ, ರಾಜ-ಕುಮಾರರೆಲ್ಲರೂ ಸೇರಿದ್ದ ಸ್ವಯಂವರ ಸ್ಥಳಕ್ಕೆ ಬರುತ್ತಾನೆ. ವಿಷ್ಣುವಿನ ರೂಪವನ್ನು ಧರಿಸಿದ್ದೇನೆ, ತನ್ನನ್ನಲ್ಲದೆ ಮತ್ತಾರನ್ನೂ ಶ್ರೀಮತಿ ವರಿಸಲಾರಳು – ಎಂದು ಆಲೋಚಿಸುತ್ತಾ, ರಾಜಸಭೆಯಲ್ಲಿ ಕುಳಿತು-ಕೊಳ್ಳುತ್ತಾನೆ. ಸ್ವಯಂವರದಲ್ಲಿ ಸೇರಿದ್ದ ರಾಜಕುಮಾರರು ಸೇರಿದಂತೆ ಯಾರಿಗೂ ನಾರದನಲ್ಲಿ ಆಗಿರುವ ವ್ಯತ್ಯಾಸ ಗೊತ್ತಾಗಲಿಲ್ಲ. ಆದರೆ, ಶಿವನ ಧ್ಯಾನಿಸಿ ತಪಸ್ಸು ಮಾಡಿದ್ದ ನಾರದನನ್ನು ಅಪಮಾನದಿಂದ ಕಾಪಾಡಬೇಕೆಂದು ಬ್ರಾಹ್ಮಣರ ವೇಷ ಧರಿಸಿ ಬಂದಿದ್ದ ಶಿವಗಣಗ-ಳಿಬ್ಬರಿಗೆ ಗೊತ್ತಾಯಿತು. ನಾರದನನ್ನು ಎಚ್ಚರಿಸಲು ಗಣಗಳಿಬ್ಬರೂ ಅವನ ಬಳಿ ಬಂದು 'ನಿನಗೆ ವಿಷ್ಣುವಿನಂತೆ ದೇಹವಿದೆ. ಆದರೆ ಮುಖ ಮಾತ್ರ ಕೋತಿಯಂತಿದೆ" ಎಂದು ಹಾಸ್ಯಮಾಡಿದರು.

ಮನ್ಮಥವಿಕಾರಗಳಿಗೆ ಸಿಲುಕಿ ಮೈ ಮರೆತಿದ್ದ ನಾರದನಿಗೆ ವೇಷಧಾರಿ ಶಿವಗಣಗಳ ಮಾತು ಕೇಳಿಸಲೇ ಇಲ್ಲ. ಮೋಹಾವಿಷ್ಟನಾದ ನಾರದ ರಾಜಕುಮಾರಿ ಶ್ರೀಮತಿ ಬರುವುದನ್ನೇ ಕಾಯುತ್ತಿದ್ದ. ವಿಷ್ಣುವಿನಂತೆ ಸುಂದರವಾಗಿರುವ ತನ್ನನ್ನು ನೋಡಿದ ಕ್ಷಣವೇ ರಾಜಕುಮಾರಿ ಮಾಲೆ ಹಾಕುತ್ತಾಳೆ; ವಿವಾಹವಾಗಿ ಸುಖಸಂಸಾರ ನಡೆಸಬಹುದೆಂದು ಯೋಚಿಸುತ್ತಿದ್ದ. ಸ್ವಯಂವರ ಸ್ಥಳಕ್ಕೆ ಲಕ್ಷ್ಮಿಯಂತೆ ಶೋಭಿಸುತ್ತಿದ್ದ ಶ್ರೀಮತಿ ಮಾಲೆಯನ್ನು ಕೈಯ್ಯಲ್ಲಿ ಹಿಡಿದು ಒಂದು ಸುತ್ತು ಬಂದಳು. ಕಪಿಮುಖ ಹೊತ್ತು ವಿಷ್ಣುವಿನ ಶರೀರ ಹೊಂದಿದ್ದ ನಾರದಮುನಿಯನ್ನು ನೋಡಿ ಕೋಪಗೊಂಡಳು. ಅಲ್ಲದೆ, ತನ್ನ ಮನಸ್ಸಿಗೆ ಒಪ್ಪಿದ ವರನೊಬ್ಬನನ್ನೂ ಕಾಣದೆ ಸಭೆಯ ನಡುವೆಯೇ ನಿಂತುಬಿಟ್ಟಳು. ಆಗ ರಾಜವೇಷವನ್ನು ಧರಿಸಿ ಬಂದ ವಿಷ್ಣು ರಾಜಕುಮಾರಿ ಶ್ರೀಮತಿಯೊಬ್ಬಳಿಗೆ ಮಾತ್ರ ಕಾಣಿಸಿದ. ಶ್ರೀಮತಿ ಸಂತೋಷದಿಂದ ವಿಷ್ಣುವಿನ ಕೊರಳಿಗೆ ಮಾಲೆ ಹಾಕಿದಳು. ವಿಷ್ಣು ತನಗೆ ಮಾಲೆ ಹಾಕಿದ ಶ್ರೀಮತಿಯೊಡನೆ ಅಂತರ್ಧನನಾದ.

ಇದರಿಂದ ಅಲ್ಲಿ ಸೇರಿದ್ದ ರಾಜಕುಮಾರರೆಲ್ಲ ನಿರಾಶರಾದರೆ, ಕಾಮಪೀಡಿತನಾದ ನಾರದಮುನಿ ಬಹಳ ಸಂಕಟಪಟ್ಟ. ಮನ್ಮಥನ ಮೋಹಪಾಶಕ್ಕೆ ಸಿಲುಕಿ ತತ್ತರಿಸುತ್ತಿರುವ ನಾರದನ ದುರವಸ್ಥೆ ನೋಡಿ ಬ್ರಾಹ್ಮಣ ವೇಷಧಾರಿಗಳಾದ ಶಿವನ ಗಣಗಳಿಬ್ಬರು 'ನಾರದಮುನಿಯೇ, ನೀನು ಮನ್ಮಥನಿಂದ ಮೋಹಿತನಾಗಿ, ವ್ಯರ್ಥವಾಗಿ ಶ್ರೀಮತಿಯನ್ನು ಕಾಮಿಸಿ ಸಂಕಟಪಡುತ್ತಿರುವೆ. ಈಗಲಾದರೂ ನಿನ್ನ ಮುಖವನ್ನು ನೋಡಿಕೋ' ಎನ್ನುತ್ತಾರೆ. ಶಿವಗ-ಣರಿಬ್ಬರ ಮಾತನ್ನು ಕೇಳಿದ ನಾರದ ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಂಡ. ಕಪಿಯಂತಿರುವ ತನ್ನ ಮುಖವನ್ನು ಕಂಡು ನಾರದ ಕುಪಿತನಾದ. ಮೋಹದಿಂದ ಮುಂದುಗಾಣದ ನಾರದ ತನ್ನನ್ನು ಎಚ್ಚರಿಸಿದ ಗಣಗಳಿಬ್ಬರಿಗೂ 'ನೀವಿಬ್ಬರೂ ಬ್ರಾಹ್ಮಣನಾದ ನನ್ನನ್ನು ಅಪಹಾಸ್ಯಮಾಡಿದ್ದರಿಂದ ಬ್ರಾಹ್ಮಣನಿಗೆ ನೀವು ಮಕ್ಕಳಾಗಿ ಹುಟ್ಟಿದರೂ, ರಾಕ್ಷಸರಾಗಿಹೋಗಿ' ಎಂದು ಶಪಿಸಿದ.

ಮಹಾಜ್ಞಾನಿಗಳಾದ ಶಿವಗಣಗಳಿಬ್ಬರೂ ನಾರದ ತಮಗೆ ಕೊಟ್ಟ ಶಾಪವನ್ನು ಕೇಳಿದರೂ, ಏನೊಂದೂ ಮಾತನಾಡದೆ, 'ಎಲ್ಲವೂ ಶಿವನ ಇಚ್ಛೆ' ಎಂದು ಭಾವಿಸಿ ಶಿವನನ್ನು ಸ್ತೋತ್ರಮಾಡುತ್ತಾ ಅಲ್ಲಿಂದ ತೆರಳಿದರು ಎಂಬಲ್ಲಿಗೆ ಶ್ರೀ ಶಿವಮಹಾಪುರಾಣದ ಎರಡನೆ ಸಂಹಿತೆಯಾದ ರುದ್ರಸಂಹಿತೆಯ ಮೊದಲನೆ ಖಂಡವಾದ ಸೃಷ್ಟಿ-ಖಂಡದಲ್ಲಿ 'ನಾರದ ಮೋಹವರ್ಣನ' ಎಂಬ ಮೂರನೆ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ





ಬದುಕೊಂದು ಕದನ

ಬದುಕು ಕದನದ ತೆರನೆ; ನೋಡೆ ಲೀಲೆಯ ಕದನ |
ಮೊದಲುಮುಗಿವುಗಳಿರದ ಚಿತ್ರಲೀಲೆಯದು ||
ಇದರೊಳೆಂದಿಗುಮಿರದು ಸೋಲ್ಗೆಲವು ಕಡೆಯೆಣಿಕೆ|
ಸದರದಾಟವೆ ಮುಖ್ಯ – ಮಂಕುತಿಮ್ಮ || 591 ||

ಪದ-ಅರ್ಥ: ತೆರನೆ = ತರಹ, ಮೊದಲುಮು-ಗಿವುಗಳಿರದ = ಮೊದಲು + ಮುಗಿವುಗಳು (ಅಂತ್ಯ) + ಇರದ, ಇದರೊಳೆಂದಿಗುಮಿರದು = ಇ-ದರೊಳ್ + ಎಂದಿಗುಂ + ಇರದು, ಸೋಲ್ಗೆಲವು = -ಸೋಲು + ಗೆಲುವು, ಕಡೆಯೆಣಿಕೆ = ಕೊನೆಯ ಲೆಕ್ಕ, ಸದರದಾಟ = ಸದರದ (ಸಲುಗೆಯ) + ಆಟ.

ವಾಚ್ಯಾರ್ಥ: ಜೀವನ ಒಂದು ಕದನವಿದ್ದಂತೆ. ಅದನ್ನು ಗಮನಿಸಿದರೆ ಅದು ಒಂದು ಲೀಲೆಯ ಕದನ. ಇದು ಕೊನೆಮೊದಲಿಲ್ಲದ ದೃಶ್ಯಲೀಲೆ. ಇದರಲ್ಲಿ ಎಂದಿಗೂ ಕೊನೆಯಲ್ಲಿ ಸೋಲು, ಗೆಲುವುಗಳೆಂಬುದು ಇಲ್ಲ. ಇಲ್ಲಿ ಸಲುಗೆಯ ಆಟವೇ ಮುಖ್ಯ.

ವಿವರಣೆ: ಇಡೀ ಪ್ರಪಂಚದ ಇತಿಹಾಸವೇ ನಿರಂತರ ಕದನದ ವಾರ್ತೆ. ವಚನಭಂಡಾರಿ ಶಾಂತರಸ ಇದನ್ನು ಧ್ವನಿಪೂರ್ಣವಾಗಿ ಹೇಳುತ್ತಾನೆ.

ಅಂಗಕೋಟೆ, ಭುಜ ಆಳುವೇರಿ, ತಲೆತೆನೆ, ಕಣ್ಣು ಅಂಬುಗಂಡಿ,
ಕಾದುವ ಅರಸು ಅಸುರಾಜ, ಕೂಟದ ಮನ್ನೆಯರು ಐದು ಮಂದಿ.
ಎಂಟು ಘಟೆಯಾನೆ, ಪಂಶವಿಂಶತಿ ಕುದುರೆ,
ಆಳು ಪರಿವಾರ ಕರಣಂಗಳ ಮೊತ್ತ ಕೂಡಿ ಇರಿಯಿತ್ತು.
ಅರಿರಾಜ ತಮವಿರೋಧಿಯೊಡನೆ ಮುರಿದ,
ಅಸುರಾಜ ಪಶುಪತಿಯ ಗೆದ್ದ.
ಎನಗಾಯಿತ್ತು ಹೇಳಾ, ಅಲೇಖನಾದ ಶೂನ್ಯ ಕಲ್ಲಿನೊಳಗಾದನೆ?

ಈ ವಚನದ ಅಧ್ಯಾತ್ಮಿಕ ಅರ್ಥದ ಆಳಕ್ಕೆ ಹೋಗುವುದು ಪ್ರಸಕ್ತದಲ್ಲಿ ಅಗತ್ಯವಿಲ್ಲ. ಆದರೆ ವಚನ ಒಂದು ಯುದ್ಧವನ್ನು ಕಣ್ಣ ಮುಂದೆ ತರುತ್ತದೆ. ಕೊನೆಗೆ ಜೀವದ ರಾಜ (ಅಸುರಾಜ) ಪಶುಪತಿಯ ಮನಸ್ಸನ್ನು ಗೆದ್ದ. ಈ ಯುದ್ಧದಲ್ಲಿ ಭಾಗಿಗಳಾದವರು ಯಾರು? ದೇಹವೇ ಕೋಟೆ, ಭುಜ ಆಳು. ಅರಸ ಹೋರಾಟ ಮಾಡುವಾಗ ಅವನ ಜೊತೆಗೆ ಐದು ಕೂಟದ ಮನ್ನೆಯರು ಅಂದರೆ ನಾಯಕರಿದ್ದಾರೆ. ಎಂಟು ಆನೆಗಳು, ಇಪ್ಪತ್ತೈದು ಕುದುರೆಗಳು, ಆಳು, ಪರಿವಾರ ಮತ್ತು ಉಪಕರಣಗಳೊಂದಿಗೆ ಯುದ್ಧ ನಡೆಯಿತು. ಅರಸನ ಕೂಟದ ಮನ್ನೆಯರು ಪಂಚೇಂದ್ರಿಯಗಳು. ನಮ್ಮನ್ನು ದಿಕ್ಕುದಿಕ್ಕುಗಳಿಗೆ ಅಲೆಸುವ ಪ್ರಚಂಡ ಅಸ್ತ್ರಗಳು ಪಂಚೇಂದ್ರಿಯಗಳು. ಅವುಗಳೊಂದಿಗೆ ಎಂಟು ಮದದಾನೆಗಳು. ಇವು ಎಂಟು ವಿಧದ ಮದಗಳು, ಅಹಂಕಾರಗಳು. ಪಂಚವಿಂಶತಿ ಕುದುರೆಗಳೆಂದರೆ ಇಪ್ಪತ್ತೈದು ತಾತ್ವಿಕ ನೆಲೆಗಳು. ಇವೆಲ್ಲವುಗಳು ಯುದ್ಧಸಾಮಗ್ರಿಗಳು. ಇದು ಸತ್ಯ-ಅಸತ್ಯಗಳ, ಜ್ಞಾನ-ಅಜ್ಞಾನಗಳ, ಮೃತ್ಯು-ಚಿರಂ-ಜೀವಿತ್ವದ ನಡುವಿನ ಹೋರಾಟ. ಈ ಹೋರಾಟ ಕೇವಲ ವ್ಯಕ್ತಿಗಳ ನಡುವಿನದ್ದಲ್ಲ. ಹಾಗೇನಾದರೂ ಇದ್ದರೆ ಯುದ್ಧಕ್ಕೊಂದು ಮುಕ್ತಾಯವಿರುತ್ತಿತ್ತು.

ಕಗ್ಗ ತಿಳಿಸುತ್ತದೆ, ಈ ಕದನ, ಲೀಲೆಯ ಕದನ, ಮೊದಲು ಮುಗಿವುಗಳಿರದ ಕದನ. ಇದೊಂದು ಕಣ್ಣಿಗೆ ಕಾಣಿಸುವ, ಅನುಭವಿಸುವ ಲೀಲೆ. ಇದರಲ್ಲಿ ಸೋಲು-ಗೆಲುವು ಎಂಬುದಿಲ್ಲ. ಕೆಲವು ಬಾರಿ ಒಂದು ಗೆದ್ದಂತೆ ತೋರಿದರೂ ಕಾಲಕ್ರಮದಲ್ಲಿ ಇನ್ನೊಂದು ವಿಜಯಿಯಾದದ್ದು ಕಾಣುತ್ತದೆ. ಕೊನೆಯ ಲೆಕ್ಕದಲ್ಲಿ ಸೋಲು-ಗೆಲವು ಎನ್ನುವುದಕ್ಕೆ ಅರ್ಥವೇ ಇಲ್ಲ. ಆದ್ದರಿಂದ ಈ ಅನಂತಕಾಲ-ದಲ್ಲಿ ಬಿಂದುವನಂತಿರುವ ನಾವು ಮಾಡಬಹು-ದಾದದ್ದೇನು? ಈ ಕದನದಲ್ಲಿ, ಕುತೂಹಲದ ಹೋರಾಟದಲ್ಲಿ, ಪ್ರೀತಿಯಿಂದ, ಸದರದಿಂದ ಆಟವಾಡಿ, ಸಂತೋಷಪಟ್ಟು ತೆರಳುವುದು. ಇದು ಆಟವೆಂಬುದನ್ನು ಮರೆಯದಿರುವುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಮಾರ್ಚ್ 24, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಮೀನ ಮಾಸದ 10 ನೇ ದಿನ

ತಿಥಿ: (ಫಾಲ್ಗುಣ ಕೃಷ್ಣ) ಸಪ್ತಮಿ ಗಂ. 24-10 ನಕ್ಷತ್ರ: ಜ್ಯೇಷ್ಠ ಗಂ. 17-30 ಯೋಗ: ಸಿದ್ಧ ಗಂ. 07-28, ವ್ಯತೀಪಾತ ಗಂ. 28-36 ಕರಣ: ವಿಷ್ಟಿ ಗಂ. 13-14. ರಾಹುಕಾಲ: ಮಧ್ಯಾಹ್ನ 01:30 – 03:00 ಸೂರ್ಯೋದಯ : 06-35 ಸೂರ್ಯಾಸ್ತ : 06-38 ಮುಸ್ಲಿಂ ದಿನಾಂಕ: 20 ಶಬನ್ ಅದೃಷ್ಟ ಸಂಖ್ಯೆ: 5, 11

ಮೇಷ: ಬಂಧುವಿನ ಸಹಾಯದಿಂದಾಗಿ ಶತ್ರುಗಳ ಷಡ್ಯಂತ್ರದಿಂದ ತಪ್ಪಿಸಿಕೊ-ಳ್ಳಬಹುದು. ವಿದ್ಯಾರ್ಥಿಗಳಿಗೆ ಗಣಿತದ ವಿಚಾರದಲ್ಲಿ ಕಠಿಣ ಸಾಧನೆ ಅಗತ್ಯ. ರಕ್ತದೊತ್ತಡ ವ್ಯತ್ಯಾಸವಾಗುವ ಸಾಧ್ಯತೆ ಇರುವುದರಿಂದ ಜಾಗ್ರತರಾಗಿರಿ.

ವೃಷಭ: ಕೆಲಸ-ಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಬೇಕಾಗುವುದು. ಆತ್ಮೀಯರೊಂದಿಗೆ ವ್ಯವಹಾರಗಳ ಕುರಿತು ಅಥವಾ ವ್ಯವಹಾರದಲ್ಲಿನ ಪಾಲುದಾರಿಕೆಯ ಸಲುವಾಗಿ ಚರ್ಚಿಸಬಹುದು.

ಮಿಥುನ: ನಿಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿನ ಬದಲಾವಣೆಯ ಲಕ್ಷಣಗಳು ನಿಮ್ಮ ಕಣ್ಣಿಗೆ ಬೀಳಲಿದೆ. ವೃತ್ತಿ ಜೀವನದಲ್ಲಿನ ಅಡೆತಡೆಗಳನ್ನು ಸುಲಭವಾಗಿ ನಿವಾರಿಸಿಕೊಳ್ಳುವಿರಿ. ನೆಮ್ಮದಿಯುಕ್ತ ದಿನ ಎನಿಸುವುದು.

ಕರ್ಕಾಟಕ: ಸಾಮಾಜಿಕ ಜೀವನ ಮತ್ತು ಭಾವನಾತ್ಮಕ ಸಂಬಂಧಗಳಲ್ಲಿ ಉತ್ತಮ ಪ್ರಗತಿ ಕಾಣುವಿರಿ. ವ್ಯಾಪಾರದಲ್ಲಿ ಆಗುತ್ತಿರುವ ನಷ್ಟಗಳ ಬಗ್ಗೆ ಗಮನಿಸಿ. ಸಣ್ಣ ಪುಟ್ಟ ಹೊಸ ಕೆಲಸ ಆರಂಭಿಸಲು ಈ ದಿನ ಸೂಕ್ತವಾಗಿದೆ.

ಸಿಂಹ: ನಿಮ್ಮ ನಿಶ್ಚಿತ ಗುರಿ ಸಾಧಿಸಲು ಬಹಳ ಶ್ರಮಪಡಬೇಕಾಗುವುದಿಲ್ಲ. ಜಯದ ಜೊತೆಗೆ ನೆಮ್ಮದಿ ಕೂಡ ನಿಮ್ಮದಾಗುತ್ತದೆ. ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ನಿಮಗೆ ಹೆಚ್ಚು ಆನಂದ ಸಿಗಬಹುದು.

ಕನ್ಯಾ: ದಿನದ ಮೊದಲಾರ್ಧ ನಿಮಗೆ ಸ್ವಲ್ಪಮಟ್ಟಿಗೆ ಬೇಸರ ತರಬಹುದು. ಆದರೆ ದಿನದ ಕೊನೆಯನ್ನು ಸಂತೋಷದಲ್ಲಿ ಕಳೆಯುತ್ತಿರಿ. ನೀವು ವ್ಯಾವಹಾರಿಕವಾಗಿ ಕೊಟ್ಟ ಮಾತನ್ನು ಉಳಿಸಿಕೊಳ್ಳುವಲ್ಲಿ ಜಯಶೀಲರಾಗುವಿರಿ.

ತುಲಾ: ಹೊರದೇಶದ ಉದ್ಯೋಗ ಅನ್ವೇಷಣೆಯಲ್ಲಿ ಇರುವವರಿಗೆ ಇಂದು ಒಳ್ಳೆಯ ದಿನ. ಮೇಲಧಿಕಾರಿಗಳು ಹಾಗೂ ಹಿರಿಯರಿಂದ ನೀವು ಬಯಸಿದ ಉಪಕಾರವನ್ನು ಪಡೆಯಬಹುದು. ಬಟ್ಟೆ ವ್ಯಾಪಾರಿಗಳಿಗೆ ಲಾಭವಿರುವುದು.

ವೃಶ್ಚಿಕ: ಭೂಮಿ ಖರೀದಿಯ ತೀರ್ಮಾನದ ಮೊದಲಾಗಿ ಕಾನೂನಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕು. ಪ್ರಾರಂಭಿಕ ವಿಫಲತೆಯ ಬಗ್ಗೆ ನಿರಾಶೆಗೊಳ್ಳಬಾರದು. ಆರಕ್ಷಕರಿಗೆ ಕೆಲಸದ ಒತ್ತಡವಿರುತ್ತದೆ.

ಧನು: ಎಲ್ಲಾ ಕಾರ್ಯಗಳನ್ನು ಸಫಲತೆಗೆ ಮಾರ್ಪಡಿಸುವತ್ತ ಪ್ರಯತ್ನಿಸಬೇಕು, ಅದರಿಂದಾಗಿ ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣ ಇರಲಿದೆ. ಮಿತ್ರರ ಹಾಗೂ ಸಹೋದ್ಯೋಗಿಗಳ ಪ್ರೀತಿ ವಿಶ್ವಾಸದ ಅನುಭವ ಬರಲಿದೆ.

ಮಕರ: ಇಂದು ಕೆಲವು ವಿಷಯಗಳು ಬೇಸರ ಹುಟ್ಟಿಸಿದರೂ, ನಿಮ್ಮ ಪ್ರೀತಿಪಾ-ತ್ರರೊಂದಿಗೆ ಕಳೆಯುವ ಸಮಯ ನಿಮಗೆ ಹಿಂದಿನ ಲವಲವಿಕೆ ಮೂಡಿಸುತ್ತದೆ. ಕಲಾವಿದರಿಗೆ ಬೇಡಿಕೆ ಹೆಚ್ಚಾಗಲಿದೆ.

ಕುಂಭ: ಸ್ವಲ್ಪ ದಿನದ ಹಿಂದೆ ಪರಿಹಾರ ಕಾಣದೆ ಕಾಡುತ್ತಿದ್ದ ಸಮಸ್ಯೆ ಇಂದು ಹಿಮದಂತೆ ಕರಗಿಹೋಗುತ್ತದೆ. ಇತರರಿಗೆ ಕಹಿಯಾಗುವ ಕೆಲವು ನಿರ್ಧಾರ ನೀವು ತೆಗೆದುಕೊಳ್ಳುತ್ತೀರಿ. ಷೇರು ವ್ಯವಹಾರದವರಿಗೆ ಅದೃಷ್ಟದಾಯಕ.

ಮೀನ: ನಿರ್ಮಾಣ ಕಾರ್ಯದಲ್ಲಿ ತೊಡಗಿರುವವರಿಗೆ ಇಂದು ಒಂದು ಆಶಾಕಿರಣ ದೊರಯುತ್ತದೆ. ನಿಮ್ಮ ಕೆಲಸದಲ್ಲಿ ತೊಡಕನ್ನುಂಟು ಮಾಡುವ ಶತ್ರುಗಳ ಪ್ರಯತ್ನ ವಿಫಲವಾಗುವುದು.

ಪದಬಂಧ 4907


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದೃಷ್ಟಿದೋಷಕ್ಕಾಗಿ ಹಾಕಿಕೊಳ್ಳುವ ಸಾಧನ (4)
3.ಭೋಜನ ಸಮಾರಂಭಕ್ಕೆ ಬೇಕಾದ ಸಾಮಗ್ರಿ (4)
5.ಬೆಳಗಿನ ಜಾವವಿದು (3)
6.ಎಳ್ಳು ನೀರು ಬಿಡುವಿಕೆ (4)
8.ಸ್ವಪ್ನವಿಲ್ಲಿ ನಿಜವಾಗಿದೆ (3)
10.ಮಾತೆ ತೋರಿದ ಪ್ರೀತಿ (3)
12.ಕಾಲ ಬಳಿ ಹರಿದಿರುವ ದ್ರವದ ಲೋಹ (4)
15.ವನದ ಬಳಿ ಸುಳಿದ ಗಾಳಿ (3)
16.ದೊಡ್ಡ ಪ್ರವಾಹವಿದು (4)
17.ಸರ ಧರಿಸಿ ಮಾಡಿದ ವ್ಯಾಯಾಮ (4)

ಮೇಲಿಂದ ಕೆಳಕ್ಕೆ

1.ಬಣ್ಣ ಬಣ್ಣ ದಾರದಿಂದ ಬಟ್ಟೆ ಮೇಲೆ ಮಾಡಿದ ಹೆಣಿಗೆ (3)
2.ತಿರುಗಿಸಿದರೂ ಇದು ಬಂಗಾರ! (3)
3.ಮುಂಗುಸಿ ಇಲ್ಲಿ ಉಲ್ಟಾ ನಿಂತಿದೆಯಲ್ಲಾ? (3)
4.ದಟ್ಟವಾಗಿ ಬೆಳೆದ ಗಿಡಗಳ ಗುಂಪು (2)
7.ಯಾವ ಉದ್ದೇಶವೂ ಇಲ್ಲದ್ದು (5)
9.ಅತ್ಯಂತ ಚೆಲುವಾದುದು (5)
11.ತೆರ ನೀಡದಿರುವ ಪೆದ್ದ (3)
12.ಪಾಕದ ನಂತರ ಕುಡಿದಿರುವ ಷರಬತ್ತು (3)
13.ಹೋಮಕ್ಕೆ ಬೇಕಾಗುವ ಪುರಳೆ (3)
14.ಸಮಯದಲ್ಲೇ ಮಟ್ಟಸವಾದುದನ್ನು ಹುಡುಕಿ! (2)



4906ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಐಹಿಕ 3.ಮಸ್ತಕ 5.ರಸಗ್ರಹಣ 6.ತಡ 8.ನಾಯಿ 9.ನಾರಿ 10.ಕರು 14.ನರಭಕ್ಷಕ 15.ಕಡಲು 16.ವಿಪತ್ತು

ಮೇಲಿಂದ ಕೆಳಕ್ಕೆ: 1.ಐರಾವತ 2.ಕರಗ 3.ಮಣಕ 4.ಕಸುಗಾಯಿ 7.ಡಬರಿ 8.ನಾಸ್ತಿಕ 9.ನಾಗರಿಕ 11.ರುಷುವತ್ತು 12.ಹೊನಲು 13.ಕುಕವಿ

ಸುಡೊಕು 5293

	7	6		4				9
5			6		9		4	2
	9			7		3		
7	8			2			5	3
			4	9	5			7
6		5		8			2	
		7					9	5
	5				7			
9				5	8	2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5292 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ರಿಯಾಯಿತಿ ದರದಲ್ಲಿ ತೈಲ ಖರೀದಿಸಿದ ಐಒಸಿ

ನವದೆಹಲಿ/ಲಂಡನ್ (ರಾಯಿಟರ್ಸ್): ದೇಶದ ಮುಂಚೂಣಿ ತೈಲ ಸಂಸ್ಕರಣಾ ಕಂಪನಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್, ರಷ್ಯಾದಿಂದ ಬುಧವಾರ 30 ಲಕ್ಷ ಬ್ಯಾರೆಲ್ ಯೂರಲ್ಸ್ ಕಚ್ಚಾ ತೈಲ ಹಾಗೂ 20 ಲಕ್ಷ ಬ್ಯಾರೆಲ್ ಪಶ್ಚಿಮ ಆಫ್ರಿಕಾ ಕಚ್ಚಾ ತೈಲವನ್ನು ಟೆಂಡರ್ ಮೂಲಕ ಖರೀದಿಸಿದೆ.

ಯುರೋಪಿನ ವ್ಯಾಪಾರಿ ಕಂಪನಿ ವಿಟೋಲ್ ಮೂಲಕ ಯೂರಲ್ಸ್ ಕಚ್ಚಾ ತೈಲವನ್ನು ರಿಯಾಯಿತಿ ದರದಲ್ಲಿ ಖರೀದಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

8ನೇ ವರ್ಷದ ಪುಣ್ಯಸ್ಮರಣೆ


ಶ್ರೀ ಕೆ.ಪ್ರಭಾಕರ ರೆಡ್ಡಿ

ಶ್ರೀ ಕೆ.ಪ್ರಭಾಕರ ರೆಡ್ಡಿ
(ಮಾಜಿ ಶಾಸಕರು ಹಾಗೂ ಕನ್ನಡ ಚಳುವಳಿ ಹೋರಾಟಗಾರರು)
ಹೃದಯಪೂರ್ವಕ ಸ್ಮರಣೆಯೊದಿಗೆ
ಇಂತಿ :
ಶ್ರೀಮತಿ ಸುಮಿತ್ರ ಪ್ರಭಾಕರ ರೆಡ್ಡಿ, ಮಕ್ಕಳು, ಮೊಮ್ಮಕ್ಕಳು, ಕುಟುಂಬದವರು ಹಾಗೂ ಬಂಧು-ಮಿತ್ರರು.

ನಿಧನ



ಶ್ರೀ ಸಿ. ಲಕ್ಷ್ಮೀನಾರಾಯಣ
Class-1 PWD Contractor
#25, 4ನೇ ಅಡ್ಡ ರಸ್ತೆ, ಮಲ್ಲೇಶ್ವರಂ. ಬೆಂಗಳೂರು.
ಇವರು ದಿನಾಂಕ:23.03.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ಇವರ ಅಂತ್ಯಕ್ರಿಯೇಯನ್ನು ದಿನಾಂಕ:24.03.2022ರಂದು ಮದ್ಯಾಹ್ನ 3 ಘಂಟೆಗೆ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು: ಧರ್ಮಪತ್ನಿ ವಿ. ರತ್ನಮ್ಮ,
ಶ್ರೀ ಸಿ. ಅಶೋಕ್ ಕುಮಾರ್,
(ಜೆ.ಡಿ.ಎಸ್ ಅಧ್ಯಕ್ಷರು ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ)
ಶ್ರೀ ಸಿ. ಕಾಶಿವಿಶ್ವನಾಥ್ ಹಾಗೂ ಕುಟುಂಬವರ್ಗದವರು.

‘ಕೇಂದ್ರದಿಂದ ₹ 1,125 ಕೋಟಿ ಅನುದಾನ ಬಿಡುಗಡೆ’

ನವದೆಹಲಿ: ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧೆಡೆ ಕಳೆದ ವರ್ಷ ನೈಸರ್ಗಿಕ ವಿಕೋಪದಿಂದ ಉಂಟಾಗಿದ್ದ ನಷ್ಟ ಪರಿಹಾರಕ್ಕಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ₹ 1,125 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಾಜ್ಯಸಭೆಯ ಬಿಜೆಪಿ ಸದಸ್ಯ ಕೆ.ಸಿ. ರಾಮಮೂರ್ತಿ ಅವರ ಪ್ರಶ್ನೆಗೆ ಬುಧವಾರ ಕೇಂದ್ರದ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ನೀಡಿರುವ ಲಿಖಿತ ಉತ್ತರದಲ್ಲಿ ಅನುದಾನದ ವಿವರ ನೀಡಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ರಾಜ್ಯ ವಿಪತ್ತು ಪರಿಹಾರ ನಿಧಿ (ಎಸ್‌ಡಿಆರ್‌ಎಫ್) ಅಡಿ ₹ 843.20 ಕೋಟಿ ಅನುದಾನ ಮೀಸಲಿರಿಸಲಾಗಿದೆ. ಈ ಪೈಕಿ ₹ 632.80 ಕೋಟಿ ಕೇಂದ್ರ ಸರ್ಕಾರದ ಪಾಲಾಗಿದ್ದರೆ, ರಾಜ್ಯ ಸರ್ಕಾರ ₹ 210.40 ಕೋಟಿ. ಒದಗಿಸಿದೆ ಎಂದು ಅವರು ವಿವರ ನೀಡಿದ್ದಾರೆ.

2021ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಕರ್ನಾಟಕದಲ್ಲಿ ಸುರಿದ ಭಾರೀ ಮಳೆಯಿಂದಾಗಿ ತಲೆದೋರಿದ ಪ್ರವಾಹ ಪರಿಸ್ಥಿತಿಯಿಂದ ಉಂಟಾದ ಹಾನಿಗಾಗಿ, ಕೇಂದ್ರವು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಅಡಿ ಕಳೆದ ತಿಂಗಳು ಪ್ರತ್ಯೇಕವಾಗಿ ₹ 492.39 ಕೋಟಿ ಅನುದಾನ ಬಿಡುಗಡೆ ಮಾಡಿದೆ ಎಂದೂ ಅವರು ಹೇಳಿದ್ದಾರೆ.

ಪ್ರವಾಹದಿಂದಾಗಿ ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧೆಡೆ ರಸ್ತೆ, ಸೇತುವೆ, ಬೆಳೆ, ಜೀವ ಹಾನಿ ಹಾಗೂ ಮನೆಗಳಿಗೆ ಉಂಟಾದ ಹಾನಿಯ ಕುರಿತು ಅಧ್ಯಯನ ಮಾಡಿದ್ದ ಕೇಂದ್ರದ ತಂಡವು ಸಲ್ಲಿಸಿದ ವರದಿಯ ಅನ್ವಯ ಅನುದಾನ ಬಿಡುಗಡೆ ಮಾಡಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

‘ಧಾರ್ಮಿಕ ಪ್ರಚೋದನೆಗಾಗಿ ‘ದಿ ಕಾಶ್ಮೀರ ಫೈಲ್ಸ್’ ಚಿತ್ರ ಪ್ರಚಾರ’

ಜಮ್ಮು: ‘ಧಾರ್ಮಿಕ ನೆಲೆಯಲ್ಲಿ ಜನರನ್ನು ಪ್ರಚೋದಿಸುವ ಸಲುವಾಗಿ ಬಿಜೆಪಿಯು ‘ದಿ ಕಾಶ್ಮೀರಿ ಫೈಲ್ಸ್’ ಚಲನಚಿತ್ರವನ್ನು ಪ್ರಚಾರ ಮಾಡುತ್ತಿದೆ’ ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬ ಮುಫ್ತಿ ಆರೋಪಿಸಿದರು.

ಜಮ್ಮುವಿನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹಣ ಗಳಿಸಲೆಂದೇ ‘ದಿ ಕಾಶ್ಮೀರಿ ಫೈಲ್ಸ್’ ಚಿತ್ರವನ್ನು ತೆಗೆಯಲಾಗಿದೆ. ಪ್ರಧಾನಿ ಮೋದಿ ಹಾಗೂ ಬಿಜೆಪಿಯು ಧಾರ್ಮಿಕ ನೆಲೆಗಟ್ಟಿನಲ್ಲಿ ಜನರನ್ನು ಪ್ರಚೋದಿಸಲು ಈ ಚಿತ್ರಕ್ಕೆ ಉಚಿತ ಟಿಕೆಟ್ ವ್ಯವಸ್ಥೆ ಹಾಗೂ ತೆರಿಗೆ ಮುಕ್ತಗೊಳಿಸಿದ್ದಾರೆ’ ಎಂದು ಆರೋಪಿಸಿದರು.

‘ಕಣಿವೆಯಲ್ಲಿ ಕಾಶ್ಮೀರಿ ಪಂಡಿತರ ಹತ್ಯೆ ಹಾಗೂ ವಲಸೆಯ ನಿಖರ ಕಾರಣ ತಿಳಿಯಲು ರಚಿಸಬೇಕು. ಅದೇ ರೀತಿ 2002ರ ಗುಜರಾತ್ ಹಿಂಸಾಚಾರ, 2020 ರ ದೆಹಲಿ ಗಲಭೆಗಳ ಬಗ್ಗೆಯೂ ಕೇಂದ್ರ ಸರ್ಕಾರವು ‘ಸತ್ಯ ಮತ್ತು ಸಾಮರಸ್ಯ ಆಯೋಗ’ ರಚಿಸಲು ತೀರ್ಮಾನ ಕೈಗೊಳ್ಳಬೇಕು ಎಂದು ಆಗ್ರಹಿದರು.

ಆತ್ಮನಿರ್ಭರ ಭಾರತದ ಮೈಲುಗಲ್ಲು– ಮೋದಿ

400 ಬಿಲಿಯನ್ ಡಾಲರ್ ಸರಕು ರಫ್ತು

ನವದೆಹಲಿ: ಪ್ರಸಕ್ತ ಸಾಲಿನಲ್ಲಿ ಭಾರತದಿಂದ ಹೊರ ದೇಶಗಳಿಗೆ 400 ಬಿಲಿಯನ್ ಡಾಲರ್ (ಅಂದಾಜು ₹30.49 ಲಕ್ಷ ಕೋಟಿ) ಮೌಲ್ಯದ ಸರಕುಗಳನ್ನು ರಫ್ತು ಮಾಡಲಾಗಿದೆ. ದೇಶದ ‘ಆತ್ಮನಿರ್ಭರ ಭಾರತ’ ಪ್ರಯಾಣದಲ್ಲಿ ಇದೊಂದು ಮಹತ್ತರ ಮೈಲುಗಲ್ಲು ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷ ಮುಕ್ತಾಯಕ್ಕೆ 9 ದಿನಗಳು ಉಳಿದಿರುವಂತೆ ಸರಕು ರಫ್ತು ಪ್ರಮಾಣವು ಈವರೆಗಿನ ದಾಖಲೆಯ ಮಟ್ಟ ತಲುಪಿದೆ. 2022ರ ಮಾರ್ಚ್ ವರೆಗೂ ರಫ್ತು ಮಾಡಲಾಗಿರುವ ಸರಕು ಮೌಲ್ಯವು ಶೇಕಡ 37ರಷ್ಟು ಹೆಚ್ಚಳ ಕಂಡಿದ್ದು, 400 ಬಿಲಿಯನ್ ಡಾಲರ್ ತಲುಪಿದೆ. 2020–21ನೇ ಸಾಲಿನಲ್ಲಿ 292 ಬಿಲಿಯನ್ ಡಾಲರ್ ಮೊತ್ತದ ಸರಕು ರಫ್ತು ಮಾಡಲಾಗಿತ್ತು.

‘ಭಾರತವು 400 ಬಿಲಿಯನ್ ಡಾಲರ್ ಸರಕು ರಫ್ತು ಗುರಿಯನ್ನು ಇದೇ ಮೊದಲ ಬಾರಿಗೆ ತಲುಪಿದೆ. ಈ ಯಶಸ್ಸಿಗಾಗಿ ನಮ್ಮ ರೈತರು, ನೇಕಾರರು, ಎಂಎಸ್‌ಎಂಇಗಳು, ತಯಾರಕರು ಹಾಗೂ ರಫ್ತುದಾರರನ್ನು ಅಭಿನಂದಿಸುತ್ತೇನೆ’ ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ.

ಸ್ಥಳೀಯ ವಸ್ತುಗಳು ವಿಶ್ವದೆಲ್ಲೆಡೆ ತಲುಪುತ್ತಿರುವುದಾಗಿ ಟ್ಯಾಗ್ (ಲೋಕಲ್ ಗೋಸ್ ಗ್ಲೋಬಲ್– #Local GoesGlobal) ಮಾಡಿದ್ದಾರೆ. ನಿತ್ಯ ಸರಾಸರಿ ಒಂದು ಬಿಲಿಯನ್ ಡಾಲರ್ ಮೌಲ್ಯದ ಹಾಗೂ ಪ್ರತಿ ತಿಂಗಳು ಸರಾಸರಿ 33 ಬಿಲಿಯನ್ ಡಾಲರ್ ಮೌಲ್ಯದ ಸರಕುಗಳನ್ನು ರಫ್ತು ಮಾಡಲಾಗಿದೆ.

ಪೆಟ್ರೋಲಿಯಂ ಉತ್ಪನ್ನಗಳು, ಎಲೆಕ್ಟ್ರಾನಿಕ್ ಮತ್ತು ಎಂಜಿನಿಯರಿಂಗ್ ಸರಕು, ಲೆದರ್, ಕಾಫಿ, ಪ್ಲಾಸ್ಟಿಕ್, ಸಿದ್ಧ ಉಡುಪು ಮತ್ತು ವಸ್ತ್ರಗಳು, ಮಾಂಸ ಮತ್ತು ಡೈರಿ ಉತ್ಪನ್ನಗಳು, ಮೀನು ಸೇರಿದಂತೆ ಸಮುದ್ರದ ಉತ್ಪನ್ನಗಳು ಹಾಗೂ ತಂಬಾಕು ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲಾಗಿದೆ.



ಟ್ಯೂಲಿಪ್ ಉದ್ಯಾನ

ಶ್ರೀನಗರ ದಾಲ್ ಸರೋವರದ ಸಮೀಪವಿರುವ ಏಷ್ಯಾದ ಅತಿದೊಡ್ಡ ಟ್ಯೂಲಿಪ್ ಉದ್ಯಾನವು ಸಾರ್ವಜನಿಕ ವೀಕ್ಷಣೆಗಾಗಿ ಬುಧವಾರ ಮುಕ್ತವಾಗಿದೆ –ಪಿಟಿಐ ಚಿತ್ರ

ನಟ ಸಲ್ಮಾನ್ ಖಾನ್, ಅಂಗರಕ್ಷಕನಿಗೆ ಕೋರ್ಟ್ ಸಮನ್ಸ್

ಮುಂಬೈ: 2019ರ ವಿವಾದಕ್ಕೆ ಸಂಬಂಧಿಸಿದಂತೆ ಪತ್ರಕರ್ತರೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಮುಂಬೈ ಸ್ಥಳೀಯ ನ್ಯಾಯಾಲಯವು ಬಾಲಿವುಡ್ ನಟ ಸಲ್ಮಾನ್ ಖಾನ್ ಮತ್ತು ಅವರ ಅಂಗರಕ್ಷಕ ನವಾಜ್ ಶೇಖ್ ಅವರಿಗೆ ಸಮನ್ಸ್ ಜಾರಿ ಮಾಡಿದೆ.

ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಆರ್.ಆರ್. ಖಾನ್ ಮಂಗಳವಾರ ನೀಡಿರುವ ತಮ್ಮ ಆದೇಶದಲ್ಲಿ, ಆರೋಪಿಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಗಮನಿಸಿ ಇಬ್ಬರಿಗೂ ಸಮನ್ಸ್ ಹೊರಡಿಸಿದ್ದು, ಮುಂದಿನ ವಿಚಾರಣೆಯನ್ನು ಏ. 5ಕ್ಕೆ ಮುಂದೂಡಿದ್ದಾರೆ.

ಪತ್ರಕರ್ತ ಅಶೋಕ್ ಪಾಂಡೆ ಎಂಬುವವರು, ತಮ್ಮ ದೂರಿನಲ್ಲಿ ನಟ ಸಲ್ಮಾನ್ ಖಾನ್ ಮತ್ತು ಅವರ ಅಂಗರಕ್ಷಕ ಶೇಖ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಕೋರಿದ್ದರು.

ಮುಂಬೈ ಬೀದಿಯಲ್ಲಿ ಸೈಕ್ಲಿಂಗ್ ಮಾಡುತ್ತಿದ್ದ ಸಲ್ಮಾನ್ ಖಾನ್ ಅವರ ಫೋಟೊಗಳನ್ನು ಕೆಲವು ಮಾಧ್ಯಮದವರು ಕ್ಲಿಕ್ ಮಾಡಲು ಪ್ರಾರಂಭಿಸಿದಾಗ, ತಮ್ಮ (ಪತ್ರಕರ್ತ) ಮೊಬೈಲ್ ಫೋನ್ ಅನ್ನು ಸಲ್ಮಾನ್ ಕಿತ್ತುಕೊಂಡರು ಎಂದು ಪಾಂಡೆ ಆರೋಪಿಸಿದ್ದಾರೆ. ಈ ವೇಳೆ, ನನ್ನೊಂದಿಗೆ ವಾಗ್ವಾದಕ್ಕಿಳಿದ ಸಲ್ಮಾನ್ ಖಾನ್ ಅವರು, ನನಗೆ ಬೆದರಿಕೆಯೊಡ್ಡಿದ್ದರು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಹೈದರಾಬಾದ್‌ನ ಗುಜರಿ ವಸ್ತುಗಳ ಗೋಡೌನ್‌ನಲ್ಲಿ ಬೆಂಕಿ

11 ಕಾರ್ಮಿಕರು ಸಜೀವ ದಹನ

ಪ್ರಜಾವಾಣಿ ವಾರ್ತೆ

ಕೇಂದ್ರ 2 ಲಕ್ಷ ರೂಪಾಯಿ ಪರಿಹಾರ

ಸಜೀವ ದಹನವಾದ ಬಿಹಾರ ಮೂಲದ 11 ವಲಸೆ ಕಾರ್ಮಿಕರ ಕುಟುಂಬಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ₹2 ಲಕ್ಷ ಪರಿಹಾರ ಘೋಷಣೆ ಮಾಡಿದ್ದಾರೆ.

ಹೈದರಾಬಾದ್(ಪಿಟಿಐ): ತೆಲಂಗಾಣ ರಾಜಧಾನಿ ಹೈದರಾಬಾದ್‌ನ ಭೋಯಿಗುಡದಲ್ಲಿರುವ ಗುಜರಿ ವಸ್ತುಗಳ ಗೋಡೌನ್‌ನಲ್ಲಿ ಬುಧವಾರ ನಸುಕಿನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಬಿಹಾರ ಮೂಲದ 11 ವಲಸೆ ಕಾರ್ಮಿಕರು ಸಜೀವ ದಹನವಾಗಿದ್ದಾರೆ. ಕಾರ್ಮಿಕರ ದೇಹಗಳು ಗುರುತು ಹಿಡಿಯಲಾಗದಷ್ಟು ಪ್ರಮಾಣದಲ್ಲಿ ಸುಟ್ಟಿದ್ದು, ಡಿಎನ್‌ಎ ಪರೀಕ್ಷೆಯಿಂದ ಮಾತ್ರವೇ ಸಂತ್ರಸ್ತರ ಗುರುತು ಪತ್ತೆ ಸಾಧ್ಯವಾಗಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಘಟನೆಗೆ ರಾಷ್ಟ್ರಪತಿ ರಾಮನಾಥ ಕೋವಿಂದ್, ಉಪ ರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು, ಪ್ರಧಾನಿ ನರೇಂದ್ರ ಮೋದಿ ಹಾಗೂ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ಶೋಕ ವ್ಯಕ್ತಪಡಿಸಿದ್ದಾರೆ.

ಬೆಂಕಿ ದುರಂತ ಸಂಭವಿಸಿದ ಗೋದಾಮು ಇದ್ದ ಕಟ್ಟಡದ ಮೇಲಿನ ಕೊಠಡಿಯಲ್ಲಿ ಸಂತ್ರಸ್ತರು ಮಲಗಿದ್ದರು. ಆದರೆ ನಿದ್ದೆಯ ಮಂಪರಿನಿಂದ ಹೊರಬರುವಷ್ಟರಲ್ಲಿ ಅವರು ಬೆಂಕಿಯ ಕೆನ್ನಾಲಿಗೆಗೆ ಸಾವಿಗೀಡಾಗಿದ್ದರು. ಗುಜರಿ ಗೋಡೌನ್‌ನಲ್ಲಿ ಅಗತ್ಯ ಅಗ್ನಿ ಸುರಕ್ಷಿತ ಕ್ರಮಗಳನ್ನು ಕೈಗೊಂಡಿಲ್ಲದಿಲ್ಲವೆಂಬುದು ಗೊತ್ತಾಗಿದೆ. ಒಬ್ಬ ವ್ಯಕ್ತಿ ಮಾತ್ರ ಕೊಠಡಿಯಿಂದ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಘಟನೆಯಲ್ಲಿ ಸಾವಿಗೀಡಾದ ಎಲ್ಲಾ ಸಂತ್ರಸ್ತರು ಬಿಹಾರದ ಚಪ್ರಾ ಜಿಲ್ಲೆಯವರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸೆನ್ಸೆಕ್ಸ್ 304 ಅಂಶ ಕುಸಿತ

ಮುಂಬೈ (ಪಿಟಿಐ): ಆರಂಭದಲ್ಲಿ ಚೇತರಿಕೆಯ ಹಾದಿಯಲ್ಲಿದ್ದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಬುಧವಾರದ ವಹಿವಾಟಿನ ಕೊನೆಯಲ್ಲಿ 304 ಅಂಶ ಕುಸಿತದೊಂದಿಗೆ ವಹಿವಾಟು ಅಂತ್ಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 69 ಅಂಶ ಕುಸಿಯಿತು.

ಬ್ಯಾಂಕಿಂಗ್, ಹಣಕಾಸು ಮತ್ತು ಕೆಲವು ಐ.ಟಿ. ಕಂಪನಿಗಳ ಷೇರುಗಳನ್ನು ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಮಾರಾಟ ಮಾಡಿದ್ದು ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ವರ್ತಕರು ತಿಳಿಸಿದ್ದಾರೆ.

‘ಈಚೆಗೆ ಕಂಡುಬಂದ ಗಳಿಕೆ ಓಟದ ನಂತರದಲ್ಲಿ ಮಾರುಕಟ್ಟೆಯಲ್ಲಿ ಎಚ್ಚರಿಕೆಯ ವಹಿವಾಟು ನಡೆಯುತ್ತಿದೆ. ಹಣದುಬ್ಬರ ಹೆಚ್ಚಾಗುತ್ತಿರುವ ಕಾರಣ ಮಾರುಕಟ್ಟೆಯಲ್ಲಿ ಅಸ್ಥಿರತೆ ಮನೆ ಮಾಡಿದೆ. ಕಚ್ಚಾ ವಸ್ತುಗಳ ಬೆಲೆ ಹೆಚ್ಚಳ, ಜಗತ್ತಿನ ಹಲವೆಡೆ ಕೋವಿಡ್ ಪ್ರಕರಣಗಳ ಹೆಚ್ಚಳದ ಕಾರಣ ಉತ್ಪನ್ನಗಳಿಗೆ ಬೇಡಿಕೆ ತಗ್ಗಿರುವುದು ಮತ್ತು ಯುದ್ಧದ ವಾತಾವರಣವು ಕಂಪನಿಗಳ ವರಮಾನದ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಬಹುದು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇಕಡ 2.12ರಷ್ಟು ಹೆಚ್ಚಾಗಿದ್ದು 117.8 ಡಾಲರ್ ತಲುಪಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

ಪ್ರತಿಷ್ಠಿತ ಲಿಮಿಟೆಡ್ ಕಂಪನಿಯೊಂದಕ್ಕೆ SSLC ಮೇಲ್ಪಟ್ಟ 800 ಯುವಕ ಯುವತಿಯರು ರಾಜ್ಯಾದ್ಯಂತ ಬೇಕಾಗಿದ್ದಾರೆ. ಉಚಿತ ವಸತಿಯೂಟದೊಂದಿಗೆ ESI, PF, OT ಸೇರಿ 13,000 -37,000/- 9353753194, 9663704915

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080 -25300714

ವ್ಯಾಪಾರ

Business to Business

Business

★ಮೇಣದಬತ್ತಿ ತಯಾರಿಸಲು★ ತರಬೇತಿ ನೀಡುತ್ತೇವೆ. ಹಾಗೂ ತಯಾರಿಸಿದ ಮೇಣದಬತ್ತಿ ಕೊಂಡುಕೊಳ್ಳುತ್ತೇವೆ. ತರಬೇತಿ, ಸದಸ್ಯತ್ವಕ್ಕಾಗಿ ಬೆಂಗಳೂರು: 9060476868/ 8792252077, ಶಿವಮೊಗ್ಗ:9008013895

Business Offers

Finance

WANT a suggestion? - TRADING ! we offer best investment ideas & advisory/ secured plan on trading. 8884470597, 8341472566

Business For Sale

IT Catalyst
Enterprise Solutions on Tally
Tally POWER OF SIMPLICITY
The latest TallyPrime is here!
- GST e-Invoicing is mandatory from 1st April, 2022*.
- Generate e-Invoices and e-way bills with TallyPrime easily!
Upgrade to Cloud (Online)
- TallyPrime on AWS.
- Manage multi location operations easily with secure access to your Tally data.
Buy TallyPrime Now
Contact:
IT Catalyst Software India Pvt Ltd
☎080-49110116 9606351528

ಪ್ರವಾಸ

Travel

ಸುವರ್ಣಯಾತ್ರಾ, ಪ್ಯಾಕೇಜ್ ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9ದಿನಗಳು, 26.4.2022. ಶಿಮ್ಲಾ, ಮನಾಲಿ,ವೈಷ್ಣೋದೇವಿ ಇತರ ಸ್ಥಳಗಳು 9 ದಿನಗಳು, 24.5.2022. 8970949434, 9019462508

ಸುಸಜ್ಜಿತ ವ್ಯವಸ್ಥೆಗಳೊದಿಗೆ 09.05.2022, 22.05.2022 ರಿಂದ 11ದಿನಗಳು ಕಾಶಿ,ನೇಪಾಳ. 01.05.2022, 21.05.2022 ರಿಂದ 12ದಿನಗಳು ಶಿಮ್ಲಾ, ಮನಾಲಿ, ವೈಷ್ಣೋದೇವಿ. 26.05.2022, 11.06.2022 ರಿಂದ 15ದಿನಗಳು ಚಾರ್‌ಧಾಮ್ ಯಾತ್ರೆ. ಗ್ರೂಪ್ ಪ್ರವಾಸಗಳು ಹಾಗು ಫ್ಯಾಮಿಲಿ ಪ್ರವಾಸಗಳಿಗೆ ಸಂಪರ್ಕಿಸಿ: 'ಆನಂದ್ ವಿಹಾರಿ' ಬೆಂಗಳೂರು-23. 8088887677, 080-23385837

19.4.2022 ಕಾಶಿ, ಗಯ, ದೆಹಲಿ 13ದಿನಗಳು. 24.5.2022 ಡಾರ್ಜಿಲಿಂಗ್, ಗ್ಯಾಂಗ್ಟಾಕ್, ಕಲ್ಕತ್ತಾ, ಭುವನೇಶ್ವರ 12ದಿನಗಳು. 20.6.2022 ಚಾರ್ ಧಾಮ್ ಯಾತ್ರೆ. ನಂದಿನಿ ಟೂರಿಸ್ಟ್.9916574089.

Pilgrimage Tours

ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್. 30/04/22 ದೆಹಲಿ, ವೈಷ್ಣೋದೇವಿ, ಕುಲು, ಮನಾಲಿ. 14/05/22 ಚಾರ್ಧಾಮ್ ಯಾತ್ರಾ, ಕೇದಾರನಾಥ, ಬದ್ರಿನಾಥ್, ಯಮುನೋತ್ರಿ, ಗಂಗೋತ್ರಿ 9591017782

ಭವಿಷ್ಯ

Astrology

ಕೇರಳ ಹಾಗೂ ಕೊಳ್ಳೆಗಾಲದ ಪ್ರಸಿದ್ಧ ಮಾಂತ್ರಿಕ ವಶೀಕರಣ ಜ್ಯೋತಿಷ್ಯರು ಇವರು ಎಂತಹ ಕಠಿಣ ಗುಪ್ತ ಸಮಸ್ಯೆಗಳಿದ್ದರೂ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮಂಗಳೂರು, ಮೈಸೂರು,ಚಿತ್ರದುರ್ಗ 9008867041


ಪಂಡಿತ್ ಕಾಳಿ ಪ್ರಸಾದ್ ಕೊಳ್ಳೇಗಾಲದ ಪ್ರಖ್ಯಾತ ಜ್ಯೋತಿಷ್ಯರು ಕೊಳ್ಳೇಗಾಲಕ್ಕೆ ಬಂದು ನೇರ ಭೇಟಿಗೆ ಸದಾ ಅವಕಾಶ ನಿಮ್ಮ ಸರ್ವ ಸಮಸ್ಯೆಗೆ ಪರಿಹಾರ ಮಾಟ ಮಂತ್ರ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರು ಕಾಟ ವಿವಾಹ ವಿಳಂಬಕ್ಕೆ ಖಚಿತ ಪರಿಹಾರ ಸರ್ವ ವಶೀಕರಣ ಸ್ಪೆಷಲಿಸ್ಟ್. 7338244377

★★ಅಂಭಾಭವಾನಿ★★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
BOOK YOUR CLASSIFIEDS ONLINE
ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,315
ಇಂದಿನ ಅಂತ್ಯ	17,245
▼	69
ದಿನದ ಗರಿಷ್ಠ	17,442

ವಿನಿಮಯ ದರ

$ ಡಾಲರ್	76.42
£ ಪೌಂಡ್	100.84
€ ಯುರೊ	83.97
¥ ಯೆನ್ (100ಕ್ಕೆ)	63.37

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹425

ಹೀರೊ ಮೋಟೊಕಾರ್ಪ್ ಮೇಲೆ ಐ.ಟಿ. ದಾಳಿ

ನವದೆಹಲಿ (ಪಿಟಿಐ): ಹೀರೊ ಮೋಟೊ ಕಾರ್ಪ್ ಕಂಪನಿಗೆ ಸೇರಿದ ಹಲವು ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಬುಧವಾರ ದಾಳಿ ನಡೆಸಿದ್ದಾರೆ. ತೆರಿಗೆ ವಂಚನೆಗೆ ಸಂಬಂಧಿಸಿದಂತೆ ಈ ದಾಳಿ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಂಪನಿಯು ‘ಇದು ಮಾಮೂಲಿ ವಿಚಾರಣೆ. ಹಣಕಾಸು ವರ್ಷದ ಕೊನೆಯ ಹೊತ್ತಿನಲ್ಲಿ ಇದು ಅಸಾಮಾನ್ಯವೇನೂ ಅಲ್ಲ’ ಎಂದು ಪ್ರತಿಕ್ರಿಯಿಸಿದೆ.

ಕಂಪನಿ ಕಚೇರಿ, ಕಂಪನಿಯ ಅಧ್ಯಕ್ಷ ಪವನ್ ಮುಂಜಾಲ್ ಅವರಿಗೆ ಸೇರಿದ ಸ್ಥಳಗಳಲ್ಲಿ ದಾಳಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ದೆಹಲಿ ಮತ್ತು ಗುರುಗ್ರಾಮದಲ್ಲಿ ಇರುವ ನಮ್ಮ ಎರಡು ಕಚೇರಿಗಳಿಗೆ, ಅಧ್ಯಕ್ಷರ ಮನೆಗೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಬುಧವಾರ ಭೇಟಿ ನೀಡಿದ್ದಾರೆ. ಇದು ಮಾಮೂಲಿ ವಿಚಾರಣೆ ಎಂದು ನಮಗೆ ತಿಳಿಸಲಾಗಿದೆ. ಹಣಕಾಸು ವರ್ಷದ ಕೊನೆಯ ಹೊತ್ತಿನಲ್ಲಿ ಇದು ಸಹಜ’ ಎಂದು ಕಂಪನಿಯ ತಿಳಿಸಿದೆ. ಕಂಪನಿಯು ಕಾನೂನಿಗೆ ಬದ್ಧವಾಗಿ ನಡೆದುಕೊಳ್ಳುತ್ತದೆ, ಕಾರ್ಪೊರೇಟ್ ಆಡಳಿತದಲ್ಲಿ ಅತ್ಯುನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತದೆ ಎಂದಿದೆ.

ಕೊಬ್ಬರಿ ಧಾರಣೆ

ಪುತ್ತೂರು	₹4000-10500
ಕೆ.ಆರ್.ಪೇಟೆ (ಇತರ)	₹9422-9450

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹18000-20000
2ನೇ ದರ್ಜೆ	₹10000-16000

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1565(1565)
ಸೋಯಾ (ರಿಫೈನ್ಡ್)	₹1512(1495)
ಸೂರ್ಯಕಾಂತಿ (ರಿಫೈನ್ಡ್)	₹1825(1800)
ಪಾಮೋಲಿನ್	₹1485(1475)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಮಂಗಳೂರು	
ಕೋಕ	26000-32000
ಪುತ್ತೂರು	
ಕೋಕ	11000-26000
ಹೊಸತು	27500-45000
ಶಿವಮೊಗ್ಗ	
ಬೆಟ್ಟೆ	47899-50989
ಗೊರಬಲು	16009-33950
ರಾಶಿ	42899-46899
ಸರಕು	55000-76006
ಸಿದ್ದಾಪುರ	
ಬಿಳಿಗೋಟು	24099-31618
ಕೋಕ	21699-29880
ಹೊಸಚಾಲಿ	34099-40609
ಕೆಂಪುಗೋಟು	26699-31812
ರಾಶಿ	45099-46899
ತಟ್ಟಿಬೆಟ್ಟೆ	34019-44509
ಶಿರಸಿ	
ಬೆಟ್ಟೆ	40615-43999
ಬಿಳಿಗೋಟು	23109-35209
ಚಾಲಿ	36009-40606
ರಾಶಿ	44219-47919
ರೇಷ್ಮೆಗೂಡು	
ರಾಮನಗರ	
ಮಿಶ್ರ ತಳಿ (ಸಿ.ಬಿ)	400-769
ದ್ವಿತಳಿ (ಬಿ.ವಿ)	450-938

ಕಾಫಿ ಧಾರಣೆ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಮುದ್ರಮನೆ
ಎಪಿ	15,750
ಎಸಿ	8,120
ಆರ್‌ಪಿ	8,700
ಆರ್‌ಸಿ	4,090

ಮುಂಬೈ ಧಾರಣೆ

ಶೇಂಗಾ 23-3-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1575(1575)
ಒಂದು ವಾರದ ಡೆಲಿವರಿ	1570(1570)
ಸೋಯಾ ಕಚ್ಚಾ	1480(1475)
ಪಾಮ್ ವಾರದ ಡೆಲಿವರಿ	1483 (1473)
ಸೂರ್ಯಕಾಂತಿ ಎಣ್ಣೆ ಕಚ್ಚಾ	1750 (1740)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	51,500 (51,200)
ಬೆಳ್ಳಿ ಕೆ.ಜಿ	67,800 (67,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

‘ದಿ ಕಾಶ್ಮೀರ್ ಫೈಲ್ಸ್’ ಕುರಿತು ಟ್ವೀಟ್: ಐಎಎಸ್ ಅಧಿಕಾರಿಗೆ ನೋಟಿಸ್

ಭೋಪಾಲ್ (ಪಿಟಿಐ): ‘ದಿ ಕಾಶ್ಮೀರ್ ಫೈಲ್ಸ್’ ಚಿತ್ರದ ಬಗ್ಗೆ ವಿವಾದಾತ್ಮಕ ಟ್ವೀಟ್‌ಗಳನ್ನು ಮಾಡಿರುವ ಐಎಎಸ್ ಅಧಿಕಾರಿ ನಿಯಾಜ್ ಖಾನ್ ಅವರಿಗೆ ನೋಟಿಸ್ ನೀಡಲಾಗುವುದು ಎಂದು ಮಧ್ಯಪ್ರದೇಶ ಗೃಹ ಸಚಿವ ನರೋತ್ತಮ ಮಿಶ್ರಾ ಬುಧವಾರ ಹೇಳಿದ್ದಾರೆ. ‘ಖಾನ್ ಅವರ ಟ್ವೀಟ್‌ಗಳನ್ನು ನೋಡಿದ್ದೇನೆ. ಇದು ನಿಯಮಗಳ ಉಲ್ಲಂಘನೆಯಾಗಿದ್ದು, ಅವರಿಗೆ ನೋಟಿಸ್ ನೀಡಲಾಗುವುದು’ ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎರಡನೆಯ ದಿನವೂ ತೈಲ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಬುಧವಾರವೂ ತಲಾ 80 ಪೈಸೆಯಷ್ಟು ಹೆಚ್ಚಿಸಲಾಗಿದೆ. ಇದರಿಂದ ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆಯು 102.24ಕ್ಕೆ ಹಾಗೂ ಡೀಸೆಲ್ ಬೆಲೆಯು 86.57ಕ್ಕೆ ತಲುಪಿದೆ.

ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 110 ಡಾಲರ್‌ನಿಂದ 120 ಡಾಲರ್ ನಡುವೆ ಇದ್ದರೆ, ತೈಲ ಮಾರಾಟ ಕಂಪನಿಗಳು ಡೀಸೆಲ್ ಬೆಲೆಯನ್ನು ಲೀಟರಿಗೆ ₹ 13.1ರಿಂದ ₹ 24.9ರವರೆಗೆ ಹಾಗೂ ಪೆಟ್ರೋಲ್ ಬೆಲೆಯನ್ನು ₹ 10.6ರಿಂದ ₹ 22.3ರವರೆಗೆ ಹೆಚ್ಚಿಸಬೇಕಾಗುತ್ತದೆ ಎಂದು ಕೋಟಕ್ ಇನ್‌ಸ್ಟಿಟ್ಯೂಷನಲ್ ಈಕ್ವಿಟಿಸ್ ಸಂಸ್ಥೆಯು ಹೇಳಿದೆ. ಪ್ರಸಕ್ತ ತ್ರೈಮಾಸಿಕದಲ್ಲಿ ಕಚ್ಚಾ ತೈಲದ ಸರಾಸರಿ ಬೆಲೆಯು ಬ್ಯಾರೆಲ್‌ಗೆ 110ರಿಂದ 120 ಡಾಲರ್ ನಡುವೆ ಇದ್ದರೆ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಲೀಟರಿಗೆ ಸರಿ ಸುಮಾರು ₹ 15ರಿಂದ ₹ 20ರವರೆಗೆ ಹೆಚ್ಚಿಸಬೇಕಾಗುತ್ತದೆ ಎಂದು ಕ್ರಿಸಿಲ್ ರಿಸರ್ಚ್‌ನ ನಿರ್ದೇಶಕ ಹೇತಲ್ ಗಾಂಧಿ ಹೇಳಿದ್ದಾರೆ.

ಐಪಿಎಲ್ ಕ್ರಿಕೆಟ್ ಟೂರ್ನಿ: ಮೋಯಿನ್ ಅಲಿಗೆ ವೀಸಾ ಸಮಸ್ಯೆ–ಮೊದಲ ಪಂದ್ಯಕ್ಕೆ ಅಲಭ್ಯ

ಚೆನ್ನೈ ಆಟಗಾರರಿಗೆ ಹೊಸ ಪೋಷಾಕು

ಚೆನ್ನೈ/ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ನಾಲ್ಕು ಸಲ ಚಾಂಪಿಯನ್ ಆಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟಗಾರರರಿಗಾಗಿ ಸಿದ್ಧಪಡಿಸಲಾದ ಹೊಸ ಪೋಷಾಕನ್ನು ಬುಧವಾರ ಬಿಡುಗಡೆ ಮಾಡಲಾಯಿತು.

ಹೊಸ ವಿನ್ಯಾಸದ ಪೋಷಾಕುಗಳನ್ನು ತಂಡದ ನಾಯಕ ಮಹೇಂದ್ರಸಿಂಗ್ ಧೋನಿ ಬಿಡುಗಡೆ ಮಾಡಿದ ವಿಡಿಯೊವನ್ನು ಫ್ರ್ಯಾಂಚೈಸಿಯು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದೆ.

ಹಳದಿ ಬಣ್ಣದ ಮೇಲೆ ಸೇನೆಯ ಸಮವಸ್ತ್ರದ ಮಾದರಿಯ ಹಸಿರು ಬಣ್ಣದ ಸಣ್ಣ ಪಟ್ಟಿಗಳನ್ನು ಕಾಲರ್ ಮೇಲೆ ವಿನ್ಯಾಸ ಮಾಡಲಾಗಿದೆ. ನಾಲ್ಕು ಬಾರಿಗೆ ಪ್ರಶಸ್ತಿ ವಿಜಯದ ಸಂಕೇತವಾಗಿ ಎದೆಯ ಭಾಗದ ಮೇಲೆ ನಾಲ್ಕು ತಾರೆಗಳ ಚಿತ್ರಗಳಿವೆ. 2010, 2011, 2018 ಮತ್ತು 2021ರಲ್ಲಿ ತಂಡವು ಚಾಂಪಿಯನ್ ಆಗಿತ್ತು.

ಅದರ ಕೆಳಗೆ ತಂಡದ ಲಾಂಛನ ಇದ್ದು ಉಳಿದೆಡೆ ಪ್ರಾಯೋಜಕತ್ವರ ಲೋಗೊಗಳು ಇವೆ. .

'ನಮ್ಮ ದೇಶದ ಸೇನಾ ಯೋಧರಿಗೆ ಗೌರವ ಸಲ್ಲಿಸುವ ಸಲುವಾಗಿ ಪೋಷಾಕಿನ ಕಾಲರ್ ಮೇಲೆ ಕೆಮೌಫ್ಲ್ಯಾಗ್ ಚಿತ್ರಿಸಲಾಗಿದೆ. ಹಳದಿ ಬಣ್ಣದೊಂದಿಗೆ ಹಸಿರು ಮಿಶ್ರಿತ ಈ ಫ್ಲ್ಯಾಗ್ ಸುಂದರವಾಗಿ ಕಾಣುತ್ತಿದೆ. ವಿಶ್ವಾಸಾರ್ಹ ಬ್ರ್ಯಾಂಡ್ ಆಗಿರುವ ಟಿವಿಎಸ್ ಯುರೊಗ್ರಿಪ್ ಜಾಹೀರಾತನ್ನು ಪೋಷಾಕು ಮೇಲೆ ಹಾಕಿರುವುದು ಹೆಮ್ಮೆಯ ಸಂಗತಿ' ಎಂದು ತಂಡದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಾಶಿ ವಿಶ್ವನಾಥನ್ ಹೇಳಿದ್ದಾರೆ.

ಅಲಿಗೆ ವೀಸಾ ಸಮಸ್ಯೆ: ಚೆನ್ನೈ ತಂಡದಲ್ಲಿ ಆಡುವ ಇಂಗ್ಲೆಂಡ್ ಆಲ್‌ರೌಂಡರ್ ಮೋಯಿನ್ ಅಲಿ ಅವರಿಗೆ ವೀಸಾ ಲಭಿಸುವಲ್ಲಿ ವಿಳಂಬ ವಾಗಿದೆ. ಅದರಿಂದಾಗಿ ಅವರು ಐಪಿಎಲ್‌ನ ಮೊದಲ ಪಂದ್ಯದಲ್ಲಿ ಆಡುತ್ತಿಲ್ಲ.

'ಅಲಿಗೆ ಇನ್ನೂ ವೀಸಾ ಲಭಿಸಿಲ್ಲ. ಆದ್ದರಿಂದ ಅವರು ಐಪಿಎಲ್‌ನ ಮೊದಲ ಪಂದ್ಯದಲ್ಲಿ ಆಡುವುದಿಲ್ಲ. ಇನ್ನೆರಡು ದಿನಗಳಲ್ಲಿ ಸಮಸ್ಯೆ ಬಗೆಹರಿಯುವ ವಿಶ್ವಾಸವಿದೆ. ಅವರು ಅಲಭ್ಯರಾಗಿರುವುದು ಬೇಸರ ಮೂಡಿಸಿದೆ. ಇಂಗ್ಲೆಂಡ್‌ನಲ್ಲಿ ಪಾಕಿಸ್ತಾನ ಮೂಲವಿರುವ ವ್ಯಕ್ತಿಗಳಿಗೆ ವೀಸಾ ನೀಡುವಾಗ ಕೆಲವು ಕಠಿಣ ಪ್ರಕ್ರಿಯೆಗಳನ್ನು ಅನುಸರಿಸಲಾಗುತ್ತದೆ. ವಿಳಂಬಕ್ಕೆ ಬಹುಶಃ ಅದೇ ಕಾರಣವಿರಬೇಕು' ಎಂದು ಸಿಇಒ ವಿಶ್ವನಾಥನ್ ಹೇಳಿದ್ದಾರೆ.

ಮೋಯಿನ್ ಅವರ ಅಜ್ಜ ಕುಟುಂಬ ಸಮೇತ ಪಾಕಿಸ್ತಾನದಿಂದ ಇಂಗ್ಲೆಂಡ್‌ಗೆ ವಲಸೆ ಹೋಗಿದ್ದರು. ಮೋಯಿನ್ ಇಂಗ್ಲೆಂಡ್‌ನಲ್ಲಿಯೇ ಜನಿಸಿದ್ದರು.

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಇದೇ ಶನಿವಾರ ನಡೆಯಲಿರುವ ಉದ್ಘಾಟನೆ ಪಂದ್ಯದಲ್ಲಿ ಚೆನ್ನೈ ತಂಡವು ಕೋಲ್ಕತ್ತ ನೈಟ್ ರೈಡರ್ಸ್ ಎದುರು ಆಡಲಿದೆ.

'ಮೋಯಿನ್ ಇಲ್ಲಿಗೆ ತಲುಪಿದ ನಂತರ ಮೂರು ದಿನಗಳ ಕಡ್ಡಾಯ ಕ್ವಾರಂಟೈನ್ ಪಾಲಿಸಬೇಕು. ತಪಾಸಣೆಯ ನಂತರವಷ್ಟೇ ಅವರು ಬಯೋಬಬಲ್ ಪ್ರವೇಶಿಸಲು ಅರ್ಹತೆ ಪಡೆಯುವರು' ಎಂದು ವಿಶ್ವನಾಥನ್ ಹೇಳಿದರು.

ಶೇ 25ರಷ್ಟು ಪ್ರೇಕ್ಷಕರಿಗೆ ಪ್ರವೇಶ: ಪಂದ್ಯಗಳನ್ನು ವೀಕ್ಷಿಸಲು ಕ್ರೀಡಾಂಗಣದ ಆಸನ ಸಾಮರ್ಥ್ಯದ ಶೇ 25ರಷ್ಟು ಪ್ರೇಕ್ಷಕರಿಗೆ ಪ್ರವೇಶ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

'ಶನಿವಾರದ ಪಂದ್ಯವು 15ನೇ ಆವೃತ್ತಿಯ ಐಪಿಎಲ್‌ಗೆ ದಿಕ್ಸೂಚಿಯಾಗಲಿದೆ. ಇಂತಹ ಮಹತ್ವದ ಹಣಾಹಣಿಗೆ ಪ್ರೇಕ್ಷಕರಿಗೆ ಅವಕಾಶ ಕೊಡುತ್ತಿರುವುದು ಸಂತಸವಾಗುತ್ತಿದೆ. ಮುಂಬೈ, ನವೀ ಮುಂಬೈ ಮತ್ತು ಪುಣೆಯ ಕ್ರೀಡಾಂಗಣಗಳಲ್ಲಿ ಪಂದ್ಯಗಳು ಆಯೋಜನೆಗೊಳ್ಳಲಿವೆ. ಕೋವಿಡ್ ನಿಯಮಗಳ ಚೌಕಟ್ಟಿನಲ್ಲಿಯೇ ಪ್ರೇಕ್ಷಕರಿಗೆ ಅವಕಾಶ ಮಾಡಿಕೊಡಲಾಗುವುದು' ಎಂದು ಐಪಿಎಲ್ ಆಡಳಿತ ಸಮಿತಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಆವೃತ್ತಿಯಲ್ಲಿ ಒಟ್ಟು 74 ಪಂದ್ಯಗಳು ನಡೆಯಲಿವೆ. ವಾಂಖೆಡೆ ಮತ್ತು ಡಿವೈ ಪಾಟೀಲ ಕ್ರೀಡಾಂಗಣಗಳಲ್ಲಿ ತಲಾ 20 ಪಂದ್ಯಗಳು, ಬ್ರೆಬೋರ್ನ್ ಮತ್ತು ಪುಣೆಯ ಎಂಸಿಎ ಕ್ರೀಡಾಂಗಣದಲ್ಲಿ ತಲಾ 15 ಪಂದ್ಯಗಳು ನಡೆಯಲಿವೆ.

ಪಂದ್ಯಗಳ ಟಿಕೆಟ್ ಮಾರಾಟವನ್ನು ಬುಧವಾರದಿಂದ ಆರಂಭಿಸಲಾಗಿದೆ.



ಹೊಸ ಪೋಷಾಕಿನಲ್ಲಿ ಮಹೇಂದ್ರಸಿಂಗ್ ಧೋನಿ –ಟ್ವಿಟರ್ ಚಿತ್ರ

'ಪವರ್ ಹಿಟ್ ಕೋಚ್ ಅಗತ್ಯ'

ನವದೆಹಲಿ (ಪಿಟಿಐ): ಟ್ವೆಂಟಿ–20 ಕ್ರಿಕೆಟ್ ಮಾದರಿಯು ವೇಗವಾಗಿ ಬೆಳೆಯುತ್ತಿದೆ. ಇದರಲ್ಲಿ ಈಗ ಸಾಂಪ್ರದಾಯಿಕ ಬ್ಯಾಟಿಂಗ್ ಕೋಚ್ ಬದಲು ಪವರ್ ಹಿಟಿಂಗ್ ತರಬೇತುದಾರರನ್ನು ನೇಮಕ ಮಾಡಬೇಕು ಎಂದು ಪಂಜಾಬ್ ಕಿಂಗ್ಸ್ ಸಹಾಯಕ ಕೋಚ್ ಜೂಲಿಯನ್ ವುಡ್ ಹೇಳಿದ್ದಾರೆ.

ಇಂಗ್ಲೆಂಡ್‌ನ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಆಡಿರುವ ಅನುಭವಿ ನುರಿತ ಕೋಚ್ ಕೂಡ ಆಗಿದ್ದಾರೆ. ಇದೇ ಮೊದಲ ಬಾರಿಗೆ ಐಪಿಎಲ್ ತಂಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

'ಈಗ ಸಮಯ ಬಂದಿದೆ. ಟಿ20 ಕ್ರಿಕೆಟ್‌ನಲ್ಲಿ ದೊಡ್ಡ ಹೊಡೆತಗಳನ್ನು ಪ್ರಯೋಗಿಸುವ ತಾಂತ್ರಿಕ ಕೌಶಲವನ್ನು ಹೇಳಿಕೊಡಲು ಇದು ಸಕಾಲ. ಫ್ರ್ಯಾಂಚೈಸಿಗಳು ಈಗ ಇಂತಹ ಕ್ರಾಂತಿಕಾರಕ ಬದಲಾವಣೆಗಳತ್ತ ಚಿತ್ತ ಹರಿಸುತ್ತಿವೆ' ಎಂದು ವುಡ್ ಹೇಳಿದರು.

ಬೇಸ್‌ಬಾಲ್ ಕೋಚ್ ಜೊತೆಗೆ ಕಾರ್ಯನಿರ್ವಹಿಸಿರುವ ವುಡ್ ಆ ಕ್ರೀಡೆಯ ಕೆಲವು ತಂತ್ರಗಳನ್ನು ಕ್ರಿಕೆಟ್‌ನೊಂದಿಗೆ ಸೇರಿಸುವ ಪ್ರಯೋಗ ಮಾಡುತ್ತಿದ್ದಾರೆ.

ತವರಿನಂಗಳದ ಲಾಭ ನೆಚ್ಚಿಕೊಂಡಿಲ್ಲ: ರೋಹಿತ್


ರೋಹಿತ್ ಶರ್ಮಾ

ತವರಿನಂಗಳದಲ್ಲಿ ಆಡುತ್ತಿರುವುದರಿಂದ ತಮ್ಮ ತಂಡಕ್ಕೆ ಹೆಚ್ಚಿನ ಲಾಭವೇನೂ ಅಗುವುದಿಲ್ಲ. ಉತ್ತಮ ಸಾಮರ್ಥ್ಯ ಮತ್ತು ಯೋಜನಾಬದ್ಧ ಆಟದಿಂದ ಮಾತ್ರ ಯಶಸ್ಸು ಸಾಧ್ಯ ಎಂದು ಮುಂಬೈ ಇಂಡಿಯನ್ಸ್ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದರು.

ಈ ಬಾರಿಯ ಐಪಿಎಲ್ ಟೂರ್ನಿಯ ಲೀಗ್ ಪಂದ್ಯಗಳು ಮುಂಬೈ ಮತ್ತು ಪುಣೆಯ ಕ್ರೀಡಾಂಗಣಗಳಲ್ಲಿ ಆಯೋಜನೆಯಾಗಲಿವೆ. ಇದೇ 26ರಿಂದ ಟೂರ್ನಿ ಆರಂಭವಾಗಲಿದೆ.

'ಹರಾಜು ಪ್ರಕ್ರಿಯೆಯನ್ನು ನೀವು ನೋಡಿದ್ದೇ ಆದರೆ, ನಮ್ಮ ತಂಡಕ್ಕೆ ಹೊಸ ಆಟಗಾರರು ಹಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಯಾಗಿದ್ದಾರೆ. ಆದ್ದರಿಂದ ಅವರಿಗೆ ಇಲ್ಲಿಯ ಕ್ರೀಡಾಂಗಣಗಳು ಹೆಚ್ಚು ಪರಿಚಿತವಲ್ಲ. ಆದ್ದರಿಂದ ತವರಿನಂಗಳದ ಲಾಭ ಹೆಚ್ಚು ಸಿಗುವುದಿಲ್ಲ' ಎಂದು ಬುಧವಾರ ನಡೆದ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ರೋಹಿತ್ ಹೇಳಿದರು.

'ನಾನು, ಸೂರ್ಯಕುಮಾರ್ ಯಾದವ್, ಪೊಲಾರ್ಡ್, ಇಶಾನ್ ಕಿಶನ್, ಜಸ್‌ಪ್ರೀತ್ ಬೂಮ್ರಾಗೆ ಮಾತ್ರ ಮುಂಬೈನ ಅಂಗಳಗಳು ಮತ್ತು ವಾತಾವರಣ ಚಿರಪರಿಚಿತವಾಗಿವೆ. ಉಳಿದವರು ಆಡಿಲ್ಲ. ಅಷ್ಟಕ್ಕೂ ಎರಡು ವರ್ಷಗಳ ನಂತರ ಎಲ್ಲರೂ ಇಲ್ಲಿ ಆಡುತ್ತಿದ್ದೇವೆ. ಹೋದ ವರ್ಷ ಮೊದಲ ಹಂತದ ಟೂರ್ನಿ ಭಾರತದಲ್ಲಿಯೇ ನಡೆದ ಸಂದರ್ಭದಲ್ಲಿ ಬೇರೆ ಫ್ರ್ಯಾಂಚೈಸಿಗಳು ಮುಂಬೈನಲ್ಲಿ ಕೆಲವು ಪಂದ್ಯಗಳನ್ನು ಆಡಿದ್ದವು. ಆದರೆ ನಮ್ಮ ತಂಡಕ್ಕೆ ಅವಕಾಶ ಸಿಕ್ಕಿರಲಿಲ್ಲ' ಎಂದು ರೋಹಿತ್ ವಿವರಿಸಿದರು.

'ಸೂರ್ಯಕುಮಾರ್ ತಮ್ಮ ಗಾಯದ ಆರೈಕೆ ಮತ್ತು ಫಿಟ್‌ನೆಸ್ ಪುನಶ್ಚೇತನಕ್ಕಾಗಿ ಬೆಂಗಳೂರಿನಲ್ಲಿ ಎನ್‌ಸಿಎನಲ್ಲಿದ್ದಾರೆ. ಆದ್ದರಿಂದ ಅವರ ಲಭ್ಯತೆಯ ಕುರಿತು ಈಗಲೇ ಖಚಿತವಾಗಿ ಏನೂ ಹೇಳಲಾಗುವುದಿಲ್ಲ. ಎನ್‌ಸಿಎದಿಂದ ಹಸಿರು ನಿಶಾನೆ ದೊರೆತ ಮೇಲೆಯೇ ಅವರು ತಂಡಕ್ಕೆ ಮರಳುವರು' ಎಂದು ಸ್ಪಷ್ಟಪಡಿಸಿದರು.

'ಈ ಹಿಂದೆ ನನ್ನೊಂದಿಗೆ ಇಶಾನ್ ಕಿಶನ್ ಇನಿಂಗ್ಸ್ ಆರಂಭಿಸುತ್ತಿದ್ದರು. ಈ ಬಾರಿಯೂ ಅದೇ ರೀತಿಯಾಗುವ ನಿರೀಕ್ಷೆ ಇದೆ' ಎಂದು ಸ್ಪಷ್ಟಪಿಸಿದರು.

ಹೊಸ ನಿಯಮಗಳ ಜಾರಿಯ ಕುರಿತು ಪ್ರತಿಕ್ರಿಯಿಸಿದ ರೋಹಿತ್, 'ಮಂಕಡಿಂಗ್ ಎಂದು ಕರೆಯಲಾಗುತ್ತಿದ್ದ ರನೌಟ್ ಈಗ ನಿಯಮಬದ್ಧವಾಗಿದೆ. ಡಿಆರ್‌ಎಸ್ ಎರಡು ಅವಕಾಶಗಳನ್ನು ನೀಡಲಾಗಿದೆ. ಉಳಿದಂತೆ ಕೆಲವು ನಿಯಮಗಳು ಬಂದಿವೆ. ಅವುಗಳನ್ನು ಪಾಲಿಸುವುದು ನಮ್ಮ ಕರ್ತವ್ಯ. ಅದೇ ರೀತಿ ಮಾಡುತ್ತೇವೆ' ಎಂದರು.

ಅವಿನಾಶ್ ದಾಖಲೆ; ಪ್ರಿಯಾಗೆ ಚಿನ್ನ

ಇಂಡಿಯನ್ ಗ್ರ್ಯಾಂಡ್ ಪ್ರಿ ಅಥ್ಲೆಟಿಕ್ಸ್: ಪೂವಮ್ಮಗೆ ಬೆಳ್ಳಿ

ತಿರುವನಂತಪುರ (ಪಿಟಿಐ): ಸ್ಟೀಪಲ್‌ಚೇಸ್‌ನಲ್ಲಿ ಮಿಂಚು ಹರಿಸಿದ ಅವಿನಾಶ್ ಸಬ್ಳೆ ಇಲ್ಲಿ ನಡೆಯುತ್ತಿರುವ ಇಂಡಿಯನ್ ಗ್ರ್ಯಾಂಡ್ ಪ್ರಿ–2 ಅಥ್ಲೆಟಿಕ್ಸ್‌ನ ಎರಡನೇ ದಿನ ದಾಖಲೆ ಬರೆದರು. ಪುರುಷರ 3000 ಮೀಟರ್ಸ್ ಸ್ಪರ್ಧೆಯಲ್ಲಿ ಅವರು 8 ನಿಮಿಷ 16.21 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಟೋಕಿಯೊ ಒಲಿಂಪಿಕ್ಸ್ ನಂತರ ಇದೇ ಮೊದಲ ಬಾರಿ ಟ್ರ್ಯಾಕ್‌ಗೆ ಇಳಿದ ಮಹಾರಾಷ್ಟ್ರದ ಅವಿನಾಶ್ ಅವರಿಗೆ ಆರಂಭದಲ್ಲಿ ಹರಿಯಾಣದ ಬಾಲಕಿಶನ್ ಭಾರಿ ಪೈಪೋಟಿ ನೀಡಿದರು. ಕೊನೆಯ ಮೂರು ಲ್ಯಾಪ್‌ಗಳಲ್ಲಿ ಮುನ್ನುಗ್ಗಿದ ಅವಿನಾಶ್ 1.91 ಸೆಕೆಂಡುಗಳ ಅಂತರದಲ್ಲಿ ಮುನ್ನಡೆ ಸಾಧಿಸಿ ಚಿನ್ನ ಗೆದ್ದರು. ಈ ಮೂಲಕ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ತಾವೇ ಸ್ಥಾಪಿಸಿದ್ದ ದಾಖಲೆ ಮುರಿದರು.


ಅವಿನಾಶ್ ಸಬ್ಳೆ

ಮಹಿಳೆಯರ ವಿಭಾಗದ 400 ಮೀಟರ್ಸ್ ಓಟದಲ್ಲಿ ಕರ್ನಾಟಕದ ಇಬ್ಬರು ಅಥ್ಲೀಟ್‌ಗಳು ಜಿದ್ದಾಜಿದ್ದಿಯ ಪೈಪೋಟಿ ನಡೆಸಿದರು. ಅನುಭವಿ ಎಂ.ಆರ್.ಪೂವಮ್ಮ ಅವರನ್ನು ಹಿಂದಿಕ್ಕಿದ ಯುವ ಕ್ರೀಡಾಪಟು ಪ್ರಿಯಾ ಮೋಹನ್ ಮೊದಲಿಗರಾದರು. ಕೇರಳದ ಜಿಶ್ನಾ ಮ್ಯಾಥ್ಯೂ (53.40 ಸೆ) ಕಂಚಿನ ಪದಕ ಗಳಿಸಿದರು.



ಪ್ರಿಯಾ ಮೋಹನ್

ಅನುಭವಿ ವಿ.ಕೆ. ವಿಸ್ಮಯ ಅವರನ್ನು ಹಿಂದಿಕ್ಕಿದ ಕರ್ನಾಟಕದ ಇಂಚರಾ ಮಿಂಚಿದರು. 52.37 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಪ್ರಿಯಾ ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದರು. ಯುವ ಓಟಗಾರ್ತಿಯರ ನಡುವೆ ಮಿಂಚಿದ ಪೂವಮ್ಮ (52.44 ಸೆ) ಪೋಲೆಂಡ್‌ನಲ್ಲಿ 2016ರಲ್ಲಿ ನಡೆದ ಕೂಟದ ನಂತರ ಗರಿಷ್ಠ ಸಾಧನೆ ಮಾಡಿದರು.

100 ಮೀಟರ್ಸ್ ಓಟದಲ್ಲಿ ಕರ್ನಾಟಕದ ಎನ್.ಎಸ್.ಸಿಮಿ 11.79 ಸೆಕೆಂಡುಗಳ ಸಾಧನೆಯೊಂದಿಗೆ ಚಿನ್ನ ಗೆದ್ದುಕೊಂಡರು. ಕರ್ನಾಟಕದ ಎ.ಟಿ. ದಾನೇಶ್ವರಿ (11.83 ಸೆ) ಬೆಳ್ಳಿ ಮತ್ತು ಕೇರಳದ ಅಂಜಲಿ (11.87) ಕಂಚು ಗೆದ್ದುಕೊಂಡರು. 800 ಮೀಟರ್ಸ್ ಓಟದ ಚಿನ್ನವೂ ಕರ್ನಾಟಕದ ಪಾಲಾಯಿತು. ಇ.ಬಿ ಅರ್ಪಿತಾ (2:11.44 ಸೆ), ಕೇರಳದ ಪ್ರಿಸಿಲ್ಲ ಡ್ಯಾನಿಯಲ್ (2;12.47 ಸೆ) ಮತ್ತು ಸಾರಾ ಕೋಶಿ (2:13.49) ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚು ಗೆದ್ದರು.

ದೆಹಲಿ ಚೆಸ್: ರಾಣಿಂದುಗೆ ಮಣಿದ ಗುಕೇಶ್

ನವದೆಹಲಿ (ಪಿಟಿಐ): ಭಾರತದ ಅತಿ ಕಿರಿಯ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ಅವರು ದೆಹಲಿ ಅಂತರರಾಷ್ಟ್ರೀಯ ಮುಕ್ತ ಚೆಸ್ ಟೂರ್ನಿಯಲ್ಲಿ ಆಘಾತ ಅನುಭವಿಸಿದರು. ಬುಧವಾರ ಅವರು ಶ್ರೀಲಂಕಾದ ರಾಣಿಂದು ಲಿಯಾನಗೆ ಎದುರು ಸೋತರು.

ಅಗ್ರ ಶ್ರೇಯಾಂಕದ ಅರ್ಜುನ್ ಎರಿಗೈಸಿ ಗ್ರ್ಯಾಂಡ್‌ಮಾಸ್ಟರ್ ಪಿ. ಕಾರ್ತಿಕೇಯನ್‌ಗೆ ಸೋಲುಣಿಸಿದರು. ಇದು ಅವರ ಸತತ ಎರಡನೇ ಜಯವಾಗಿದೆ.

ರ್‍ಯಾಂಕಿಂಗ್: ಸ್ಮೃತಿ, ಯಷ್ಟಿಕಾಗೆ ಬಡ್ತಿ; ಮಿಥಾಲಿಗೆ ನಿರಾಸೆ

ದುಬೈ (ಪಿಟಿಐ): ಭಾರತದ ಸ್ಮೃತಿ ಮಂದಾನ ಮತ್ತು ಯಷ್ಟಿಕಾ ಭಾಟಿಯಾ ಅವರು ಐಸಿಸಿ ಮಹಿಳೆಯರ ಏಕದಿನ ರ್‍ಯಾಂಕಿಂಗ್‌ನಲ್ಲಿ ಬಡ್ತಿ ಪಡೆದಿದ್ದಾರೆ. ನಾಯಕಿ ಮಿಥಾಲಿ ರಾಜ್ ನಿರಾಸೆಗೆ ಒಳಗಾಗಿದ್ದಾರೆ. ಸ್ಮೃತಿ ಮತ್ತು ಯಷ್ಟಿಕಾ ಕ್ರಮವಾಗಿ 10 ಹಾಗೂ 39ನೇ ಸ್ಥಾನದಲ್ಲಿದ್ದು ಮಿಥಾಲಿ ರಾಜ್ 8ನೇ ಸ್ಥಾನಕ್ಕೆ ಕುಸಿದಿದ್ದಾರೆ.

ವಿಶ್ವಕಪ್ ಟೂರ್ನಿಯ ಮೂರು ಪಂದ್ಯಗಳಲ್ಲಿ ಕ್ರಮವಾಗಿ 35, 10 ಮತ್ತು 30 ರನ್ ಗಳಿಸಿರುವ ಸ್ಮೃತಿ ಒಂದು ಸ್ಥಾನದ ಬಡ್ತಿ ಗಳಿಸಿದ್ದಾರೆ. ಈ ಮೂಲಕ ಅಗ್ರ 10ರೊಳಗೆ ಸ್ಥಾನ ಗಳಿಸಿದ್ದಾರೆ. ಎಡಗೈ ಬ್ಯಾಟರ್ ಆಸ್ಟ್ರೇಲಿಯಾ ಮತ್ತು ಬಾಂಗ್ಲಾದೇಶ ವಿರುದ್ಧ ಅರ್ಧಶತಕ ಗಳಿಸಿ 8 ಸ್ಥಾನಗಳ ಬಡ್ತಿ ಹೊಂದಿದ್ದಾರೆ.

ಹಿಂದಿನ ಎರಡು ವಾರಗಳಲ್ಲಿ ಒಟ್ಟು ಐದು ಸ್ಥಾನಗಳ ಕುಸಿತ ಕಂಡಿದ್ದ ಮಿಥಾಲಿ ಈಗ ಮತ್ತೊಂದು ಸ್ಥಾನ ಕಳೆದುಕೊಂಡಿದ್ದು ನ್ಯೂಜಿಲೆಂಡ್‌ನ ಆ್ಯಮಿ ಸಟರ್ಥ್‌ವೇಟ್ ಜೊತೆ ಸ್ಥಾನ ಹಂಚಿಕೊಂಡಿದ್ದಾರೆ.

ಆಸ್ಟ್ರೇಲಿಯಾದ ಅಲಿಸಾ ಹೀಲಿ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ವಿಶ್ವಕಪ್: ಇಂಗ್ಲೆಂಡ್‌ಗೆ ಮಾಡು–ಮಡಿ ಪಂದ್ಯ

ಕ್ರೈಸ್ಟ್ ಚರ್ಚ್: ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡ ಮಹಿಳಾ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮಾಡು–ಮಡಿ ಪಂದ್ಯದಲ್ಲಿ ಗುರುವಾರ ಕಣಕ್ಕೆ ಇಳಿಯಲಿದೆ. ಮಹತ್ವದ ಈ ಪಂದ್ಯದಲ್ಲಿ ತಂಡಕ್ಕೆ ಪಾಕಿಸ್ತಾನ ಎದುರಾಳಿ.

ಆರಂಭದಲ್ಲಿ ಸೋಲಿನ ಸುಳಿಯಲ್ಲಿ ಸಿಲುಕಿದ್ದ ಇಂಗ್ಲೆಂಡ್ ನಂತರ ಚೇತರಿಸಿಕೊಂಡಿತ್ತು. ಮೊದಲ ಮೂರು ಪಂದ್ಯಗಳಲ್ಲಿ ಸೋತಿದ್ದ ತಂಡ ಕಳೆದೆರಡು ಹಣಾಹಣಿಗಳಲ್ಲಿ ಗೆಲುವಿನ ಲಯಕ್ಕೆ ಮರಳಿದೆ. ಹೀಗಾಗಿ ಸೆಮಿಫೈನಲ್ ಆಸೆ ಚಿಗುರಿದೆ. ಪಾಕಿಸ್ತಾನ ಹಿಂದಿನ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಎದುರು ಜಯ ಗಳಿಸಿ ಸೋಲಿನ ಸರಪಳಿ ಕಳಚಿಕೊಂಡಿತ್ತು. ಮಹಿಳೆಯರ ವಿಶ್ವಕಪ್‌ನ ಸತತ 18 ಪಂದ್ಯಗಳಲ್ಲಿ ಈ ತಂಡ ಜಯ ಗಳಿಸಿರಲಿಲ್ಲ.

ಸೋಫಿಯಾ ಡಂಕ್ಲಿ, ನಥಾಲಿಯಾ ಶೀವರ್ ಮತ್ತು ಟಾಮಿ ಬ್ಯೂಮೌಂಟ್ ಅವರು ಇಂಗ್ಲೆಂಡ್ ತಂಡದ ಬ್ಯಾಟಿಂಗ್ ವಿಭಾಗದ ಬಲವಾಗಿದ್ದು ಕೇಟ್ ಕ್ರಾಸ್ ಮತ್ತು ಸೋಫಿ ಎಕ್ಲೆಸ್ಟೋನ್ ಬೌಲಿಂಗ್‌ನಲ್ಲಿ ಭರವಸೆ ಮೂಡಿಸಿದ್ದಾರೆ.

ಪಾಕಿಸ್ತಾನವು ಬ್ಯಾಟರ್‌ಗಳಾದ ಅಲಿಯಾ ರಿಯಾಜ್, ಮುನೀಬಾ ಅಲಿ, ಬಿಸ್ಮಾ ಮರೂಫ್ ಅವರ ಮೇಲೆ ಭರವಸೆ ಇರಿಸಿಕೊಂಡಿದೆ. ಬೌಲಿಂಗ್ ಆಲ್‌ರೌಂಡರ್‌ಗಳಾದ ನಿದಾ ದಾರ್, ಘುಲಾಮ್ ಫಾತಿಮಾ, ಬೌಲರ್‌ಗಳಾದ ಡಯಾನ ಬೇಗ್, ನಶ್ರಾ ಸಂಧು, ಸಿದ್ರಾ ಅಮೀನ್ ಮುಂತಾದವರು ನಿರೀಕ್ಷೆ ಮೂಡಿಸಿದ್ದಾರೆ. ಸೆಮಿಫೈನಲ್ ಹಂತಕ್ಕೇರಲು ಸಾಧ್ಯವಿಲ್ಲದ ಕಾರಣದಿಂದ ತಂಡ ಕೊನೆಯ ಎರಡು ಪಂದ್ಯಗಳಲ್ಲಿ ಜಯ ಸಾಧಿಸಿ ಸಮಾಧಾನಪಟ್ಟುಕೊಳ್ಳಲು ಪ್ರಯತ್ನಿಸಲಿದೆ.

ಇಂಗ್ಲೆಂಡ್‌ಗೆ ಎರಡು ಪಂದ್ಯಗಳು ಉಳಿದಿದ್ದು, ಎರಡರಲ್ಲೂ ಜಯ ಸಾಧಿಸಿ ದರೆ ಮಾತ್ರ ಸೆಮಿಫೈನಲ್ ಹಾದಿ ಸುಗಮವಾಗಲಿದೆ.




ಕೇಟ್ ಕ್ರಾಸ್ –ಎಎಫ್‌ಪಿ ಚಿತ್ರ

ಟಿಟಿ: ಸೆಮಿಗೆ ಶರತ್ ಕಮಲ್

ದೋಹಾ (ಪಿಟಿಐ): ಭಾರತದ ಅನುಭವಿ ಆಟಗಾರ ಶರತ್ ಕಮಲ್ ಇಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಬುಧವಾರ ನಡೆದ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಶರತ್ 11–8, 11–7, 11–4ರಿಂದ ಕ್ರೊವೆಷ್ಯಾದ ಟಾಮಿಸ್ಲಾವ್ ಪುಚಾರ್ ವಿರುದ್ಧ ಗೆದ್ದರು. ಮೊದಲ ಸುತ್ತಿನಲ್ಲಿ ಜಿ. ಸತ್ಯನ್ ಸೋಲನುಭವಿಸಿದ್ದಾರೆ. ಇದರಿಂದಾಗಿ ಸಿಂಗಲ್ಸ್‌ನಲ್ಲಿ ಶರತ್ ಒಬ್ಬರೇ ಈಗ ಭಾರತದ ಪದಕ ಜಯದ ಭರವಸೆಯನ್ನು ಜೀವಂತವಾಗಿಟ್ಟಿದ್ದಾರೆ. ನಾಲ್ಕರ ಘಟ್ಟದಲ್ಲಿ ಶರತ್ ಅವರು ಚೀನಾದ ಯುವಾನ್ ಲೈಸೆನ್ ಅವರನ್ನು ಎದುರಿಸುವರು.


ಶರತ್ ಕಮಲ್

ಈ ವಿಭಾಗದಲ್ಲಿ ಭಾರತದ ಮಾನವ್ ಠಕ್ಕರ್, ಹರ್ಮೀತ್ ದೇಸಾಯಿ, ಎಸ್‌ಎಫ್‌ಆರ್ ಸ್ನೇಹಿತ್ ಮತ್ತು ಮುದಿತ್ ದಾನಿ ನಿರಾಶೆ ಅನುಭವಿಸಿದರು. ಮಿಶ್ರ ಡಬಲ್ಸ್‌ನಲ್ಲಿ ಸತ್ಯನ್ ಮತ್ತು ಮಣಿಕಾ ಬಾತ್ರಾ ಜೋಡಿಯು ಫೈನಲ್ ತಲುಪಿದೆ. ಏಳನೇ ಶ್ರೇಯಾಂಕದ ಭಾರತದ ಜೋಡಿಯು 3–2ರಿಂದ ಹಾಂಕಾಂಗ್‌ನ ವಾಂಗ್ ಚುನ್ ಟಿಂಗ್ ಮತ್ತು ಡೂ ಹೊಯ್ ಕೆನ್ ವಿರುದ್ಧ ಗೆದ್ದಿತು.

ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಮಣಿಕಾ ಬಾತ್ರಾ 7–11, 5–11, 6–11ರಿಂದ ಚೀನಾ ಫ್ಯಾನ್ ಸಿಕಿ ವಿರುದ್ಧ ಸೋತರು.

ಅರ್ಚನಾ ಕಾಮತ್ ಮತ್ತು ಸುತೀರ್ಥ ಮುಖರ್ಜಿ ಅವರನ್ನು ಹೊರತುಪಡಿಸಿದರೆ, ಶ್ರೀಜಾ ಅಕುಲಾ, ಕೃತ್ವಿಕಾ ಸಿನ್ಹಾ ರಾಯ್ ಮತ್ತು ಪ್ರಾಪ್ತಿ ಸೇನ್ ಮೊದಲ ಸುತ್ತಿನಲ್ಲಿಯೇ ನಿರ್ಗಮಿಸಿದರು.

ರ್‍ಯಾಂಕಿಂಗ್: ಅಗ್ರಸ್ಥಾನಕ್ಕೆ ಜಡೇಜ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ರವೀಂದ್ರ ಜಡೇಜ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಆಲ್‌ರೌಂಡರ್ ವಿಭಾಗದಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿದ್ದಾರೆ.

ಹೋದ ವಾರ ಅವರು ಎರಡನೇ ಸ್ಥಾನಕ್ಕೆ ಇಳಿದಿದ್ದರು. ಈಗ ಮತ್ತೆ ವೆಸ್ಟ್ ಇಂಡೀಸ್‌ನ ಜೇಸನ್ ಹೋಲ್ಡರ್ ಅವರನ್ನು ಹಿಂದಿಕ್ಕಿ ಮೇಲೇರಿದ್ದಾರೆ.


ಜಡೇಜ ಖಾತೆಯಲ್ಲಿ 385 ಪಾಯಿಂಟ್ಸ್ ಇವೆ. ಆರ್. ಅಶ್ವಿನ್ ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಬೌಲರ್‌ಗಳ ವಿಭಾಗದಲ್ಲಿಯೂ ಅಶ್ವಿನ್ ಎರಡನೇ ಮತ್ತು ವೇಗಿ ಜಸ್‌ಪ್ರೀತ್ ಬೂಮ್ರಾ ನಾಲ್ಕನೇ ಸ್ಥಾನ ಉಳಿಸಿಕೊಂಡಿದ್ದಾರೆ.

ಬ್ಯಾಟರ್‌ಗಳ ವಿಭಾಗದಲ್ಲಿ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಏಳನೇ ಸ್ಥಾನಕ್ಕೆ ಇಳಿದಿದ್ದಾರೆ. ಒಂದು ಸ್ಥಾನ ಕಳೆದುಕೊಂಡಿದ್ದಾರೆ. ವಿರಾಟ್ ಕೊಹ್ಲಿ ಮತ್ತು ರಿಷಭ್ ಪಂತ್ ಅವರು ಕ್ರಮವಾಗಿ ಒಂಬತ್ತು ಹಾಗೂ ಹತ್ತನೇ ಸ್ಥಾನ ಗಳಿಸಿದ್ದಾರೆ. ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಬಡ್ತಿ ಪಡೆದು, ಐದನೇ ಸ್ಥಾನಕ್ಕೇರಿದ್ದಾರೆ.


ರವೀಂದ್ರ ಜಡೇಜ

ದೇಶದಲ್ಲೂ ಏರಿಕೆಯತ್ತ ಕೋವಿಡ್

ಏಷ್ಯಾ ಮತ್ತು ಯುರೋಪಿನ ಕೆಲವು ದೇಶಗಳಲ್ಲಿ ಕೋವಿಡ್ ಮತ್ತೆ ಏರಿಕೆ ಆಗುತ್ತಿದೆ. ಅದರ ಜತೆಗೆ ಭಾರತದಲ್ಲಿಯೂ ಕೋವಿಡ್‌ನ ದೈನಂದಿನ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ ದಾಖಲಾಗುತ್ತಿದೆ. ದೇಶದಾದ್ಯಂತ ಕೋವಿಡ್ ನಿರ್ಬಂಧ ಹಂತ ಹಂತವಾಗಿ ಹಿಂಪಡೆದಿರುವುದು, ಜನರು ವೈಯಕ್ತಿಕ ಅಂತರ, ಮಾಸ್ಕ್ ಧರಿಸುವುದೂ ಸೇರಿದಂತೆ ಕೋವಿಡ್ ಮಾರ್ಗಸೂಚಿ ಪಾಲನೆಯಲ್ಲಿ ತೋರುತ್ತಿರುವ ನಿರ್ಲಕ್ಷ್ಯದಿಂದಾಗಿ ಸೋಂಕಿನ ಪ್ರಕರಣಗಳಲ್ಲಿ ಕೊಂಚ ಏರಿಕೆ ಕಂಡು ಬರುತ್ತಿದೆ.



ಆಧಾರ: ಕೇಂದ್ರ ಸರ್ಕಾರದ 'ಮೈ ಗವರ್ನ್‌ಮೆಂಟ್' ವೆಬ್‌ಸೈಟ್–

ವಿಮಾನದ ಒಂದು ಬ್ಲ್ಯಾಕ್‌ಬಾಕ್ಸ್ ಪತ್ತೆ

ಬೀಜಿಂಗ್ (ಎಎಫ್‌ಪಿ): ಚೀನಾದ ದಕ್ಷಿಣ ಭಾಗದ ಗುಡ್ಡಗಾಡು ಪ್ರದೇಶದಲ್ಲಿ ಪತನಗೊಂಡಿದ್ದ ವಿಮಾನದ ಒಂದು ಬ್ಲ್ಯಾಕ್‌ಬಾಕ್ಸ್ ಬುಧವಾರ ಪತ್ತೆಯಾಗಿದ್ದು, ಇನ್ನೊಂದು ಬ್ಲ್ಯಾಕ್‌ಬಾಕ್ಸ್‌ಗಾಗಿ ಹುಡುಕಾಟ ನಡೆಯುತ್ತಿದೆ.

ವಿಮಾನದ ಪೈಲಟ್ ಕೊಠಡಿಯ ರೆಕಾರ್ಡರ್ ಸಹ ಪತ್ತೆಯಾಗಿದೆ ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಚೀನಾದ ವಿಮಾನಯಾನ ಪ್ರಾಧಿಕಾರದ ವಕ್ತಾರ ಲಿಯು ಲುಸಾಂಗ್ ಅವರು ಮಾಹಿತಿ ನೀಡಿದ್ದಾರೆ. ಆದರೆ ಈ ರೆಕಾರ್ಡರ್ ಪೂರ್ತಿ ಹಾನಿಗೀಡಾಗಿದೆ ಎಂದು ಚೀನಾದ ಮಾಧ್ಯಮವೊಂದು ವರದಿ ಮಾಡಿದೆ.

ಈ ವಿಮಾನದಲ್ಲಿ 132 ಮಂದಿ ಪ್ರಯಾಣಿಕರಿದ್ದರು. ಯಾವುದೇ ಪ್ರಯಾಣಿಕರು ಬದುಕುಳಿದ ಸಾಧ್ಯತೆಗಳಿಲ್ಲ ಎಂದು ವರದಿಗಳು ತಿಳಿಸಿವೆ. ಕೆಲವರ ಗುರುತಿನ ಚೀಟಿಗಳು, ವಿಮಾನದ ಕೆಲವು ಅವಶೇಷಗಳು ಬಿಟ್ಟರೆ ಯಾರೊಬ್ಬರ ಮೃತದೇಹವೂ ಸಿಕ್ಕಿಲ್ಲ. ಶೋಧಕ್ಕಾಗಿ ನಡೆಯುತ್ತಿರುವ ಕಾರ್ಯಾಚರಣೆಗೆ ಮಳೆ ಅಡ್ಡಿಯಾಗಿದೆ.

'ಕೋವಿಡ್ ಪ್ರಕರಣ ಏರಿಕೆ, ಮರಣ ಪ್ರಮಾಣ ಇಳಿಕೆ'

ಜಿನಿವಾ (ಎಪಿ): ಜಗತ್ತಿನಾದ್ಯಂತ ಕಳೆದೊಂದು ವಾರದಲ್ಲಿ ಕೋವಿಡ್ ಪ್ರಕರಣಗಳು ಏರಿಕೆಯಾಗಿದ್ದು, ಮರಣ ಪ್ರಮಾಣ ಇಳಿಕೆಯಾಗುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ವಾರದ ಅವಧಿಯಲ್ಲಿ 1.20 ಕೋಟಿ ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿವೆ. 33,000 ಮಂದಿ ಮೃತಪಟ್ಟಿದ್ದಾರೆ. ಶೇ 23ರಷ್ಟು ಮರಣ ಪ್ರಮಾಣ ಇಳಿಕೆಯಾಗಿದೆ. ಶೇ 7ರಷ್ಟು ಕೋವಿಡ್ ಪ್ರಕರಣ ಹೆಚ್ಚಾಗಿದೆ ಎಂದು ಅದು ತಿಳಿಸಿದೆ.

ಜನವರಿಯಲ್ಲಿ ಇಳಿಕೆ ಕಂಡಿದ್ದ ಪ್ರಕರಣಗಳು ಕಳೆದ ವಾರದಿಂದ ಮತ್ತೆ ಏರಿಕೆ ಕಂಡಿವೆ. ಯುರೋಪ್, ಉತ್ತರ ಅಮೆರಿಕ ಮತ್ತು ಇತರೆ ದೇಶಗಳಲ್ಲಿ ಓಮೈಕ್ರಾನ್ ರೂಪಾಂತರಿ ಸೋಂಕು ಹೆಚ್ಚಾಗಿದೆ. ಪಶ್ಚಿಮ ಫೆಸಿಫಿಕ್ ಭಾಗದಲ್ಲಿ ಇದರ ಪ್ರಭಾವ ತೀವ್ರವಾಗಿದೆ ತನ್ನ ವರದಿಯಲ್ಲಿ ಹೇಳಿದೆ.

ಹಿಲರಿ ಕ್ಲಿಂಟನ್, ಶ್ವೇತಭವನದ ಪತ್ರಿಕಾ ಕಾರ್ಯದರ್ಶಿಗೆ ಕೋವಿಡ್:
ನ್ಯೂಯಾರ್ಕ್/ವಾಷಿಂಗ್ಟನ್ (ಎಪಿ): ಅಮೆರಿಕದ ಮಾಜಿ ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಹಾಗೂ ಶ್ವೇತ ಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಪಿಸಾಕಿ ಅವರಿಗೆ ಕೋವಿಡ್ ದೃಢಪಟ್ಟಿದೆ.

ಅಮೆರಿಕದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರಿಗೆ ಕೋವಿಡ್ ನೆಗಟಿವ್ ವರದಿ ಬಂದಿದ್ದು, ತಮ್ಮ ನಿವಾಸದಲ್ಲೇ ಕ್ವಾರಂಟೈನ್ ಆಗಿದ್ದಾರೆ. ಕೆಲ ದಿನಗಳ ಹಿಂದೆ ಬರಾಕ್ ಒಬಾಮ್ ಅವರಿಗೂ ಕೋವಿಡ್ ತಗುಲಿತ್ತು.

ಕನಸಾಗೇ ಉಳಿದ ಹೆಣ್ಣು ಮಕ್ಕಳ ಶಿಕ್ಷಣ

ಕಾಬೂಲ್ (ಎಪಿ): ಅಫ್ಘಾನಿಸ್ತಾನದಲ್ಲಿ ಹೊಸ ಶೈಕ್ಷಣಿಕ ವರ್ಷ ಆರಂಭದ ದಿನವಾದ ಬುಧವಾರದಿಂದ ಬಾಲಕಿಯರಿಗೂ ಶಾಲೆ ಆರಂಭಿಸಲಾಗುವುದು ಎಂಬ ತಾಲಿಬಾನ್ ಆಡಳಿತದ ಮಾತು ಹುಸಿಯಾಗಿದ್ದು, ಶಾಲೆಗೆ ಬಂದ ಬಾಲಕಿಯರು ವಾಪಸ್ ಮನೆಗೆ ತೆರಳಬೇಕಾಯಿತು.


ಆರನೇ ತರಗತಿಯಿಂದ ಮೇಲ್ಪಟ್ಟ ವಿದ್ಯಾರ್ಥಿನಿಯರಿಗೆ ಶಾಲೆಯಲ್ಲಿ ಕಲಿಕೆಗೆ ಅವಕಾಶ ನೀಡಬೇಕು ಎಂಬ ಅಂತರರಾಷ್ಟ್ರೀಯ ಒತ್ತಡಕ್ಕೆ ಮಣಿದಿದ್ದ ತಾಲಿಬಾನ್, ಹೊಸ ಶೈಕ್ಷಣಿಕ ವರ್ಷದಿಂದ ಅದನ್ನು ಪ್ರಾರಂಭಿಸುವುದಾಗಿ ಸೋಮವಾರವಷ್ಟೇ ಭರವಸೆ ನೀಡಿತ್ತು. ಆದರೆತನ್ನ ನಿರ್ಧಾರ ಬದಲಿಸಿದ್ದು, ಬುಧವಾರ ಹೊಸ ನಿರೀಕ್ಷೆಯೊಂದಿಗೆ ಶಾಲೆಗಳಿಗೆ ತೆರಳಿದ ವಿದ್ಯಾರ್ಥಿನಿಯರು ನಿರಾಸೆಗೊಂಡರು.


ಮಹಿಳೆ ಮೇಲೆ ಐವರಿಂದ ಲೈಂಗಿಕ ದೌರ್ಜನ್ಯ

ಚೆನ್ನೈ: ತನ್ನ ಸ್ನೇಹಿತನ ಜತೆ ರಾತ್ರಿ ಮನೆಗೆ ಹಿಂದಿರುಗುತ್ತಿದ್ದ ಮಹಿಳೆಯನ್ನು ಅಪಹರಿಸಿದ ಐವರು ದುಷ್ಕರ್ಮಿಗಳು ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆಘಾತಕಾರಿ ಘಟನೆ ತಮಿಳುನಾಡಿನ ವೆಲ್ಲೂರು ನಗರದಲ್ಲಿ ಬೆಳಕಿಗೆ ಬಂದಿದೆ.

ಅಲ್ಲದೆ ಆಕೆಯ ಸ್ನೇಹಿತ ನನ್ನು ಎಟಿಎಂ ಬಳಿಗೆ ಎಳೆ ದೊಯ್ದು, ₹40,000 ವಿತ್ ಡ್ರಾ ಮಾಡಿಸಿಕೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದ ಹಿರಿಯ ಪೊಲೀಸ್ ಅಧಿಕಾರಿ, ಆಸ್ಪತ್ರೆಯಲ್ಲಿ ಕೆಲಸ ಮಾಡುವ ಸಂತ್ರಸ್ತ ಮಹಿಳೆ ಆನ್‌ಲೈನ್ ಮೂಲಕ ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಐವರು ಆರೋಪಿಗಳನ್ನು ಬಂಧಿಸಲಾಗಿದೆ. ಇದರಲ್ಲಿ ಕಾನೂನು ಸಂಘರ್ಷ ಎದುರಿಸುತ್ತಿರುವ ಇಬ್ಬರು ಬಾಲಕರು ಇದ್ದಾರೆ. ಆರೋಪಿಗಳು ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದನ್ನು ಮತ್ತು ಆಕೆಯ ಸ್ನೇಹಿತನಿಂದ ₹40,000 ಕಿತ್ತುಕೊಂಡಿದ್ದನ್ನು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

ಈ ಸಂಬಂಧ ವಿಧಾನಸಭೆ ಅಧಿವೇಶನದಲ್ಲೂ ವಿಸ್ತೃತ ಹೇಳಿಕೆ ನೀಡಿದ ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು, 'ಸಂತ್ರಸ್ತೆ ತನ್ನ ಹುಟ್ಟೂರಿಗೆ ಹೋಗಿ, ಆ ಬಳಿಕ ಆನ್‌ಲೈನ್ ಮೂಲಕ ದೂರು ದಾಖಲಿಸಿದ್ದಾರೆ' ಎಂದು ಹೇಳಿದರು.





ಆಶ್ಲಿ ಬಾರ್ಟಿ	
ದೇಶ:ಆಸ್ಟ್ರೇಲಿಯಾ	
ರ‍್ಯಾಂಕಿಂಗ್	1
ಡಬಲ್ಸ್ ರ‍್ಯಾಂಕಿಂಗ್	101
ವಯಸ್ಸು	25
ಒಟ್ಟು ಪ್ರಶಸ್ತಿ	15
ಗ್ರ್ಯಾನ್‌ಸ್ಲಾಂ ಪ್ರಶಸ್ತಿ	3
ಆಸ್ಟ್ರೇಲಿಯನ್ ಓಪನ್	2022
ವಿಂಬಲ್ಡನ್	2021
ಫ್ರೆಂಚ್ ಓಪನ್	2019
ಗ್ರ್ಯಾನ್‌ಸ್ಲಾಂನಲ್ಲಿ ಸಾಧನೆ	
57 ಜಯ	27 ಸೋಲು

ಆ್ಯಶ್ಲಿ ಬಾರ್ಟಿ– ಎಎಫ್‌ಪಿ ಚಿತ್ರ

ಮೂರು ಗ್ರ್ಯಾನ್ ಸ್ಲಾಂ ಒಡತಿ; ರ‍್ಯಾಂಕಿಂಗ್‌ನಲ್ಲಿ ಅಗ್ರ ಕ್ರಮಾಂಕದ ಆಟಗಾರ್ತಿ

ಆ್ಯಶ್ಲಿ ಬಾರ್ಟಿ ಅಚ್ಚರಿಯ ವಿದಾಯ

ಬ್ರಿಸ್ಬೇನ್ (ಎಪಿ): ತವರಿನಂಗಳದಲ್ಲಿ ಗ್ರ್ಯಾನ್ ಸ್ಲಾಂ ಪ್ರಶಸ್ತಿ ಗೆದ್ದು ಎರಡೇ ತಿಂಗಳ ಒಳಗೆ ಆಸ್ಟ್ರೇಲಿಯಾದ ಯುವ ಟೆನಿಸ್ ಆಟಗಾರ್ತಿ ಆ್ಯಶ್ಲಿ ಬಾರ್ಟಿ ನಿವೃತ್ತಿ ಘೋಷಿಸಿದ್ದಾರೆ. ಅವರಿಗೀಗ 25 ವರ್ಷ. ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವಾಗಲೇ ಈ ನಿರ್ಧಾರ ಪ್ರಕಟಿಸಿ ಅಚ್ಚರಿ ಮೂಡಿಸಿದ್ದಾರೆ.

ಮೂರು ಗ್ರ್ಯಾನ್ ಸ್ಲಾಂ ಪ್ರಶಸ್ತಿಗಳ ಒಡತಿ ಬಾರ್ಟಿ ಬುಧವಾರ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಬಿಡುಗಡೆ ಮಾಡಿರುವ ವಿಡಿಯೊ ತುಣುಕಿನಲ್ಲಿ ನಿವೃತ್ತಿ ವಿಷಯ ಪ್ರಕಟಿಸಿದ್ದಾರೆ. ’ವೈಯಕ್ತಿಕವಾಗಿ ನಿವೃತ್ತಿಗೆ ಇದು ಸರಿಯಾದ ಸಮಯ ಎಂದು ನನ್ನ ಮನಸ್ಸು ಹೇಳಿತು. ಬೇರೆ ಕನಸನ್ನು ನನಸುಗೊಳಿಸಲು ಈ ತೀರ್ಮಾನ ಕೈಗೊಂಡಿದ್ದೇನೆ’ ಎಂದು ಅವರು ಗದ್ಗದಿತರಾಗಿ ಹೇಳಿದ್ದಾರೆ.

ಬಾರ್ಟಿ ಈ ಹಿಂದೆಯೂ ಒಮ್ಮೆ ಟೆನಿಸ್‌ನಿಂದ ದೂರ ಉಳಿಯಲು ನಿರ್ಧರಿಸಿದ್ದರು. 2011ರಲ್ಲಿ ವಿಂಬಲ್ಡನ್ ಜೂನಿಯರ್ ವಿಭಾಗದಲ್ಲಿ ಅವರು ಚಾಂಪಿಯನ್ ಆಗಿದ್ದರು. ಆಗ 15 ವರ್ಷದವರಾಗಿದ್ದ ಅವರು ಭರವಸೆ ಮೂಡಿಸಿದ್ದರು. ಆದರೆ 2014ರಲ್ಲಿ ಎರಡು ವರ್ಷ ಆಡದೇ ಇರಲು ನಿರ್ಧರಿಸಿದ್ದರು. ಪ್ರಯಾಣದ ಸುಸ್ತು ಮತ್ತು ಒತ್ತಡ ನಿರ್ವಹಣೆ ಸಾಧ್ಯವಾಗುತ್ತಿಲ್ಲ ಎಂದು ಹೇಳಿದ್ದರು.

ಎರಡು ವರ್ಷ ವೃತ್ತಿಪರ ಕ್ರಿಕೆಟ್ ಆಡಿದ ನಂತರ ರ‍್ಯಾಕೆಟ್ ಹಿಡಿದು ಕಣಕ್ಕೆ ಮರಳಿದ್ದರು. 2019ರಲ್ಲಿ ಫ್ರೆಂಚ್ ಓಪನ್ ಗೆಲ್ಲುವ ಮೂಲಕ ಮೊದಲ ಗ್ರ್ಯಾನ್ ಸ್ಲಾಂ ಪ್ರಶಸ್ತಿ ಮುಡಿಗೇರಿಸಿಕೊಂಡ ಅವರು ಈ ವರ್ಷ ಜನವರಿಯಲ್ಲಿ ಮೆಲ್ಬರ್ನ್ ಪಾರ್ಕ್‌ನಲ್ಲಿ ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಚಾಂಪಿಯನ್ ಆಗಿದ್ದರು.

ಬಾರ್ಟಿ ವೃತ್ತಿಪರ ಟೆನಿಸ್ ಆಡಲು ಶುರು ಮಾಡಿದ್ದು 2010ರಲ್ಲಿ. ಸತತ 114 ವಾರ ಸೇರಿದಂತೆ ಒಟ್ಟು 121 ವಾರಗಳಿಂದ ಅಗ್ರ ಕ್ರಮಾಂಕದಲ್ಲಿ ಇದ್ದಾರೆ. ರ‍್ಯಾಂಕಿಂಗ್‌ನ ಅಗ್ರ ಸ್ಥಾನದಲ್ಲಿರುವ ಸಂದರ್ಭದಲ್ಲೇ ಕಣದಿಂದ ನಿವೃತ್ತಿ ಹೊಂದಿರುವ ಎರಡನೇ ಆಟಗಾರ್ತಿ ಅವರು. 2008ರಲ್ಲಿ ಜಸ್ಟಿನ್ ಹೆನಿನ್ ನಿವೃತ್ತಿಯಾಗುವಾಗ ಮೊದಲ ಸ್ಥಾನದಲ್ಲಿದ್ದರು.

> **ಬಾರ್ಟಿ, ಈ ಬೇಸರವನ್ನು ನಾನು ಹೇಗೆ ತಡೆದುಕೊಳ್ಳಲಿ? ಇನ್ನು ಟೂರ್ನಿಗಳಿಗೆ ಹೋಗುವಾಗ ನೀನು ಜೊತೆಯಲ್ಲಿರುವುದಿಲ್ಲವಲ್ಲ. ಮುಂದೇನು? ಗಾಲ್ಫ್‌ನಲ್ಲಿ ಗ್ರ್ಯಾನ್‌ಸ್ಲಾಂ ಮೇಲೆ ಕಣ್ಣಿಟ್ಟಿರುವೆಯಾ?**
> **ಸಿಮೋನಾ ಹಲೆಪ್**
> ರೊಮೇನಿಯಾ ಆಟಗಾರ್ತಿ


> **ಅತ್ಯುತ್ತಮ ಆಟದ ಮೂಲಕ ಗಮನ ಸೆಳೆಯಲು ನಿಮಗೆ ಸಾಧ್ಯವಾಗಿತ್ತು. ನಿಮ್ಮೊಂದಿಗೆ ಕ್ರೀಡಾಂಗಣದಲ್ಲಿ ಸೆಣಸಲು ಲಭಿಸಿದ ಅವಕಾಶ ಅಪೂರ್ವವಾಗಿತ್ತು. ಮುಂದಿನ ಬದುಕು ಸುಖಕರವಾಗಿರಲಿ.**
> **ಕರೋಲಿನಾ ಪ್ಲಿಸ್ಕೋವ**
> ಜೆಕ್ ಗಣರಾಜ್ಯದ ಆಟಗಾರ್ತಿ

ಟೆಸ್ಟ್: ಆಸ್ಟ್ರೇಲಿಯಾಗೆ ಮುನ್ನಡೆ

ಲಾಹೋರ್: ವೇಗದ ದಾಳಿಯ ಮೂಲಕ ಮಧ್ಯಮ ಮತ್ತು ಕೆಳಕ್ರಮಾಂಕವನ್ನು ದೂಳೀಪಟ ಮಾಡಿದ ಆಸ್ಟ್ರೇಲಿಯಾ ತಂಡ ಇಲ್ಲಿ ನಡೆಯುತ್ತಿರುವ ಪಾಕಿಸ್ತಾನ ಎದುರಿನ ಮೂರನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ಮುನ್ನಡೆ ಸಾಧಿಸಿದೆ.

ಆಸ್ಟ್ರೇಲಿಯಾದ ಮೊದಲ ಇನಿಂಗ್ಸ್ ಮೊತ್ತವಾದ 391 ರನ್‌ಗಳಿಗೆ ಉತ್ತರಿಸಿದ ಪಾಕಿಸ್ತಾನ 268 ರನ್‌ಗಳಿಗೆ ಪತನ ಕಂಡಿತು. ಮೂರನೇ ದಿನದಾಟದ ಮುಕ್ತಾಯದ ವೇಳೆ ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್‌ನಲ್ಲಿ ವಿಕೆಟ್ ಕಳೆದುಕೊಳ್ಳದೆ 11 ರನ್ ಗಳಿಸಿದ್ದು ಒಟ್ಟಾರೆ 134 ರನ್‌ಗಳ ಮುನ್ನಡೆಯಲ್ಲಿದೆ.

ಎರಡನೇ ದಿನದಾಟದ ಮುಕ್ತಾಯಕ್ಕೆ ಒಂದು ವಿಕೆಟ್ ಕಳೆದುಕೊಂಡು 90 ರನ್ ಗಳಿಸಿದ್ದ ಪಾಕಿಸ್ತಾನ ಉತ್ತಮ ಸ್ಥಿತಿಯಲ್ಲಿತ್ತು. ಆದರೆ ಬುಧವಾರ ಪ್ರವಾಸಿ ತಂಡದ ಬೌಲಿಂಗ್ ದಾಳಿಯನ್ನು ಎದುರಿಸಲಾಗದೆ ತತ್ತರಿಸಿತು. ತಂಡದ ಕೊನೆಯ 9 ವಿಕೆಟ್‌ಗಳು ಕೇವಲ 98 ರನ್‌ಗಳಿಗೆ ಉರುಳಿದ್ದವು.



ಪ್ಯಾಟ್ ಕಮಿನ್ಸ್ ಬೌಲಿಂಗ್ ಶೈಲಿ – ಎಎಫ್‌ಪಿ ಚಿತ್ರ

ಮಂಗಳವಾರ ಕ್ರಮವಾಗಿ 45 ಮತ್ತು 30 ರನ್ ಗಳಿಸಿ ಅಜೇಯರಾಗಿದ್ದ ಅಬ್ದುಲ್ಲ ಶಫೀಕ್ ಮತ್ತು ಅಜರ್ ಅಲಿ ಬುಧವಾರ ಬೆಳಿಗ್ಗೆ ಅಮೋಘ ಬ್ಯಾಟಿಂಗ್ ಮಾಡಿ ಭರವಸೆ ಮೂಡಿಸಿದರು. ಬಾಬರ್ ಆಜಂ ಕೂಡ ಅರ್ಧಶತಕ ಗಳಿಸಿ ಮಿಂಚಿದರು. ಈ ಮೂವರು ಔಟಾದ ನಂತರ ಯಾರಿಗೂ ಕ್ರೀಸ್‌ನಲ್ಲಿ ತಳವೂರಲು ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 391; ಪಾಕಿಸ್ತಾನ (ಮಂಗಳವಾರ 39 ಓವರ್‌ಗಳಲ್ಲಿ 1 ವಿಕೆಟ್‌ಗೆ 90): 116.4 ಓವರ್‌ಗಳಲ್ಲಿ 268 (ಅಬ್ದುಲ್ಲ ಶಫೀಕ್ 81, ಅಜರ್ ಅಲಿ 78, ಬಾಬರ್ ಆಜಂ 67; ಮಿಚೆಲ್ ಸ್ಟಾರ್ಕ್ 33ಕ್ಕೆ4, ಪ್ಯಾಟ್ ಕಮಿನ್ಸ್ 56ಕ್ಕೆ5, ನೇಥನ್ ಲಯನ್ 95ಕ್ಕೆ1); ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 3 ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ 11 (ಉಸ್ಮಾನ್ ಖ್ವಾಜಾ 7, ಡೇವಿಡ್ ವಾರ್ನರ್ 4).

ಫುಟ್‌ಬಾಲ್: ಭಾರತಕ್ಕೆ ಸೋಲು

ಮನಾಮ (ಪಿಟಿಐ): ತನಗಿಂತ ಮೇಲಿನ ರ‍್ಯಾಂಕಿನ ಬಹರೇನ್ ತಂಡದ ವಿರುದ್ಧ ವೀರೋಚಿತ ಹೋರಾಟ ತೋರಿದ ಭಾರತ ಫುಟ್‌ಬಾಲ್ ತಂಡವು ಸ್ನೇಹಪರ ಪಂದ್ಯದಲ್ಲಿ ಸೋಲನುಭವಿಸಿತು.

ಬುಧವಾರ ನಡೆದ ಹಣಾಹಣಿಯಲ್ಲಿ ಬಹರೇನ್ 2–1ರಿಂದ ಗೆಲುವು ಸಾಧಿಸಿತು.

ಅಲ್ ಮುರಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಹರೇನ್ ಪರ 38ನೇ ನಿಮಿಷದಲ್ಲಿ ಮೊಹಮ್ಮದ್ ಅಲ್ ಹರ್ದಾನ್ ಮೊದಲ ಗೋಲು ಗಳಿಸಿದರು. ರಾಹುಲ್ ಭೆಕೆ 59ನೇ ನಿಮಿಷದಲ್ಲಿ ಗಳಿಸಿದ ಸೊಗಸಾದ ಹೆಡರ್ ಮೂಲಕ, ಭಾರತ ತಿರುಗೇಟು ನೀಡಿತು.

ಆದರೆ ಮೆಹದಿ ಹುಮೈದನ್ 88ನೇ ನಿಮಿಷದಲ್ಲಿ ಕಾಲ್ಚಳಕ ತೋರಿ ಬಹರೇನ್ ತಂಡದ ಜಯ ಖಚಿತಪಡಿಸಿದರು. ವಿಶ್ವ ಕ್ರಮಾಂಕದಲ್ಲಿ ಬಹರೇನ್ 89ನೇ ಸ್ಥಾನದಲ್ಲಿದ್ದರೆ ಭಾರತ 104ನೇ ಸ್ಥಾನದಲ್ಲಿದೆ.

ಫುಟ್‌ಬಾಲ್: ಅಮೀರ್ ನಾಲ್ಕು ಗೋಲು

ಬೆಂಗಳೂರು: ಅಮೀರ್ ಪಾಲತ್ತಿಂಗಲ್ ಗಳಿಸಿದ ಅಮೋಘ ನಾಲ್ಕು ಗೋಲುಗಳ ಬಲದಿಂದ ಮಿಸಾಕ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮಿಸಾಕ 12–0ರಿಂದ ಸರ್ಕಾರಿ ಮುದ್ರಣಾಲಯ ತಂಡವನ್ನು ಪರಾಭವಗೊಳಿಸಿತು. ಅಮೀರ್ 19, 24, 33 ಮತ್ತು 45ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಜ್ಯೋತಿಶ್ ಎಂ. (4, 6 ಮತ್ತು 14ನೇ ನಿಮಿಷ) ಹಾಗೂ ಸೌರವ್ ಚಾಂದ್ (2 ಮತ್ತು 30ನೇ ನಿ.) ಕೂಡ ಮಿಂಚಿದರು. ತಿರುವೆಂಕೊವನ್ (37ನೇ ನಿ.), ಸಂದೀಪ್ ನಾಯಕ್ (38ನೇ ನಿ.) ಮತ್ತು ಶ್ರೀಕಾಂತ್ ನಾಯಕ್ (42ನೇ ನಿ.) ವಿಜೇತ ತಂಡದ ಪರ ತಲಾ ಒಂದು ಗೋಲು ಹೊಡೆದರು.

ಇನ್ನುಳಿದ ಪಂದ್ಯಗಳಲ್ಲಿ ಆ್ಯಕ್ಟಿವ್ ಯುನೈಟೆಡ್ ಎಫ್‌ಸಿ 5–0ಯಿಂದ ಬೆಂಗಳೂರು ಬಾಯ್ಸ್ ಎದುರು, ಬಾಷ್ ಎಫ್‌ಸಿ 6–0ಯಿಂದ ಬೆಂಗಳೂರು ಯಂಗ್‌ಸ್ಟರ್ಸ್ ವಿರುದ್ಧ ಗೆದ್ದವು. ಮತ್ತೊಂದು ಪಂದ್ಯದಲ್ಲಿ ಇಂದಿರಾನಗರ ಎಫ್‌ಸಿ 9–0ಯಿಂದ ರೇಂಜರ್ಸ್ ಎಫ್‌ಸಿ ತಂಡವನ್ನು ಸೋಲಿಸಿತು.

ಸ್ವಿಸ್ ಓಪನ್ ಬ್ಯಾಡ್ಮಿಂಟನ್: ಚಿರಾಗ್– ಸಾತ್ವಿಕ್‌ಗೆ ಗೆಲುವು

ಶ್ರೀಕಾಂತ್, ಸೈನಾ ಜಯದ ಆರಂಭ

ಬಾಸೆಲ್ (ಪಿಟಿಐ): ಎದುರಾಳಿಯನ್ನು ನೇರ ಗೇಮ್‌ಗಳಿಂದ ಮಣಿಸಿದ ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಸೈನಾ ನೆಹ್ವಾಲ್ ಅವರು ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಏಳನೇ ಶ್ರೇಯಾಂಕದ ಶ್ರೀಕಾಂತ್ 21-16, 21-17ರಲ್ಲಿ ಡೆನ್ಮಾರ್ಕ್‌ನ ಮ್ಯಾಡ್ಸ್ ಕ್ರಿಸ್ಟೊಫರ್‌ಸೆನ್ ಅವರನ್ನು ಮಣಿಸಿದರು. ಸೈನಾ 21–8, 21–13ರಲ್ಲಿ ಫ್ರಾನ್ಸ್‌ನ ಏಲಿ ಹೊಯಾಕ್ಸ್ ಎದುರು ಗೆದ್ದರು.

ಪುರುಷರ ಸಿಂಗಲ್ಸ್ ವಿಭಾಗದ ಮತ್ತೊಂದು ಪಂದ್ಯದಲ್ಲಿ ಪರುಪಳ್ಳಿ ಕಶ್ಯಪ್ 21-17, 21-9ರಲ್ಲಿ ಫ್ರಾನ್ಸ್‌ನ ಎನೋಗತ್ ರಾಯ್ ಎದುರು ಜಯ ಗಳಿಸಿದರು. ಭಾರತದವರೇ ಕಾದಾಡಿದ ಹಣಾಹಣಿಯಲ್ಲಿ ಎಚ್‌.ಎಸ್‌. ಪ್ರಣಯ್ 25-23, 21-16ರಲ್ಲಿ ಬಿ.ಸಾಯಿ ಪ್ರಣೀತ್ ಅವರನ್ನು ಮಣಿಸಿದರು.

ಪುರುಷರ ಡಬಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಜೋಡಿ ಇಂಡೊನೇಷ್ಯಾದ ಮೊಹಮ್ಮದ್ ಶೊಹಿಬುಲ್ ಫಿಕ್ರಿ ಮತ್ತು ಬಗಾಸ್ ಮೌಲಾನ ಅವರನ್ನು 17-21, 21-11, 21-18ರಲ್ಲಿ ಮಣಿಸಿದರು.



ಕಿದಂಬಿ ಶ್ರೀಕಾಂತ್ ಪಿಟಿಐ ಚಿತ್ರ

ಮಿಶ್ರ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ಸುಮಿತ್ ರೆಡ್ಡಿ ಮೊದಲನೇ ಸುತ್ತಿನಲ್ಲಿ ಸೋಲುಂಡರು. ಫ್ರಾನ್ಸ್‌ನ ಥಾಮ್ ಗಿಕ್ವೆಲ್–ಡೆಲ್ಫಿನ್ ಡೆಲ್ರು ಜೋಡಿ ಅಶ್ವಿನಿ–ಸುಮಿತ್ ಅವರನ್ನು 21–13, 21–9ರಲ್ಲಿ ಸೋಲಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ತ್ರೀಶಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಕೂಡ ನಿರಾಸೆ ಅನುಭವಿಸಿದರು. ಅವರು ಥಾಯ್ಲೆಂಡ್‌ನ ಜೊಂಗ್ಕೊಲ್ಫನ್ ಕಿಟಿತರಕುಲ್ ಮತ್ತು ರವಿಂದ ಪ್ರಜೊಂಗ್‌ಜಾಯ್ ಎದುರು 21–10, 21–17ರಲ್ಲಿ ಸೋತರು.

ಎಐಟಿಎ ಸಿಎಸ್ 7 ಟೆನಿಸ್ ಟೂರ್ನಿ

ನಾಲ್ಕರ ಘಟ್ಟಕ್ಕೆ ರಿತಿಕಾ, ಚನ್ನಮಲ್ಲಿಕಾರ್ಜುನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯದ ಓಟ ಮುಂದುವರಿಸಿದ ಚನ್ನಮಲ್ಲಿಕಾರ್ಜುನ ಯಾಳೆ ಮತ್ತು ರಿತಿಕಾ ರವಿ ಅವರು ಎಐಟಿಎ 14 ವರ್ಷದೊಳಗಿನವರ ಸಿಎಸ್7 ಟೆನಿಸ್ ಟೂರ್ನಿಯ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಶ್ರೀನಾಥ್ ಅಕಾಡೆಮಿಯಲ್ಲಿ ನಡೆಯುತ್ತಿರುವ ಟೂರ್ನಿಯ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಬುಧವಾರ ಚನ್ನಮಲ್ಲಿಕಾರ್ಜುನ 2-6, 6-2, 6-2ರಿಂದ ವಿಷ್ಣು ಮೋಹನ್ ಅವರನ್ನು ಮಣಿಸಿದರು. ಮೊದಲ ಸೆಟ್ ಕಳೆದುಕೊಂಡರೂ ಛಲಬಿಡದ ಚನ್ನಮಲ್ಲಿಕಾರ್ಜುನ ಅವರಿಗೆ ಜಯ ಒಲಿಯಿತು.

ಬಾಲಕಿಯರ ಸಿಂಗಲ್ಸ್ ಎಂಟರಘಟ್ಟದ ಸೆಣಸಾಟದಲ್ಲಿ ರಿತಿಕಾ 7-6 (10), 6-4ರಿಂದ ಜಿಯಾ ಸಿಂಗ್ ಸವಾಲು ಮೀರಿದರು.

ಬಾಲಕರ ವಿಭಾಗದ ಇನ್ನುಳಿದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಅಹಿಲ್ ಆಯಾಜ್ 6-3, 6-4ರಿಂದ ಮೀರ್ ಫಜಲ್ ಅಲಿ ವಿರುದ್ಧ, ಅನಂತ ಕೃಷ್ಣ 6-1, 6-1ರಿಂದ ರಿತಿಕ್ ಜಯಂತ್ ವಿರುದ್ಧ, ಎಂ.ದಿಗಂತ್ 6-2, 6-2ರಿಂದ ವಿ.ಎಸ್.ರಘು ಎದುರು ಜಯಿಸಿದರು.

ಬಾಲಕಿಯರ ವಿಭಾಗದಲ್ಲಿ ಇಶಾ ಮೋಹಿತೆ 6-2, 7-6 (3)ರಿಂದ ಸಾನ್ವಿ ಮಿಶ್ರಾ ವಿರುದ್ಧ, ದಿಶಾ ಕುಮಾರ್ 6-3, 2-6, 6-1ರಿಂದ ಆದ್ಯಾ ಚೌರಾಸಿಯಾ ಎದುರು, ಅರ್ಜಾನ್ ಖೊರಿಕವಾಲಾ 6–0, 6–1ರಿಂದ ಹೇಮಜಾ ರೆಡ್ಡಿ ಎದುರು ಜಯಿಸಿ ನಾಲ್ಕರ ಘಟ್ಟಕ್ಕೆ ಮುನ್ನಡೆದರು.

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು

ಜೀವ ವೈವಿಧ್ಯಕ್ಕೆ ಕಂಟಕವಾಗಿರುವ ಗ್ಲೈಫೋಸೇಟ್ ಎನ್ನುವ ಕಳೆನಾಶಕ ರಾಸಾಯನಿಕವನ್ನು ಕೇರಳ ರಾಜ್ಯದಂತೆ ನಮ್ಮಲ್ಲೂ ನಿಷೇಧಿಸಬೇಕೇ?

ಜನಾಭಿಪ್ರಾಯ:

ಹೌದು	ಇಲ್ಲ
100%	0%

ಪ್ಯಾರಾ ಶೂಟಿಂಗ್: ಕರ್ನಾಟಕಕ್ಕೆ ಮೂರು ಪದಕ

ಹುಬ್ಬಳ್ಳಿ: ಕರ್ನಾಟಕದ ಸ್ಪರ್ಧಿಗಳು ನವದೆಹಲಿಯ ಕರ್ಣಿಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ಬುಧವಾರ ಮುಕ್ತಾಯವಾದ 2ನೇ ರಾಷ್ಟ್ರೀಯ ಪ್ಯಾರಾ ಶೂಟಿಂಗ್ ಚಾಂಪಿಯನ್‌ಷಿಪ್‌ನ ವೈಯಕ್ತಿಕ ವಿಭಾಗದಲ್ಲಿ ಎರಡು ಚಿನ್ನ ಮತ್ತು ತಂಡ ವಿಭಾಗದಲ್ಲಿ ಒಂದು ಕಂಚು ಗೆದ್ದುಗೊಂಡಿದ್ದಾರೆ.

ಪುರುಷರ 10 ಮೀಟರ್ ಏರ್ ರೈಫಲ್ ವಿಭಾಗದ ಸ್ಟ್ಯಾಂಡಿಂಗ್ ಎಸ್‌ಎಚ್–2 ಸ್ಪರ್ಧೆಯಲ್ಲಿ ಶ್ರೀಹರ್ಷ ಆರ್. ದೇವರಡ್ಡಿ (ಒಟ್ಟು 629.8 ಅಂಕ) ಮೊದಲ ಚಿನ್ನ ಗೆದ್ದರು. 10 ಮೀಟರ್ ಏರ್ ರೈಫಲ್‌ನ ಪ್ರೋನ್ ಮಿಕ್ಸ್ ಸ್ಪರ್ಧೆಯಲ್ಲಿ (629.6) ಎರಡನೇ ಚಿನ್ನದ ಒಡೆಯರಾದರು.

ಮಿಶ್ರ ವಿಭಾಗದ 10 ಮೀಟರ್ ಏರ್ ರೈಫಲ್ ಎಸ್‌ಎಚ್ 1 ಸ್ಪರ್ಧೆಯಲ್ಲಿ ಜ್ಯೋತಿ ಸಣ್ಣಕ್ಕಿ (625), ಸಚಿನ್ ಸಿದ್ದಣ್ಣನವರ (618.3) ಹಾಗೂ ರಾಕೇಶ ನಿಡಗುಂದಿ (612.4) ಅವರನ್ನು ಒಳಗೊಂಡ ಕರ್ನಾಟಕ ತಂಡ ಕಂಚು ಗೆದ್ದುಕೊಂಡಿತು. ಒಟ್ಟು 1,856 ಅಂಕಗಳನ್ನು ಕಲೆಹಾಕಿತು. ಹರಿಯಾಣ (ಒಟ್ಟು 1,861) ಹಾಗೂ ರಾಜಸ್ಥಾನ (1,858) ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಗಳಿಸಿದರು.



ಶ್ರೀಹರ್ಷ ದೇವರೆಡ್ಡಿ

ಪದಕಗಳನ್ನು ಗೆದ್ದ ರಾಜ್ಯದ ಎಲ್ಲಾ ಸ್ಪರ್ಧಿಗಳು ಹುಬ್ಬಳ್ಳಿಯವರು ಎನ್ನುವುದು ವಿಶೇಷ.

ಕ್ರಿಕೆಟ್: ನಿಕಿನ್ ಶತಕ; ವೈಶಾಖ್‌ಗೆ ಐದು ವಿಕೆಟ್

ಬೆಂಗಳೂರು: ನಿಕಿನ್ ಜೋಸ್ ಗಳಿಸಿದ ಸೊಗಸಾದ ಶತಕದ ನೆರವಿನಿಂದ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ದೆಹಲಿ ಜಿಲ್ಲಾ ಕ್ರಿಕೆಟ್ ಸಂಸ್ಥೆಯ ತಂಡದ ವಿರುದ್ಧ ಉತ್ತಮ ಮೊತ್ತ ಗಳಿಸಿತು.

ಜೈಪುರದ ಸವಾಯ್ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಬುಧವಾರ ಕರ್ನಾಟಕ ತಂಡವು 76 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು 317 ರನ್ ಗಳಿಸಿತು. 138 ಎಸೆತಗಳನ್ನು ಎದುರಿಸಿದ ನಿಕಿನ್ ಇನಿಂಗ್ಸ್‌ನಲ್ಲಿ 17 ಬೌಂಡರಿಗಳಿದ್ದವು. ಕಿಶನ್ ಎಸ್. ಬೆದಾರೆ (ಬ್ಯಾಟಿಂಗ್ 70) ಮತ್ತು ಬಿ.ಆರ್. ಶರತ್ (64) ಕೂಡ ಅರ್ಧಶತಕಗಳ ಕಾಣಿಕೆ ನೀಡಿದರು.

ಇದಕ್ಕೂ ಮೊದಲು ಬ್ಯಾಟ್ ಮಾಡಿದ್ದ ದೆಹಲಿ ತಂಡವು 313 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತ್ತು. ವೈಶಾಖ್ ವಿಜಯಕುಮಾರ್ ಐದು ವಿಕೆಟ್ ಗಳಿಸಿ ಪರಿಣಾಮಕಾರಿ ಎನಿಸಿದರು.

ಸಂಕ್ಷಿಪ್ತ ಸ್ಕೋರು: ದೆಹಲಿ ಜಿಲ್ಲಾ ಕ್ರಿಕೆಟ್ ಸಂಸ್ಥೆ: 99.4 ಓವರ್‌ಗಳಲ್ಲಿ 313 (ದೇವ್ ಲಾಕ್ರಾ 37, ಸುಮಿತ್ ಮಾಥುರ್ 24; ವೈಶಾಖ್ ವಿಜಯಕುಮಾರ್ 53ಕ್ಕೆ 5, ವಿದ್ವತ್ ಕಾವೇರಪ್ಪ 60ಕ್ಕೆ 2). ಕರ್ನಾಟಕ: 76 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 317 (ಬಿ.ಆರ್. ಶರತ್ 64, ನಿಕಿನ್ ಜೋಸ್ 108, ಕಿಶನ್ ಎಸ್. ಬೆದಾರೆ ಬ್ಯಾಟಿಂಗ್ 70, ಶುಭಾಂಗ್ ಹೆಗ್ಡೆ ಬ್ಯಾಟಿಂಗ್ 46).



ALVA'S PU COLLEGE
VIDYAGIRI, MOODUBIDIRE - 574 227
FACULTY REQUIRED
PHYSICS | CHEMISTRY
MATHEMATICS | BOTANY | ZOOLOGY
QUALIFICATION:
M.Sc., M.Tech or B.Tech from IIT's/ NIT's
ELIGIBILITY:
Minimum 5 years of experience in NEET, JEE (mains and advanced)/CET training.
Selection based on written test and Demonstration
ENGLISH
Qualification: MA in English
Candidates send your updated bio data to info@alvas.org within 7 days

ಲೈಂಗಿಕ ಸಮಸ್ಯೆ

ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.
ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ.
02262676816



ಸ್ಕೂಲ್ ಶುರು! ಹಾರ್ಲಿಕ್ಸ್ ಶುರು!
ನಿಮ್ಮ ಮಗು ಮತ್ತೆ ಶಾಲೆಗೆ ಹೊರಟಾಗ, ಪ್ರತಿ ದಿನ ನಿಮ್ಮ ಆತ್ಮವಿಶ್ವಾಸದ ಕಪ್‌ನೊಂದಿಗೆ ಕಳುಹಿಸಿ. ಒಂದು ಕಪ್ ಹಾರ್ಲಿಕ್ಸ್‌ನಲ್ಲಿದೆ, ಐರನ್, ಕ್ಯಾಲ್ಶಿಯಂ ಮತ್ತು ವಿಟಮಿನ್ ಸಿಯಂತಹ ಪೋಷಕಾಂಶ, ಅದು ದಿನವಿಡೀ ಅವಳನ್ನು ಪೋಷಿಸಲು ಸಹಾಯ ಮಾಡುತ್ತದೆ.
ಸೃಜನಾತ್ಮಕ ದೃಶ್ಯೀಕರಣ. ಹಾರ್ಲಿಕ್ಸ್ ದೈನಂದಿನ ಆಹಾರದ ಭಾಗವಾಗಿ ಸೇವಿಸಬೇಕಾದ ಪೌಷ್ಟಿಕ ಪಾನೀಯವಾಗಿದೆ.



ನಿಮ್ಮ ಕಣ್ಣುಗಳಿಗೆ ನೈಸರ್ಗಿಕ ಐ ಮಂತ್ರ ನೀಡಿರಿ
ಐ ಮಂತ್ರ
ಐ ಮಂತ್ರ ಐ ಡ್ರಾಪ್ಸ್ ಉತ್ಪನ್ನವನ್ನು ಗುಲಾಬಿ, ಬಾಸಿಲ್, ಗೂಸ್‌ಬೆರ್ರಿ, ಬೇವು, ಪುದಿನ, ಜೇನು ಮುಂತಾದ 12 ಆಯುರ್ವೇದಿಕ ಮೂಲಿಕೆಗಳ ಸೂತ್ರೀಕರಣದಿಂದ ತಯಾರಿಸಲಾಗಿದೆ. ಇದು ಒತ್ತಡ ಮತ್ತು ಆಯಾಸ ನಿವಾರಣೆಗೆ ಸಹಕಾರಿಯಾಗಿದೆ, ದಣಿದ ಕಣ್ಣುಗಳಿಗೆ ತಾಜಾತನ ಕೂಡ ಒದಗಿಸುತ್ತದೆ. ಇದರಲ್ಲಿನ ಆಯುರ್ವೇದಿಕ ಅಂಶಗಳಿಂದಾಗಿ, ಇದು ಯಾವುದೇ ಅಡ್ಡಪರಿಣಾಮ ಬೀರುವುದಿಲ್ಲ.
ಸಂಪೂರ್ಣ ಸ್ವದೇಶಿ
ಸಂಪೂರ್ಣ ಆಯುರ್ವೇದಿಕ
#VocalforLocal
Karnataka S.S.: Rakesh Enterprises (Banglore) : 23579251, Shree Rama sales (Yellapur) : 9449138897, 9845149088, Bagalkot : 9448227557, 9743831913, 9449624037, Bangalore : 9845474878, 26617033, 9449723416, 9448081790, 22257385, 26677013, 22874575, 9449647135, 22235533, 9036021900, 9845350230, 9448219410, 8147573584, 8022870983, 8050741006, 22876452, Belgaum : 4206784, 4203187, 2462656, 9243219520, 4205691, 9902713070, 9916313433, Bellary : 272810, 274640, 9844059284, 227195, Bidar : 230200, 9902237421, Bijapur : 9343234482, 9036542764, 9035107399, Chikkaballapura : 9845616394, 9980420024, 9845366649, 9845623253, Chikmagalur : 9242899048, Chitradurga : 9880031266, Dakshina Kannada : 9480842900, 2496963, 9844077991, 9480842900, 9448452134, 9739641159, 9448123933, Davanagere : 295021, 9880708064, 235741, 9845035121, Dharwad : 2221201, 2221331, 4258371, 2221344, 9900430413, Gadag : 9343938893, Gulbarga : 9845808570, 9343834519, 9242239281, 8088175001, 9449618981, Hassan : 9448957465, 9448885697, Haveri : 9844323973, 8147498820, 9448232120, 9739144449, Hubli : 9449068491, Kolar : 224583, Koppal : 220713, Mandya : 223951, Mysore : 8214000156, 9980615431, 8050655443, Raichur : 9900932939, 9880336111, 9983661742, Ramanagara : 9686815278, Shimoga : 222642, 270738, 271692, 228944, 9480473867, Tumkur : 4014475, 9632446447, Udupi : 9483153633, 9483153633, 9880143804, Uttara Kannada : 9916250217, 9980872214, Vijayapura : 8352258886